ಶ್ರೀ ವಾಟಾಳ್ ನಾಗರಾಜ್ : ತಾವು ಯಾರಿಂದ ಉತ್ತರ ಕೊಡಿಸುತ್ತೀರಿ ಎಂದು ನನಗೆ ಅರ್ಥವಾಗಲಿಲ್ಲ. ಸರ್ಕಾರ ಕ್ರಿಕೆಟ್ ಸಂಸ್ಥೆಗೆ ಕ್ರೀಡಾಂಗಣದ ಜಾಗವನ್ನು ಕೊಟ್ಟಿದೆ ಹಾಗೂ ಇನ್ನಿತರ ಸವಲತ್ತುಗಳನ್ನೂ ಕೂಡ ಕೊಟ್ಟಿದೆ. ನಾನು ಆ ಸಂಸ್ಥೆ ಬಗ್ಗೆ ಕೆಟ್ಟದಾಗಿ ಆಪಾದನೆ ಏನೂ ಮಾಡುತ್ತಿಲ್ಲ. ವೈಯುಕ್ತಿಕವಾಗಿ ನನ್ನ ಅಭಿಪ್ರಾಯವೇನೆಂದರೆ, ಕ್ರಿಕೆಟ್ ಜನಸಾಮಾನ್ಯರ ಆಟವೇ ಹೊರತು ಶ್ರೀಮಂತರ ಆಟವಲ್ಲ. ಆದ್ದರಿಂದ ಸರ್ಕಾರ ಕೂಡಲೇ ಈ ದಿಸೆಯಲ್ಲಿ ಕ್ರಮ ತೆಗೆದುಕೊಂಡು ಈ ಸಮಸ್ಯೆಗೆ ಪರಿಹಾರ ಒದಗಿಸುವುದು ಒಳ್ಳೆಯದು ಎಂಬುದು ನನ್ನ ಪ್ರಾಮಾಣಿಕವಾದ ಚಿಂತನೆಯಾಗಿದೆ.

ಶ್ರೀ ಎಂ.ಪಿ.ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೇ, ನಾನು ಇದರ ಬಗ್ಗೆ ಸಂಬಂಧಪಟ್ಟ ಇಲಾಖೆಯವರ ಜೊತೆಗೆ ಮಾತನಾಡಿ ಸಂಜೆಯೊಳಗಾಗಿ ಇದಕ್ಕೆ ಉತ್ತರವನ್ನು ಕೊಡಿಸುತ್ತೇನೆ.

6. ಶಾಸನ ರಚನಾ ಕಾರ್ಯಕಲಾಪಗಳು

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು ಬೆಂಗಳೂರು
ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ 1999

ಪರ್ಯಾಲೋಚನಾ ಪ್ರಸ್ತಾವ

ಶ್ರೀ ವಿ. ಸೋಮಣ್ಣ (ಬೆಂಗಳೂರು ನಗರಾಭಿವೃದ್ಧಿ ಸಚಿವರು) : ಮಾನ್ಯ ಉಪಾಧ್ಯಕ್ಷರೇ, 1999 ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿದೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು.

ಶ್ರೀ ವಿ.ಸೋಮಣ್ಣ (ಬೆಂಗಳೂರು ನಗರಾಭಿವೃದ್ಧಿ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಬೆಂಗಳೂರು ನಗರ ಬೆಳೆಯುತ್ತಿರುವ ನಗರ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸುಮಾರು ಬಡಾವಣೆಗಳನ್ನು ಮಾಡುವ ಉದ್ದೇಶದಿಂದ ಹಲವಾರು ಕಡೆಗಳಲ್ಲಿ ಜಮೀನನ್ನು ಸ್ವಾಧೀನಪಡಿಸಿಕೊಂಡಿತ್ತು. ಕೆಲವು ಕಡೆ ಹಾಗೆ ಸ್ವಾಧೀನ ಪಡಿಸಿಕೊಂಡಂತಹ ಜಮೀನುಗಳಲ್ಲಿ ಲೇಔಟ್‌ಗಳನ್ನು ರಚಿಸದೇ ಹಾಗೆಯೇ ಬಿಡಲಾಗಿತ್ತು. ಅಂತಹ ಜಾಗಗಳಲ್ಲಿ ಬಹುತೇಕ ಖಾಸಗಿ ವ್ಯಕ್ತಿಗಳು ರೆವಿನ್ಯೂ ಪ್ಯಾಕೆಟ್‌ನ ಮನೆಗಳನ್ನು ಕಟ್ಟಿಕೊಂಡು ಸುಮಾರು ವರ್ಷಗಳಿಂದ ವಾಸ ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ 1994ರಲ್ಲಿ ಸನ್ಮಾನ್ಯ ವೀರಪ್ಪಮೊಯ್ಲಿಯವರು ಮುಖ್ಯಮಂತ್ರಿಗಳಾಗಿದ್ದಾಗ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ತಿದ್ದುಪಡಿಯನ್ನು ತಂದು 38(ಸಿ) ಎಂಬ ಸೆಕ್ಷನ್ ಅನ್ನು ಹೊಸದಾಗಿ ಸೇರಿಸಿ, 1986ಕ್ಕೆ ಹಿಂದೆ ಯಾರ‍್ಯಾರು ಈ ರೀತಿ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೋ ಅಂತಹ ಮನೆಗಳಿಗೆ ಖಾತೆ ಕಂದಾಯಗಳನ್ನು ಮಾಡುವುದಕ್ಕೆ ರೀ-ಕನ್‌ವೇ ಮಾಡಬಹುದು ಎಂದು ಮಾಡಲಾಯಿತು. 42 ಲೇಔಟ್‌ಗಳ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಮನೆಗಳನ್ನು ಕಟ್ಟಿಕೊಂಡವರು ಎಂದು ಗುರುತಿಸಲಾದ 31,961 ಕೇಸ್‌ಗಳಲ್ಲಿ 15,050 ಕೇಸ್‌ಗಳು ಮಾತ್ರ ಆಗ ಡಿಸ್ಪೋಸಲ್ ಆದವು. ಈ ತಿದ್ದುಪಡಿ ವಿಧೇಯಕ ತಂದಂತಹ ಸಂದರ್ಭದಲ್ಲಿ 1986ಕ್ಕೆ ಹಿಂದೆ ಮನೆಗಳನ್ನು ಆ ರೀತಿ ಕಟ್ಟಿಕೊಂಡವರಿಗೆ ಮಾತ್ರ ಇದು ಅನ್ವಯವಾಯಿತು. ಉಳಿದವುಗಳಿಗೆ ಅದು ಅನ್ವಯವಾಗಿರಲಿಲ್ಲ. ಇದರಿಂದಾಗಿ ಬೆಂಗಳೂರು ನಗರದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಅಕ್ವೈರ್ ಮಾಡಿಕೊಂಡಿದ್ದರೂ ಕೂಡ ಆ ಜಾಗದಲ್ಲಿ ಬೇರೆ ಖಾಸಗಿ ವ್ಯಕ್ತಿಗಳು ಲೇಔಟ್ ರಚಿಸಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿರುವ

ಪ್ರಕರಣಗಳು ಇನ್ನೂ ಸಾಕಷ್ಟು ಇವೆ. ಬಿಡಿಎ ಸ್ವಾಧೀನಪಡಿಸಿಕೊಂಡ ಜಾಗವನ್ನು ಖಾಸಗಿ ವ್ಯಕ್ತಿಗಳು 30x40, 40x60 ಮತ್ತು 20x30 ಈ ರೀತಿಯ ಅಳತೆಯ ಸೈಟುಗಳನ್ನಾಗಿ ವಿಂಗಡಿಸಿ ವಿಶೇಷವಾಗಿ ಮಧ್ಯಮ ವರ್ಗದವರಿಗೆ ಮಾರಿದ್ದಾರೆ. ಅವರು ಅಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ. ಇವು ಅನಧಿಕೃತ ನಿರ್ಮಾಣಗಳಾದ್ದರಿಂದ ಬಿಡಿಎ ನವರಿಗಾಗಲಿ ಬೆಂಗಳೂರು ಮಹಾನಗರಪಾಲಿಕೆಗಾಗಲಿ ಇವರಿಂದ ತೆರಿಗೆಯನ್ನು ವಸೂಲಿ ಮಾಡಿ ಅವರಿಗೆ ಬೇಕಾಗಿರತಕ್ಕ ನಾಗರೀಕ ಸೌಲಭ್ಯಗಳನ್ನು ಕೊಡುವುದಕ್ಕೆ ಮತ್ತು ಅವರಿಗೆ ಅವರ ಸೈಟಿನ ಸರಿಯಾದ ರಿಲೆವೆಂಟ್ ಡಾಕ್ಯುಮೆಂಟ್ಸ್ ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಬೆಂಗಳೂರು ನಗರದ ಮಧ್ಯಭಾಗದಲ್ಲಿ ಇರತಕ್ಕಂಥ ಬಹುತೇಕ ಬಡಾವಣೆಗಳಲ್ಲಿ ಒಂದು ಕಡೆ ಬಿಡಿಎನವರು ಬಡಾವಣೆ ರಚಿಸಿ ಅವುಗಳನ್ನು ಡೆವಲಪ್ ಮಾಡಿ ಅಲ್ಲಿರುವವರಿಗೆ ಎಲ್ಲಾ ತರಹದ ನಾಗರೀಕ ಸೌಲಭ್ಯಗಳನ್ನು ಒದಗಿಸಿದ ಉದಾಹರಣೆ ಇದ್ದರೆ ಅದೇ ಬಡಾವಣೆಯ ಇನ್ನೊಂದು ಕಡೆ ಮನೆಗಳನ್ನು ಅನಧಿಕೃತವಾಗಿ ಕಟ್ಟಿಕೊಂಡು ಜನರು ವಾಸ ಮಾಡುತ್ತಿರುವ ಪರಿಸ್ಥಿತಿ ಇದೆ. ಅದರಲ್ಲಿ ಖಾತೆ, ಕಂದಾಯ, ಸರಿಯಾದ ದಾಖಲಾತಿಗಳು ಇರುವುದಿಲ್ಲ. ಇಂತಹ ಬಡಾವಣೆಗಳು ಬಹುತೇಕ ಬೆಂಗಳೂರು ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿರತಕ್ಕಂಥ ಬಡಾವಣೆಗಳ ಪಕ್ಕದಲ್ಲೇ ಇವೆ. ಸುಮಾರು 35 ಸಾವಿರ ಈ ರೀತಿಯಾದ ಪ್ರಕರಣಗಳನ್ನು ನಾವು ಈಗಾಗಲೇ ಗುರುತಿಸಿದ್ದೇವೆ. ಹೀಗೆ ಗುರುತಿಸಿರುವಂತಹ ಪ್ರಕರಣಗಳಲ್ಲಿ ಬಹುತೇಕ ಜಾಗಗಳು ಇವತ್ತು ನಗರಪಾಲಿಕೆ ವ್ಯಾಪ್ತಿಗೆ ಸೇರಿದ್ದರೆ, ಕೆಲವು ಬಿಡಿಎ ವ್ಯಾಪ್ತಿಯಲ್ಲಿವೆ. ನಗರಪಾಲಿಕೆಯಲ್ಲಿನ ರೆವಿನ್ಯೂ ಪಾಕೇಟ್‌ಗಳಿಗೆ ಈಗಾಗಲೇ ಕಾರ್ಪೊರೇಷನ್ನಿನವರು ಖಾತೆ ಮಾಡಿ ಕೊಡುತ್ತಿದ್ದಾರೆ. ಬಿಡಿಎನವರು ಜಮೀನು ಸ್ವಾಧೀನ ಮಾಡಿಕೊಂಡ ತಕ್ಷಣವೇ ಸೈಟುಗಳನ್ನಾಗಿ ವಿಂಗಡಿಸಿ ಬಡಾವಣೆಗಳನ್ನು ರಚಿಸಿ ಅಲ್ಲಿ ಯಾವುದೇ ಅನಧಿಕೃತ ಕಟ್ಟಡಗಳು ಬರುವುದಕ್ಕೆ ಅವಕಾಶ ಕೊಡದೇ ಹೋಗಿದ್ದರೆ ಈ ರೀತಿಯ ಪರಿಸ್ಥಿತಿಯು ಉದ್ಭವಿಸುತ್ತಿರಲಿಲ್ಲ. ಆದರೆ ಅನಧಿಕೃತ ಕಟ್ಟಡಗಳು ಈಗಾಗಲೇ ನಿರ್ಮಾಣವಾಗಿ ಸುಮಾರು ಜನ ಅಲ್ಲಿ ವಾಸ ಮಾಡುತ್ತಿದ್ದಾರೆ. ಇವತ್ತು ಅವರನ್ನು ತೆರವುಗೊಳಿಸುವುದು, ಅವರ ಮನೆಗಳನ್ನು ಕೆಡವುದು ಈ ರೀತಿಯಾದ ಪ್ರಕರಣಗಳು ನಡೆಯುತ್ತಿವೆ. ಈ ಅಂಶಗಳನ್ನೆಲ್ಲಾ ಮನಗಂಡು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯಲ್ಲಿನ ಬಡಾವಣೆಗಳಲ್ಲಿರುವ ಇಂತಹ ಬಹುತೇಕರಿಗೆ ಅನಾನುಕೂಲಗಳಾಗುವುದು ಬೇಡವೆಂದು ನಾವು ಈ ತಿದ್ದುಪಡಿ ವಿಧೇಯಕವನ್ನು ತರುತ್ತಿದ್ದೇವೆ. ಈ ರೀತಿಯಾಗಿ ಈ ಸೈಟನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಅಲಾಟ್ ಮಾಡುವುದು ಅಲ್ಲಿ ಯಾರೋ ಹೋದಾಗ ಆ ಜಾಗದಲ್ಲಿ ಈಗಾಗಲೇ ಮನೆಗಳನ್ನು ಕಟ್ಟಿಕೊಂಡು ವ್ಯವಸ್ಥಿತವಾಗಿ ಇರತಕ್ಕಂತಹ ಅನೇಕ ಪ್ರಕರಣಗಳನ್ನು ಗುರುತಿಸಿ ಮಾನವೀಯತೆಯ ದೃಷ್ಟಿಯಿಂದ ಒಂದು ಕಡೆ ಆದರೆ, ಇನ್ನೊಂದು ಕಡೆ ಕಾನೂನನ್ನು ಸರಳೀಕರಣಗೊಳಿಸುವುದು. ಇನ್ನು ಮುಂದೆ ಈ ರೀತಿ ಆಗಬಾರದು ಎಂದು ನಾವು ಕಾನೂನನ್ನು ಇವತ್ತು ತಂದಿರತಕ್ಕಂಥದ್ದು. ಹಿಂದೆ 1986ರಲ್ಲಿ ಆದಂತಹ ಸಂದರ್ಭದಲ್ಲಿ ಬಹುತೇಕ ಜನರಲ್ ಪವರ್ ಆಫ್ ಸ್ಟ್ಯಾಂಪ್ ಡ್ಯೂಟಿಯಾಗಲಿ, ಯಾವುದೇ ಟ್ಯಾಕ್ಸ್ ಬರುತ್ತಿಲ್ಲ. ನಾವು ಎಲ್ಲಾ ಮನೆಗಳನ್ನೂ ಕೂಡ ಒಡೆದು ಹಾಕಬೇಕಾದರೆ ಕಷ್ಟಸಾಧ್ಯವೆಂದು ಅರಿತುಕೊಂಡು ಈ ಬಿಲ್ ತಂದಿದ್ದೇವೆ. ಈ ಬಿಲ್ ಉದ್ದೇಶ ಇಷ್ಟೇ. ಯಾರು ಇಂಡಿವಿಜ್ಯುಯಲ್ಲಾಗಿ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ, ಅಲ್ಲಿ ಬಡಾವಣೆ ಪೂರ್ತಿ ಬೆಳೆದಿದೆ. ಬಿಡಿಎನವರು ಅಲ್ಲಿ ಫಿಸಿಕಲ್ಲಾಗಿ ಯಾವ ವ್ಯಕ್ತಿಗಳು

ವಾಸವಾಗಿದ್ದಾರೆ, ಅಂಥವರ ಮೇಲೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಅಕ್ವಿಸಿಷನ್ ಕ್ರಮ ತೆಗೆದುಕೊಂಡಿದ್ದರೂ ಅವರ ಹ್ಯಾಂಡ್ ಓವರ್‌ನಲ್ಲಿ ಇಲ್ಲದೇ ಇರುವುದನ್ನು ಅರಿತುಕೊಂಡು ಈ ತಿದ್ದುಪಡಿ ತಂದಿದ್ದೇವೆ. ಬೆಂಗಳೂರು ನಗರದ ಅನೇಕ ಭಾಗಗಳಲ್ಲಿ ಬಹುತೇಕ ಜನರು ಈಗಾಗಲೇ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ. ಹಾಗೆ ವಾಸ ಮಾಡತಕ್ಕಂತಹವರಿಗೆ ನಾವು ಟೈಟಲ್ ಡೀಡ್ ಎಂದು ಕೊಡತಕ್ಕಂಥದ್ದು ಮತ್ತು ನಾವು ಅವರಿಗೆ ರಿಕನ್ವೇ ಮಾಡುವುದರಿಂದ ನಗರಪಾಲಿಕೆಗೆ ಇಲ್ಲ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಟ್ಯಾಕ್ಸ್ ಬರತಕ್ಕಂಥದ್ದು ಇವೆಲ್ಲಕ್ಕಿಂತ ಹೆಚ್ಚಾಗಿ ಮೂಲಭೂತ ಸೌಕರ್ಯ ಏನಿದೆ, ಕುಡಿಯುವ ನೀರು, ಒಳಚರಂಡಿ ಮತ್ತು ಬೀದಿ ದೀಪ, ರಸ್ತೆ ಈ ಕೆಲಸಗಳನ್ನು ಮಾಡುವುದು. ಇದು ಮಾಡಲಿಲ್ಲ ಎಂದರೆ ಒಂದು ರೀತಿ ಬೆಳೆದುಕೊಂಡು ಮುಂದೆ ಹೋಗಿ ಇದು ಯಾವತ್ತೂ ಕೂಡ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಒಂದು ಮನೆ ಕಟ್ಟುತ್ತಿದ್ದಾರೆ ಅಂದರೆ ಅಲ್ಲಿಗೆ ಹೋಗಿ ಒಡೆದು ಹಾಕುತ್ತಾರೆ. ಸಾರ್ವಜನಿಕವಾಗಿ ಇರತಕ್ಕಂತಹ ಬಹುತೇಕ ಕಡೆ ಯಾರು ಜೋರಾಗಿ ಇರುತ್ತಾರೆ, ಅವರು ಅಲ್ಲಿ ಮನೆಗಳನ್ನು ಕಟ್ಟುತ್ತಾರೆ. ಯಾರು ಜೋರಾಗಿರುವುದಿಲ್ಲ ಅಲ್ಲಿ ತೊಂದರೆಯಾಗುತ್ತದೆ. ಇಂಥದನ್ನು ಅರಿತು, ಮಧ್ಯಮ ವರ್ಗದ ಸುಮಾರು ಜನ ಅಲ್ಲಿ ಈಗಾಗಲೇ ವಾಸ ಮಾಡುತ್ತಿದ್ದಾರೆ. ಅಂತಹವರಿಗೋಸ್ಕರ ಈ ವಿಧೇಯಕ ನಾವು ತಂದಿದ್ದೇವೆ. ಈ ವಿಧೇಯಕದ ಉದ್ದೇಶ ಇಷ್ಟೆ. ಇದಕ್ಕೆ ಒಂದು ಟೈಮ್ ಬೌಂಡ್ ಫಿಕ್ಸ್ ಮಾಡಿ ಕೇವಲ ಎರಡು ತಿಂಗಳಲ್ಲಿ ಎಷ್ಟು ಇದೆ ಎಂದು ನಾವು ಸರ್ವೇ ಮಾಡಿದ್ದೇವೆ. ಸರ್ವೇ ಮಾಡಿರುವುದು ಪ್ರತಿಯೊಂದು ಕೂಡ ಇಂಡಿವಿಜ್ಯುಯಲ್ಲಾಗಿ ವಿಶೇಷವಾಗಿ ಎಕರೆಗಟ್ಟಲೆ ಯಾವುದೇ ಕಾರಣಕ್ಕೂ ನಾವೂ ಕೂಡ ರೀಕನ್ವೇ ಮಾಡುವುದಾಗಲಿ, ಮತ್ತೊಂದಾಗಲಿ ಇಲ್ಲ. ಇವತ್ತು ಕೆಲವು ಬಹುತೇಕ ಖಾಸಗಿ ಸೊಸೈಟಿಗಳು ಒಂದು ಕಡೆ ಅಕ್ವಿಸಿಷನ್ ಮಾಡಿರುತ್ತಾರೆ. ಮತ್ತೊಂದು ಕಡೆ ಬಿಡಿಎನವರು ಅಕ್ವಿಸಿಷನ್ ಮಾಡಿರುತ್ತಾರೆ. ಈ ಇಬ್ಬರನ್ನೂ ಬಿಟ್ಟು ಮೂರನೆಯವರು ಯಾರು ಲ್ಯಾಂಡ್ ಲಾರ್ಡ್ ಎಂದು ಕೆಲವು ಸೈಟ್‌ಗಳನ್ನು ಪಡೆದು ಮನೆಗಳನ್ನು ಕಟ್ಟಿರುತ್ತಾರೆ. ಇದರಲ್ಲಿ ಯಾರು ಇದ್ದಾರೆ ಯಾರು ಇಲ್ಲ ಎನ್ನುವುದಕ್ಕಿಂತ ಒಂದು ಟೈಟಲ್ ಡೀಡ್ ಕೊಡುವುದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಪ್ರಾಯಶಃ ಹತ್ತಾರು ವರ್ಷಗಳಿಂದ ಈ ರೀತಿಯಾಗಿ ತೊಂದರೆ ಅನುಭವಿಸುತ್ತಿರತಕ್ಕಂತಹ ಮಧ್ಯಮ ವರ್ಗದವರಿಗೆ ಈ ವಿಧೇಯಕದಿಂದ ಅವರು ಸುಲಭವಾಗಿ ಉಸಿರು ಆಡತಕ್ಕಂಥದ್ದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ನಾವು ಈ ವಿಧೇಯಕವನ್ನು ತಂದಿದ್ದೇವೆ. ಏನಾದರೂ ಕ್ಲಾರಿಫಿಕೇಶನ್ ಇದ್ದರೆ ದಯಮಾಡಿ ತಿಳಿಸಿದರೆ ನನ್ನ ಬಳಿ ಇರತಕ್ಕಂತಹ ಮಾಹಿತಿಯನ್ನು ಕೊಡುವುದಕ್ಕೆ ತಯಾರಾಗಿದ್ದೇನೆ.

ಶ್ರೀ ಬಿ.ಬಿ.ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಉಪಾಧ್ಯಕ್ಷರೆ, ಬಹಳ ಮಹತ್ತರವಾದ ಒಂದು ಬಿಲ್ಲನ್ನು ಇವತ್ತು ಸಭೆಯ ಮುಂದೆ ತಂದಿದ್ದಾರೆ. ಒಂದು ಕಡೆ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯ ಅಡ್ವರ್ಟೈಸ್‌ನಂತೆ ಲಕ್ಷಾಂತರ ಜನ ಅಪ್ಲಿಕೇಷನ್‌ಗಳನ್ನು ಹಾಕಿ, ಇವತ್ತು ಅಲ್ಲ, ನಾಳೆ ನಮಗೆ ನಿವೇಶನ ಸಿಗಬಹುದು ಎಂದು ಹತ್ತಾರು ವರ್ಷಗಳಿಂದ ಕಾಯುತ್ತಾ ಕುಳಿತಿರತಕ್ಕಂತಹ ದೃಶ್ಯ ಒಂದು ಕಡೆ. ಅಪ್ಲಿಕೇಷನ್ ಹಾಕಿ, ರಿಜಿಸ್ಟರ್ ಮಾಡಿಸಿ ಅನೇಕ ತರಹದ ಅಟೆಂಪ್ಟ್ ಮಾಡಿದ್ದರೂ ಕೂಡ ಇದುವರೆಗೆ ಮಂಜೂರು ಆಗದೇ ಇರುವ ದೃಶ್ಯ ಮತ್ತೊಂದು ಕಡೆ. ಎಷ್ಟೋ ಜನ ಅಪ್ಲಿಕೇಷನ್ ಹಾಕಿ ರಿಜಿಸ್ಟರ್ ಮಾಡಿಸಿದ್ದಾರೆ ಎನ್ನುವ ಆಧಾರದ ಮೇಲೆ ನೀವು ಬಡಾವಣೆಗಳನ್ನು ವಿಸ್ತರಣೆ

ಮಾಡುವುದಕ್ಕೋಸ್ಕರ ಅಕ್ವೈರ್ ಮಾಡಿದ್ದೀರಿ. ಅಕ್ವೈರ್ ಮಾಡಿ ನೋಟಿಫಿಕೇಷನ್ ಮಾಡಿ ಪೊಸಿಷನ್‌ಗೆ ತೆಗೆದುಕೊಂಡಿದ್ದೀರಿ. ಒಂದಲ್ಲ ಒಂದು ದಿವಸ ನಮಗೆ ನಿವೇಶನ ಸಿಗುತ್ತದೆ ಎಂದು ಆಶಾಭಾವನೆ ಇಟ್ಟುಕೊಂಡು ಜನ ಒಂದು ಕಡೆ ಆದರೆ ಇನ್ನೊಂದು ಕಡೆ ಬಿಡಿಎನಿಂದ ಆಗಿರತಕ್ಕಂತಹ ದುರಾಡಳಿತದಿಂದ ಅಕ್ವೈರ್ ಆಗಿರತಕ್ಕಂತಹ ಜಮೀನಿನಲ್ಲಿ ಕೆಲವರು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಇದಕ್ಕೆ ಅಧಿಕಾರಿಗಳು ಶಾಮೀಲಾಗಿ ಅವರಿಗೆ ಪರೋಕ್ಷವಾಗಿ ಸಹಾಯ ಮಾಡಿ ಕೊಡುವುದಕ್ಕೆ ಅವಕಾಶ ಮಾಡಿ ಕೊಟ್ಟಿರತಕ್ಕಂಥದ್ದೇ ಮತ್ತೊಂದು ಕಾರಣ. ಫಿಕ್ವೀಷಿಯಸ್ ಡಾಕ್ಯುಮೆಂಟ್ಸ್ ಕ್ರಿಯೇಟ್ ಮಾಡಿ, ಅಲ್ಲಿ ಅಕ್ವೈರ್ ಆಗಿದ್ದರೂ ಕೂಡ ಅಕ್ವೈರ್ ಆಗಿಲ್ಲ ಎನ್ನುವ ರೀತಿಯಲ್ಲಿ ಜನಗಳಿಗೆ ತೋರಿಸಿ ನಿವೇಶನಗಳನ್ನು, ಲೇಔಟ್ ಮಾಡಿ ರೆವಿನ್ಯೂ ಲೇಔಟ್ ಎಂದು ಮಾರಾಟ ಮಾಡಿರತಕ್ಕಂಥದ್ದು ಇನ್ನೊಂದು ಕಡೆ. ಈ ರೀತಿ ಸಾವಿರಾರು ನಿದರ್ಶನಗಳು ನಮ್ಮ ಮುಂದೆ ಇರಬಹುದು. ನೀವು ಇವತ್ತು ಅವರಿಗೆ ಹಾಲಿ ಮನೆ ಕಟ್ಟಿಕೊಂಡು ಎಲ್ಲಾ ತರಹದ ನಾಗರೀಕ ಸೌಲಭ್ಯಗಳು ಏನು ಬೇಕು ಅವೆಲ್ಲ ಸೌಲಭ್ಯಗಳನ್ನು ಹೊಂದಿರತಕ್ಕಂತಹವರಿಗೆ ಕನ್‌ಫರ್ಮ್ ಮಾಡಬೇಕೆಂದು ಒಂದು ಕಡೆ ವಾದ ಆದರೆ, ಬಹಳ ವರ್ಷಗಳಿಂದ ಕಾದಿರುವವರಿಗೆ ಏನು ಮಾಡುತ್ತೀರಿ ಇದು ಒಂದು. ಇನ್ನೊಂದು ಏನಾಗುತ್ತದೆ, ನೀವು ಈ ರೀತಿಯಾಗಿ ಅಮೆಂಡ್‌ಮೆಂಟ್ ತಂದು ಸಂಪೂರ್ಣವಾಗಿ ಅಕ್ವೈರ್ ಆಗಿರತಕ್ಕಂತಹ ಜಮೀನಿನಲ್ಲಿ ಖಾಸಗಿಯಾಗಿ ಯಾರಾದರೂ ಕಟ್ಟಿದ್ದರೆ, ಅಥವಾ ಲೇಔಟ್ ಮಾಡಿದ್ದರೆ ನೀವು ಅವರಿಗೆ ನಿವೇಶನ ಕೊಡುತ್ತೇವೆಂದು ಹೇಳುವುದಾದರೆ, ಈ 12,000 13,000 ಎಕರೆ ಜಮೀನು ಏನು ಅಕ್ವೈರ್ ಆಗಿದೆ, ಅದರಿಂದ ಒಬ್ಬರಿಗೂ ಒಂದು ನಿವೇಶನ ನೀವು ಮಾಡಿಕೊಡುವುದಕ್ಕಾ ಗುವುದಿಲ್ಲ. ನೀವು ಈ ತಿದ್ದುಪಡಿ ತರುವಂತಹ ಸಂದರ್ಭದಲ್ಲಿ ಅವರ ಹಿತವನ್ನು ನೀವು ಯಾವ ರೀತಿಯಲ್ಲಿ ಕಾಪಾಡುತ್ತೀರಿ ಎನ್ನತಕ್ಕಂಥದ್ದನ್ನು ಈ ಸಭೆಯ ಗಮನಕ್ಕೆ ತರಬೇಕಾಗುತ್ತದೆ. ಇದು ಒಂದು ಮುಖ್ಯವಾದ ಅಂಶ. ಈಗಾಗಲೇ ಎಲ್ಲ ರೀತಿಯ ನಾಗರೀಕ ಸೌಲಭ್ಯಗಳನ್ನು ಅನುಭವಿಸುತ್ತಿರತಕ್ಕಂಥವರನ್ನು ಯಾವುದೇ ರೀತಿಯಲ್ಲಿ ಹೊರ ಹಾಕದೆ ಇರುವ ಸಂದರ್ಭದಲ್ಲಿ ಇದ್ದಾಗ ಅವರಿಗೆ ಯಾವ ರೀತಿ ಮಾಡುತ್ತೀರಿ ಎಂದು ಹೇಳಬೇಕಾಗುತ್ತದೆ. ಬಹಳ ವರ್ಷಗಳಿಂದ ರಿಕನ್‌ವೇ ಎಂದು ಇತ್ತು. ಹಿಂದೆ convey ಆಗಿದ್ದು ಇವತ್ತಿನವರೆಗೂ ಕೂಡ ಯಾರಿಗೂ ನಿವೇಶನ ಕೊಡುವುದಕ್ಕಾಗಿಲ್ಲ. ಈ ಕನ್‌ವೇ ನಿಂತು ಹೋಯಿತು. ಸುಪ್ರೀಂ ಕೋರ್ಟಿನ ಆದೇಶ ಕೂಡ ಇದರಲ್ಲಿ ಅಡಗಿದೆ. ಹೈಕೋರ್ಟಿನ ತೀರ್ಪು ಕೂಡ ಇದೆ. ಸಾವಿರಾರು ಕೇಸ್‌ಗಳು ಇವತ್ತು ಹೈಕೋರ್ಟ್‌ನಲ್ಲಿ ಮತ್ತು ಸುಪ್ರೀಂ ಕೋರ್ಟಿನಲ್ಲಿ ಇರುವಂತಹ ಸಂದರ್ಭದಲ್ಲಿ ಅವರು ಕೊಟ್ಟಿರತಕ್ಕಂತಹ ನಿವೇಶನ ಎಷ್ಟರ ಮಟ್ಟಿಗೆ ಫಾಲೋ ಮಾಡಿದ್ದೀರಿ? ಸುಪ್ರೀಂ ಕೋರ್ಟ್ ಆದೇಶ ಇರುವುದು ಏನು? Once the land is acquired you have to implement it. There is no question of denotification or reconveyance ಎನ್ನತಕ್ಕಂತಹ ಮಾತನ್ನು ಸುಪ್ರೀಂ ಕೋರ್ಟಿನವರು ಹೇಳಿದ್ದಾರೆ. ಅಂತಹ ಸಂದರ್ಭದಲ್ಲಿ ಅವರ ತೀರ್ಪಿನ ವಿರುದ್ಧವಾಗಿ ನೀವು ಯಾವ ರೀತಿಯಾಗಿ ಹೋಗುತ್ತೀರಿ? ನೀವು ಇವತ್ತು ತಂದಿರತಕ್ಕಂತಹ ಮಸೂದೆ ಒಂದು ದೃಷ್ಟಿಯಿಂದ ಯಾರಿಗೋ ಒಬ್ಬರಿಗೆ ಸಹಾಯ ಮಾಡಬೇಕು ಎನ್ನುವುದಾದರೆ ಒಂದು ಎಕರೆ, ಒಂದು ಗುಂಟೆ ಕೂಡ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ, ಹಾಗೆ ಮಾಡುವುದಕ್ಕೆ ಸಾಧ್ಯವಿಲ್ಲ. ಫೈನಲ್ ಅವಾರ್ಡ್ ಆಗಿರತಕ್ಕಂಥದ್ದು, ಫೈನಲ್ ನೋಟಿಫಿಕೇಷನ್ ಅಸೆಂಬ್ಲಿಯಲ್ಲಿ ಪಾಸಾಯಿತು ಎಂದು ಗೊತ್ತಾದರೆ ನಾಳೆ ಏಕಾಏಕಿ ಕಟ್ಟಡಗಳು ಬಂದು ಒಬ್ಬರಿಗೂ ನಿವೇಶನ ಸಿಗದೆ ಇರತಕ್ಕಂತಹ ಸಂದರ್ಭದಲ್ಲಿ ಇದೆ.

ನೀವು ತಿಳಿದ ಮಟ್ಟಿಗೆ ಅಷ್ಟು ಸುಲಭವಾಗಿ ನೀವು ಇದನ್ನು ಜಾರಿಗೊಳಿಸುವುದಕ್ಕೆ ಸುಲಭವಿಲ್ಲ ಎಂದು ತಾವು ಅರಿಯಬೇಕಾಗುತ್ತದೆ. ಇಲ್ಲಿ ಬಂದಿರತಕ್ಕಂತಹ ಸುಪ್ರೀಂಕೋರ್ಟ್ ಜಡ್ಜ್‌ಮೆಂಟ್ ಏನಿದೆ, ಆ ಜಡ್ಜ್‌ಮೆಂಟ್‌ಗೆ ಈ ಮಸೂದೆ ಅನ್ವಯ ಆಗುತ್ತದೆಯಾ? ಅಥವಾ ಇವತ್ತು ನೀವು ಹೀಗೆ ಮಾಡುವುದರಿಂದ ಎಷ್ಟು ಜನರಿಗೆ ಬೆನಿಫಿಟ್ ಆಗುತ್ತದೆ? ಅದರ ಕಂಡಿಷನ್ ಏನು? ಅದರ ದುರುಪಯೋಗ ಬೇರೆ ರೀತಿಯಲ್ಲಿ ಆಗಬಾರದು ಎಂಬ ಎಲ್ಲಾ ವಿಷಯಗಳನ್ನು ನೀವು ಇಲ್ಲಿ ಹೇಳಬೇಕಾಗುತ್ತದೆ. ನಾವು ಭಾವಿಸಿರುವ ರೀತಿಯಲ್ಲಿ ಇದು ಒಂದು ದೊಡ್ಡ ದಂಧೆ. ಅನೇಕ ಸೊಸೈಟಿಗಳು ಬಹಳ ವರ್ಷಗಳ ಕಾಲ ಸರ್ಕಾರದ ಮುಂದೆ ಹೋರಾಟ ಮಾಡಿ ನಿವೇಶನ ಪಡೆಯಬೇಕೆಂದು ಅಕ್ವೈರ್ ಆದ ಲ್ಯಾಂಡ್ ಮೇಲೆ ನಿವೇಶನ ಪಡಯಬೇಕೆಂದು ಖಾಸಗಿಯವರಿಗೆ ಮಾರಾಟ ಮಾಡಿರತಕ್ಕಂತಹ ಸೊಸೈಟಿಗಳು ಏನಿತ್ತು. ನೂರಾರು ಸೊಸೈಟಿಗಳ ಲಾಬಿಗೆ ಮಣಿದಿದ್ದೀರಿ ಎನ್ನುವ ಮಾತು ಬರುತ್ತದೆ. ಆ ಕೆಲಸ ಆಗಬಾರದು ಸೊಸೈಟಿಯವರಿಗೆ ಸಹಾಯ ಮಾಡುವುದಕ್ಕೆ ಹೆಚ್ಚಾಗಿ ನಿವೇಶನ ಇಲ್ಲದೇ ಇರತಕ್ಕಂತಹವರು ಯಾರಿದ್ದಾರೆ ಅವರಿಗೆ ಕೊಡಬೇಕಾಗುತ್ತದೆ. ಒಂದು ವಿಷಯ ನಾನು ಹೇಳುತ್ತೇನೆ, ಇವತ್ತು ನೀವು ಈ ದಂಧೆಯಲ್ಲಿ ಹಿಂದೆ ಇರತಕ್ಕಂತಹವರು ಎಲ್ಲರೂ ಕೂಡ ಸೊಸೈಟಿಯವರು ಇದ್ದಾರೆ. ಈ ಸೊಸೈಟಿಯವರು ಒಬ್ಬೊಬ್ಬರಿಗೆ ಹತ್ತು ಹತ್ತು ಕೊಟ್ಟಿರುತ್ತಾರೆ. ಇಪ್ಪತ್ತು ಇಪ್ಪತ್ತು ಸೈಟ್ ಕೊಟ್ಟಿರುತ್ತಾರೆ, ಮನೆ ಕೊಟ್ಟಿರುತ್ತಾರೆ. ಅವರಿಗೆ ನಿವೇಶನ ಕೊಡುವುದಕ್ಕೆ ಬರುತ್ತಾ? ಯಾವ ರೀತಿ ಕಂಡಿಷನ್ ಹಾಕುತ್ತೀರಿ ನೀವು ಎಂದು ಹೇಳಬೇಕಾಗುತ್ತದೆ. ಈ ಎಲ್ಲಾ ವಿಚಾರಗಳ ಬಗ್ಗೆ ನಾವು ವಿಮರ್ಶೆ ಮಾಡಬೇಕಾಗಿದೆ. ಇದು ತಿಳಿದುಕೊಂಡಷ್ಟು ಸುಲಭವಾಗಿಲ್ಲ. ಇದರ ಹಿನ್ನೆಲೆ ಸಾಕಷ್ಟು ಇದೆ. ಬಹಳ ವರ್ಷಗಳಿಂದ ಈ ಸೊಸೈಟಿ ಲಾಭಿಗಳು ಏನು ಪ್ರಯತ್ನ ಮಾಡುತ್ತಿವೆ. ಇವತ್ತು ಈ ಮಸೂದೆ ಬರುವ ಮುಖಾಂತರ ಯಶಸ್ವಿಯಾಗಿದ್ದಾರೆ ಎನ್ನುವ ಭಾವನೆ ಬರುತ್ತದೆ. ಅದಕ್ಕೋಸ್ಕರ ನನ್ನ ಸಲಹೆ ಏನೆಂದರೆ, ನಾನು ಬೆಂಗಳೂರಿನಲ್ಲಿ ವಾಸ ಮಾಡುತ್ತಿರತಕ್ಕಂತಹವನು ಆ ಭಾಗದಲ್ಲಿ ಜನ ಏನು ಕಷ್ಟ ಅನುಭವಿಸುತ್ತಿದ್ದಾರೆ, ಕಷ್ಟ ಏನು, ಸುಖ ಏನು, ಎಂಬುದನ್ನೆಲ್ಲ ಅರಿತವನಾಗಿ ಹೇಳಿದ್ದೇನೆ. ನೀವು ಒಂದು ಸಣ್ಣ ಕಮಿಟಿ ಮಾಡಿ, ಆ ಕಮಿಟಿ ಮುಂದೆ ಇದು ಹೋಗಿ ಎಲ್ಲಾ ವಿಷಯ ಅಲ್ಲಿ ಪರಿಶೀಲನೆಯಾದ ನಂತರ ಈ ಸಭೆಯಲ್ಲಿ ಇದರ ಅನುಮೋದನೆಯನ್ನು ತೆಗೆದುಕೊಳ್ಳುವುದು ಸೂಕ್ತ ಎಂದು ನನ್ನ ಭಾವನೆ. ಎಷ್ಟು ಹೊತ್ತು ಚರ್ಚೆಯಾದರೂ ಕೂಡ ಪರವಾಗಿಲ್ಲ, ಎಲ್ಲಾ ವಿಷಯಗಳನ್ನು ಇಟ್ಟು ಸವಿಸ್ತಾರವಾಗಿ ಚರ್ಚೆ ಮಾಡಬೇಕಾಗುತ್ತದೆ. ಇದರಲ್ಲಿ ಎರಡು ಮುಖ್ಯವಾಗಿರತಕ್ಕಂಥದ್ದು ಇದೆ. ನೀವು ಏನಾದರೂ ಈ ಮಸೂದೆ ಪಾಸ್ ಮಾಡಿದ ಸಂದರ್ಭದಲ್ಲಿ ಒಂದೇ ಒಂದು ಎಕರೆಯನ್ನು ಉಳಿಸಿಕೊಳ್ಳುವುದಕ್ಕಾಗುವುದಿಲ್ಲ. ಯಾರಿಗೂ ನಿವೇಶನ ಕೊಡುವುದಕ್ಕಾಗುವುದಿಲ್ಲ. ಸಂಪೂರ್ಣವಾಗಿ ಸೊಸೈಟಿಯವರ ಲಾಭಿಗೆ ನೀವು ಮಣಿದ ಹಾಗೆ ಆಗುತ್ತದೆ. ಒಂದು ಸಾರಿ ಇದು ಇಲ್ಲಿ ಪಾಸ್ ಆದ ಮೇಲೆ ನಿವೇಶನದಾರರು ಇವತ್ತು ಏನು ಅಲ್ಲಿ ಮನೆ ಕಟ್ಟಿದ್ದಾರೆ, ಅವರ ಮೇಲೆ ಯಾವ ರೀತಿಯಿಂದಲೂ ಕಡಿವಾಣ ಹಾಕಲಿಕ್ಕೂ ಬರುವುದಿಲ್ಲ. ನೀವು ಒಂದು ಕಡೆ ರೆವಿನ್ಯೂ ಕಲೆಕ್ಟ್ ಮಾಡಬಹುದು.

ಅಧ್ಯಕ್ಷರೆ, ತಮಗೆ ಗೊತ್ತಿರುವ ಹಾಗೆ ಒಂದು ಬಾರಿ ನಾವು ಬಿ.ಡಿ.ಎ.ನಿಂದ ಒಂದು ನಿವೇಶನವನ್ನು ಪಡೆದರೆ ಮತ್ತೆ ಇನ್ನೊಂದು ನಿವೇಶನವನ್ನು ಬಿ.ಡಿ.ಎ. ನಿಂದ ತೆಗೆದುಕೊಳ್ಳುವುದಕ್ಕೆ ನಮಗೆ ಹಕ್ಕಿರುವುದಿಲ್ಲ. ಆದರೆ ಇವರು ತಂದಿರುವ ತಿದ್ದುಪಡಿಯಿಂದ ಒಬ್ಬನೇ ಹತ್ತಾರು ನಿವೇಶನಗಳನ್ನು

ಪಡೆಯುವುದಕ್ಕೆ ಅವಕಾಶವಾಗುತ್ತದೆ. ಒಂದು ರೀತಿಯಲ್ಲಿ ಫ್ಲಡ್ ಗೇಟ್‌ನ್ನು ನೀವೇ ಓಪನ್ ಮಾಡಿದ ಹಾಗೆ ಆಗುತ್ತದೆ. ಕಾನೂನು ಬಾಹಿರದ ದಾರಿಯನ್ನು ನೀವೇ ತೋರಿಸಿಕೊಟ್ಟ ಹಾಗೆ ಆಗುತ್ತದೆ. ಆದಕಾರಣವಾಗಿ ಇವೆಲ್ಲದರ ಬಗ್ಗೆ ಮತ್ತೆ ಪರಿಶೀಲನೆ ಮಾಡಿ ನಂತರ ಸಭೆಗೆ ತಂದು ಸದನದ ಒಪ್ಪಿಗೆಯನ್ನು ಪಡೆದು ನಂತರ ಪಾಸ್ ಮಾಡಿಸುವುದು ಸೂಕ್ತವೆಂದು ನಾನು ಹೇಳುತ್ತೇನೆ. ಇನ್ನೂ ಅನೇಕ ಅನುಮಾನಗಳು ಇದರಿಂದ ಉದ್ಭವವಾಗುತ್ತಿದ್ದರೂ ಕೂಡ ಈಗ ನಾನು ಏನು ಕ್ಲಾರಿಫಿಕೇಷನ್ ಕೇಳಿದ್ದೇನೆ, ಅದಕ್ಕೆ ಮಂತ್ರಿಗಳು ಉತ್ತರ ಕೊಡಬೇಕು. ತದನಂತರ ಮತ್ತೆ ಪ್ರಶ್ನೆಗಳನ್ನು ಕೇಳುವುದಕ್ಕೆ ನನಗೆ ಅವಕಾಶ ಮಾಡಿಕೊಡಬೇಕೆಂದು ಅಧ್ಯಕ್ಷರನ್ನು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್.ಸುರೇಶ್‌ಕುಮಾರ್ (ರಾಜಾಜಿನಗರ) : ಇವೊತ್ತು ಮಂತ್ರಿಗಳು ಬಹಳ ಅವಸರವಾಗಿ ಒಂದು ತಿದ್ದುಪಡಿಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಪ್ರಾಯಶಃ ಅವರು ಡಯಾಗ್‌ನೈಸ್ ಮಾಡುತ್ತಿರುವ ಕಾಯಿಲೆ ಸರಿಯಾಗಿದೆ, ಆದರೆ ಅದಕ್ಕೆ ಔಷಧಿ ಸರಿಯಿಲ್ಲ. ಒಂದು ರೀತಿಯಾಗಿ ಬಿ.ಡಿ.ಎ. ಯನ್ನು ಮುಚ್ಚುವ ಕೆಲಸವನ್ನು ಮಾಡಲು ಈ ತಿದ್ದುಪಡಿಯನ್ನು ತಂದಿದ್ದಾರೆ. ಈ ರೀತಿ ಮಾಡುವ ಬದಲು ವೀರಪ್ಪ ಮೊಯ್ಲಿಯವರು ಹೇಳಿದ ಹಾಗೆ ಬಿ.ಡಿ.ಎ. ಲಿಕ್ವಿಡೇಷನ್ ಆಕ್ಟ್ ಎಂಬುದನ್ನೇ ತಂದುಬಿಡಿ. ಅದೇ ಸೂಕ್ತವಾಗುತ್ತದೆ. ನೀವು ತಂದಿರುವ ತಿದ್ದುಪಡಿ ಬಹಳ ದಿನಗಳವರೆಗೆ ಪರಿಣಾಮ ಬೀರುತ್ತದೆ. ಅದನ್ನು ಯೋಚನೆ ಮಾಡದೇ ಬಹಳ ಅವಸರವಾಗಿ ತಿದ್ದುಪಡಿಯನ್ನು ತಂದಿದ್ದೀರಿ. ಈ ಹಿಂದೆ ಬೆಂಗಳೂರಿನ ಜಲ ಮಂಡಳಿಗೆ ಇದ್ದ ಅಧ್ಯಕ್ಷರೊಬ್ಬರು ಇದೇ ರೀತಿ ಒಂದು ಸ್ಟೇಟ್‌ಮೆಂಟ್ ಕೊಟ್ಟು ಎಲ್ಲಾ ಅನಧಿಕೃತ ನೀರಿನ ಸಂಪರ್ಕಗಳನ್ನು ಸಕ್ರಮಗೊಳಿಸಲಾಗುವುದು ಎಂದು ಹೇಳಿಬಿಟ್ಟರು. ಕೇವಲ ಒಂದು ವಾರದಲ್ಲಿಯೇ 70 ಸಾವಿರ ನೀರಿನ ಅನಧಿಕೃತ ಸಂಪರ್ಕದ ಅರ್ಜಿಗಳು ಬಂದುಬಿಟ್ಟಿತು. ಇವೊತ್ತು ತಂದಿರುವ ಬಿಲ್‌ನಲ್ಲಿ ಯಾವ ದಿನಾಂಕದಿಂದ ಮಾಡಲಾಗುವುದು ಎಂಬ ಬಗ್ಗೆ ತಿಳಿಸಿಲ್ಲ. ಇವೊತ್ತು ಬಿ.ಡಿ.ಎ. ಅಕ್ವೈರ್ ಮಾಡಿಕೊಂಡಿರುವ ಜಾಗದಲ್ಲಿ ಯಾರೋ ಕಟ್ಟಡ ಕಟ್ಟಿ ಕೊಂಡಿದ್ದರೆ ಮತ್ತೆ ಈಗ ಅದನ್ನೆಲ್ಲಾ ವಾಪಸ್ ಕೊಡಬೇಕಾಗುತ್ತದೆ. ಮಾನ್ಯ ಜಯಚಂದ್ರರವರು ಹೇಳಿದ ಹಾಗೆ ಬೆಂಗಳೂರಿನಲ್ಲಿ ಒಂದು ಸೈಟ್ ಸಿಗಬಹುದು ಎಂದು ಹತ್ತಾರು ವರ್ಷಗಳಿಂದ ಕಾದು ಕುಳಿತಿರುವ ಜನರುಗಳಿದ್ದಾರೆ. ಒಂದು ರೀತಿಯಲ್ಲಿ 17 ಬಾರಿ ದಂಡಯಾತ್ರೆ ಮಾಡಿದ ಹಾಗೆ ಯಾವುದೇ ಕಾನೂನು ಬಾಹಿರವಾಗಿ ಹೋಗದೇ ನಿವೇಶನ ಈ ಬಾರಿಯಾದರೂ ಸಿಗಬಹುದು ನನ್ನ ಸರದಿ ಬರಬಹುದು, ಎಂದು ಕಾದು ಕುಳಿತಿರುವ ಅರ್ಜಿದಾರರ ಗತಿಯೇನು? ಅಲಾಟ್‌ಮೆಂಟ್ ಆಗಿರುವವರೂ ಕೂಡ ಈಗಾಗಲೇ ಸಂಪೂರ್ಣವಾಗಿ ದುಡ್ಡನ್ನು ಕಟ್ಟಿಬಿಟ್ಟಿದ್ದಾರೆ, ಇವರ ಪರಿಸ್ಥಿತಿಯೇನು? ಕಾನೂನಿನ ಅಡಿಯಲ್ಲಿ ಇಂಥವರಿಗೆ ರಕ್ಷಣೆ ಕೊಡುವುದಕ್ಕೆ ಇದರಲ್ಲಿ ಅವಕಾಶವಿದೆಯೇ? ಇನ್ನು ಎರಡನೆಯದಾಗಿ ಹೇಳುವುದೇನೆಂದರೆ ಇಂದು ಬೆಂಗಳೂರು ನಗರದಲ್ಲಿರುವ ಲ್ಯಾಂಡ್ ಮಾಫಿಯಾಗಳು ಬಿ.ಡಿ.ಎ.ನಲ್ಲಿರುವ ಕೆಲವು ಅಧಿಕಾರಿಗಳೊಂದಿಗೆ ಅಪವಿತ್ರ ಮೈತ್ರಿ ಕೂಟ ಮಾಡಿಕೊಂಡಿರುವುದರಿಂದ ಬೆಂಗಳೂರು ಇಂದು ಹಾಳಾಗುತ್ತಿದೆ. ಬಿ.ಡಿ.ಎ. ನಲ್ಲಿ ಒಳ್ಳೆಯ ಅಧಿಕಾರಿಗಳೂ ಕೂಡ ಇದ್ದಾರೆ. ಆದರೆ ಕೆಳಹಂತದ ಮತ್ತು ಮಧ್ಯಹಂತದ ಕೆಲವು ಅಧಿಕಾರಿಗಳು ಬೆಂಗಳೂರಿನಲ್ಲಿ ಒಂದು ನಿವೇಶನ ಪಡೆಯುವುದು ಒಂದು ಗಗನಕುಸುಮವೇ ಎನ್ನುವ ಹಾಗೆ ಮಾಡಿದ್ದಾರೆ. ಅಂಥವರಿಗೆ ರಕ್ಷಣೆ ಕೊಡಿಸುವ ಸಲುವಾಗಿ ಈ ಬಿಲ್‌ನ್ನು ನೀವು ತರುತ್ತೀರೇನು? ಮಾನ್ಯ ಜಯಚಂದ್ರರವರು ಹೇಳಿದ ಹಾಗೆ ನೀವು ಮುಂದೆ ಒಂದೇ

ಒಂದು ಇಂಚು ಜಾಗವನ್ನೂ ಕೂಡ ಅಕ್ವೈರು ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಏಕೆಂದರೆ ಅದಕ್ಕೇನಾದರೂ ಒಂದು ಅಡ್ಡಿ ಬಂದೇ ಬರುತ್ತದೆ. ಬಿ.ಡಿ.ಎ.ನಲ್ಲಿ ಇರುವ ಪರಿಸ್ಥಿತಿ ಏನು. ಪ್ರಿಲಿಮನರಿ ನೋಟಿಫಿಕೇಷನ್ 10 ವರ್ಷದ ಹಿಂದೆ ಕೊಟ್ಟು ಹತ್ತು ವರ್ಷ ಆದ ಮೇಲೆ ಫೈನಲ್ ನೋಟಿಫಿಕೇಷನ್. ಈ ನಡುವೆ ಜನಗಳು ಬಿ.ಡಿ.ಎ.ಗೆ ಕೊಟ್ಟು ಬಿಟ್ಟಿದ್ದೇವೆ ಎಂದು ಸುಮ್ಮನೆ ಕುಳಿತಿರುತ್ತಾರೆಯೇ? ಎಷ್ಟು ಸಾವಿರ ಎಕರೆ ಭೂಮಿಯನ್ನು ಈ ರೀತಿ ಕಳೆದು ಕೊಂಡಿದ್ದೀರಿ? ಎಷ್ಟು ಲಕ್ಷ ಜನರು ನಿವೇಶನಕ್ಕಾಗಿ ಜಾತಕಪಕ್ಷಿಯಂತೆ ಕಾದುಕುಳಿತಿದ್ದಾರೆ? ಈ ಬಗ್ಗೆ ಪೂರ್ಣ ಮಾಹಿತಿಯನ್ನು ನಮ್ಮ ಮುಂದೆ ಅಂಕಿ ಅಂಶಗಳ ಸಮೇತ ಇಡಬೇಕು. ಒಂದು ಸ್ವೀಪಿಂಗ್‌ನಂತೆ ಅಮೆಂಡ್‌ಮೆಂಟ್ ತಂದು ಇದೇ ಎಲ್ಲದಕ್ಕೂ ಮದ್ದು ಎಂದು ಏನು ಬಿಲ್ ತಂದಿದ್ದೀರಿ ಇದು ಕೇವಲ ಆಘಾತಕಾರಿ ಅಷ್ಟೇ ಅಲ್ಲ ಬಿ.ಡಿ.ಎ. ಅಭಿವೃದ್ಧಿಗೆ ಒಂದು ರೀತಿಯಲ್ಲಿ ಪೂರ್ಣ ವಿರಾಮ ಹಾಕುವ ಪರಿಸ್ಥಿತಿ ಇದರಿಂದ ಉದ್ಭವವಾಗುತ್ತದೆ. ಆದುದರಿಂದ ದಯವಿಟ್ಟು ಈ ಬಿಲ್‌ನ್ನು ಹಾಗೆಯೇ ತರದೇ ಇದರ ಬಗ್ಗೆ ಇರುವ ಸಾಧಕ ಬಾಧಕಗಳನ್ನು ನೋಡಬೇಕು. ಬಿ.ಡಿ.ಎ.ನಲ್ಲಿ ಎರಡು ಅಂಶಗಳಿವೆ, ಒಂದು ಡೆವಲಪ್‌ಮೆಂಟ್ ಆದರೆ ಇನ್ನೊಂದು ಪ್ಲಾನಿಂಗ್. ಇದರಲ್ಲಿ ಯಾವುದೇ ಉದ್ದೇಶ ಈಡೇರುತ್ತದೆಯೇ? ಸೋಮಣ್ಣನವರೂ ಹತ್ತು ಹದಿನೈದು ವರ್ಷದಿಂದ ನೋಡಿಕೊಂಡು ಬರುತ್ತಿದ್ದಾರೆ. ಅವರು ಇಲ್ಲಿ ಕುಳಿತಿದ್ದರೆ ಏನು ಮಾತನಾಡುತ್ತಿದ್ದರೋ ಅದನ್ನು ನಾವು ಮಾತನಾಡುತ್ತಿದ್ದೇವೆ. ಸೋಮಣ್ಣನವರು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಆಗದೇ ಇರುವಂಥದ್ದನ್ನು ಅವರೇ ಡಿಫೆಂಡ್ ಮಾಡಿಕೊಳ್ಳಬೇಕಾಗಿದೆ. ಏಕೆಂದರೆ ಬಿಲ್‌ನ್ನು ಅವರು ತಂದು ಬಿಟ್ಟಿದ್ದಾರೆ. ಆದುದರಿಂದ ಜಯಚಂದ್ರರವರು ಹೇಳಿದ ಹಾಗೆ ಇದರ ಬಗ್ಗೆ ಸಾಧಕ ಬಾಧಕಗಳನ್ನು ಪರಿಶೀಲಿಸಲು ಒಂದು ಸಮಿತಿಯನ್ನು ಮಾಡಬೇಕು. ಈ ಬಿಲ್ ಹಾಗೇಯೇ ಪಾಸ್ ಆದರೆ ಮುಂದೆ ಬಹಳಷ್ಟು ಅನಾಹುತಗಳು ಆಗುವ ಕಾರಣದಿಂದ ಇದನ್ನು ವಾಪಸ್ ತೆಗೆದುಕೊಂಡು ಪೂರ್ಣ ಪ್ರಮಾಣದ ಬಿಲ್‌ನ್ನು ನಮ್ಮ ಮುಂದೆ ಇಡಬೇಕೆಂದು ನಾನು ಆಗ್ರಹಿಸುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜ ಪೇಟೆ) : ಈ ಬಿಲ್ ತರುವ ಮೊದಲು ಇವರು ಕಾನೂನು ತಜ್ಞರನ್ನು ಕೇಳಿದ್ದಾರೋ ಅಥವಾ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಸೊಸೈಟಿಗಳವರು ಅಕ್ರಮವಾಗಿ ನಿವೇಶನಗಳನ್ನು ಮಾಡತಕ್ಕಂಥ ಸಂದರ್ಭದಲ್ಲಿ ನಮ್ಮ ಹಿಂದಿನ ಸರ್ಕಾರದವರು ಒಂದು ಸಮಿತಿಯನ್ನು ಮಾಡಿ ಅಮರ ಜ್ಯೋತಿ ಸೊಸೈಟಿಯವರು ಅಕ್ರಮವಾಗಿ ಏನು ನಿವೇಶನಗಳನ್ನು ಮಾಡಿದ್ದರು ಅದನ್ನು ಬೆಳಕಿಗೆ ತಂದಿದ್ದರು. ಯಾವುದೇ ಸೊಸೈಟಿಯವರು ಲ್ಯಾಂಡ್‌ನ್ನು ಅಕ್ವೈರು ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೈಕೋರ್ಟ್‌ನಲ್ಲಿ ತೀರ್ಮಾನವಾಗಿದೆ ಮತ್ತು ಸುಪ್ರೀಂ ಕೋರ್ಟ್‌ನಲ್ಲೂ ಕೂಡ ಇದು ಕನ್‌ಫರ್ಮ್ ಆಗಿದೆ. ಸುಪ್ರೀಂ ಕೋರ್ಟ್ ತೀರ್ಮಾನದ ಪ್ರಕಾರ ಯಾವ ಸೊಸೈಟಿಗಳವರು ಭೂಮಿಯನ್ನು ರೈತರಿಂದ ಪಡೆದು ನಿವೇಶನಗಳನ್ನಾಗಿ ಮಾಡಿದ್ದರೋ ಆ ಭೂಮಿಯನ್ನು ಮತ್ತೆ ರೈತರುಗಳಿಗೆ ಕೊಡಬೇಕೆಂದು ತೀರ್ಮಾನವಾಗಿದೆ. ಯಾವ ಭೂಮಿಯನ್ನು ಅಕ್ವೈರ್ ಮಾಡಿ ಸೊಸೈಟಿಗೋಸ್ಕರ ಸರ್ಕಾರ ತೆಗೆದುಕೊಂಡಿತ್ತೋ ಅದು ಸರಿಯಲ್ಲವೆಂದು ಹೈಕೋರ್ಟ್‌ನಲ್ಲಿ ತೀರ್ಮಾನವಾಗಿ ಅದನ್ನು ರೈತರುಗಳಿಗೆ ಸುತ್ತಮುತ್ತಲ ರೈತರುಗಳು ತಮ್ಮ ಭೂಮಿ ತಮಗೆ ಬರಬೇಕು ಎಂದು ಹೋರಾಟ ಮಾಡುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಯಾವ ಯಾವ ಸೊಸೈಟಿಗಳು ನಿವೇಶನಗಳನ್ನು ಮಾಡಿ ಅಥವಾ ಮನೆ ಕಟ್ಟಿ ಕೊಟ್ಟಿದೆಯೋ ಅಂಥವುಗಳನ್ನು ಅವರುಗಳಿಗೆ

ಕೊಡುವುದಕ್ಕೆ ಆಗುವುದಿಲ್ಲ. ಕಾನೂನು ಪ್ರಕಾರ ಅವರಿಗೆ ಕೊಡುವುದಕ್ಕಾಗುವುದಿಲ್ಲ. ಲ್ಯಾಂಡ್ ಅಕ್ವಿಸಿಷನ್ ಮಾಡುವಾಗ ಒಂದು ಎಕರೆಗೆ ಒಂದು ಸೈಟ್‌ನ್ನು ರೀ-ಕನ್ವೆ ಮಾಡಬಹುದೇ ಹೊರತು ಬೇರೆ ಮಾಡುವುದಕ್ಕಾಗುವುದಿಲ್ಲವೆಂದು ಸುಪ್ರೀಂ ಕೋರ್ಟ್‌ನಲ್ಲಿ ವೆಂಕಟರಾಮಯ್ಯನವರು ತೀರ್ಪು ಕೊಟ್ಟರು. ಇದಾದ ನಂತರ ಬಿ.ಡಿ.ಎ.ನಲ್ಲಿ ಒಬ್ಬೊಬ್ಬರಿಗೆ ಒಂದೊಂದು ಸೈಟ್‌ನ್ನು ಕೊಡುತ್ತಿದ್ದರು. ಅದಾದದ ನಂತರ 1986ರಲ್ಲಿ ಆಯಿತು ಎಂದು ತಾವೇನು ಹೇಳಿದಿರಿ paper publication ಕೊಟ್ಟು ರೀ-ಕನ್ವೆ ಮಾಡಬಹುದು ಎಂದಾಗ ಎಲ್ಲರೂ ಕೂಡ application ಹಾಕಿದರು. ಆ ವಿಚಾರ ಕೂಡ ಹೈಕೋರ್ಟ್‌ಗೆ ಬಂದಾಗ re-canveyance is not a matter of right ಎಂದು ಹೇಳಿ ನಮ್ಮ ಹೈಕೋರ್ಟ್‌ನಲ್ಲಿ ತೀರ್ಮಾನ ಕೊಟ್ಟರು ಮತ್ತು ಸುಪ್ರೀಂ ಕೋರ್ಟ್‌ನಲ್ಲೂ ಕೂಡ ಹಾಗೆಯೇ ಹೇಳಲಾಗಿದೆ. ಈ ರೀತಿ ಕಾನೂನು ಇರುವಾಗ Public Premises Eviction Act ಎಂದು ಇರುವ ಆಕ್ಟ್‌ಗೆ ಒಂದು ಅಮೆಂಡ್‌ಮೆಂಟ್‌ನ್ನು ತಾವು ತಂದಿದ್ದೀರಿ. ತಮ್ಮ ಮುಂದೆಯೇ ಇದೆ. ಅದರ ಪ್ರಕಾರ ಅನಧಿಕೃತವಾಗಿ ಮನೆಗಳನ್ನು, ಕಟ್ಟಡಗಳನ್ನು ಕಟ್ಟಿರತಕ್ಕಂಥವರಿಗೆ ಎವಿಕ್ಷನ್ ಮಾಡುವುದಕ್ಕೋಸ್ಕರ ನಮ್ಮದೇ ಆದಂಥ ಕಾನೂನು ನಮ್ಮಲ್ಲಿಯೇ ಇದೆ.

Ignorance of law is no excuse. The Government is supposed to know the law enacted by the State.

ಇದು ಒಂದು ಕಡೆ ಇದೆ. ಈ ಕಾನೂನಿನಲ್ಲಿ ಯಾರ್‍ಯಾರು ಅನಧಿಕೃತವಾಗಿ ಕಟ್ಟಿದ್ದಾರೋ ಅವರಿಗೇ ಆ ಜಮೀನನ್ನು ನಾವು ಕೊಡಬೇಕು ಎಂದು ಹೇಳತಕ್ಕಂಥದ್ದು ನಿಜವಾಗಿಯೂ ಕೂಡ ವಿಪರ್ಯಾಸವಾಗುತ್ತದೆ. ಇದರ ಬಗ್ಗೆ ಕೇಳಲೇ ಬೇಕಾಗುತ್ತದೆ. ಹಿಂದೆ ಯಾವ ಬಿ.ಟಿ. ಸೋಮಣ್ಣನವರು ಬೆಂಗಳೂರನ್ನು ಅಭಿವೃದ್ಧಿ ಮಾಡಬೇಕೆನ್ನುವ ಆಸೆಯಿಂದ ಕೆಲವು ಒಳ್ಳೆಯ ಮಾರ್ಗದರ್ಶನಗಳನ್ನು ಕೊಟ್ಟಿದ್ದರೋ ಅಂಥವುಗಳನ್ನು ತೆಗೆದು ಹಾಕುವ ಸಲುವಾಗಿ ಇದನ್ನು ನೀವು ಮಾಡಬೇಡಿ. ತಾವು ಇಂದು ಅಭಿವೃದ್ಧಿ ಕಾರ್ಯಗಳನ್ನು ಮಾಡುವಾಗ ತಮ್ಮ ಹೆಸರೂ ಕೂಡ ಇಂದು ಉಳಿಯಬೇಕಾಗಿರುವುದರಿಂದ ಒಳ್ಳೆಯ ಕಾರ್ಯವನ್ನು ಮಾಡಿ. ನೀವೂ ಕೂಡ ಒಮ್ಮೆ ಹೇಳಿದ್ದೀರಿ, ಏನೆಂದರೆ ಈ ಬಿ.ಡಿ.ಎ. ಇರುವುದಕ್ಕಿಂತ ಇದನ್ನು ತೆಗೆದುಹಾಕುವುದೇ ಒಳ್ಳೆಯದು ಎಂದು ಹೇಳಿದ್ದೀರಿ. ನಾನೂ ಕೂಡ ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ it is better to wind up ಅದನ್ನು ಮುಚ್ಚಿ ಹಾಕಿ ಈಗೇನು ನೀವು ಹಲವಾರು ಸಂಸ್ಥೆಗಳನ್ನು ಮಾಡಿದ್ದೀರಿ ಅದನ್ನೆಲ್ಲವನ್ನೂ ಒಂದೇ ಕಾರ್ಪೊರೇಷನ್ ಅಡಿಯಲ್ಲಿ ತಂದು ಇಡೀ ಬೆಂಗಳೂರನ್ನು ಒಂದೇ ಅಂಬ್ರೆಲಾದೊಳಗೆ ತರಬೇಕು. ನೀವು ಈಗ ಬಿ.ಎಂ.ಆರ್.ಡಿ.ಎ. ವಾಟರ್ ಬೋರ್ಡ್ ಎಲೆಕ್ಟ್ರಿಸಿಟಿ ಬೋರ್ಡ್, ಐದು ಸಿ.ಎಂ.ಸಿ.ಗಳೆಂದು ಏನು ಸಂಸ್ಥೆಗಳನ್ನು ಮಾಡಿದ್ದೀರಿ ಇವೆಲ್ಲವನ್ನೂ ಕೂಡ ನಿಮ್ಮ ಕಾಲದಲ್ಲಿ ಒಂದೇ ಅಂಬ್ರೆಲಾದೊಳಗೆ ತೆಗೆದುಕೊಂಡು ಬಂದು ಇಡೀ ಬೆಂಗಳೂರು ಜನತೆಗೆ ಉಸಿರಾಡಲು ಅವಕಾಶ ಮಾಡಿಕೊಡಬೇಕು. ಈಗ ನೀವೇನು ಬಿಲ್ ತಂದಿದ್ದೀರಿ ಇದರಿಂದ ಬಹಳ ಅನಾನುಕೂಲಗಳಾಗುವುದರಿಂದ ಇದರಲ್ಲಿರುವ ಸಾಧಕ-ಬಾಧಕಗಳ ಬಗ್ಗೆ ನೋಡಬೇಕಾಗುತ್ತದೆ. ಈ ಹಿಂದೆ ಏನು ಜಡ್ಜ್‌ಮೆಂಟ್‌ಗಳಾಗಿವೆ ಅವೆಲ್ಲವನ್ನೂ ಕೂಡ ಪರಾಂಭರಿಸಬೇಕಾಗುತ್ತದೆ. ಅವೆಲ್ಲವನ್ನೂ ಮಾಡಿದ ಮೇಲೆ ಬಿಲ್‌ನ್ನು ಸದನದ ಸಭೆಗೆ ತರಬೇಕು. ಅದನ್ನು ಬಿಟ್ಟು ಆತುರಾತುರವಾಗಿ ತಂದರೆ

ಇದರಿಂದ ಬಹಳ ಅನಾನುಕೂಲವಾಗುತ್ತದೆ ಎಂದು ಹೇಳಿ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಈ ಬಿ.ಡಿ.ಎ. ಬಗ್ಗೆ ನಾವು ದಿನವೆಲ್ಲಾ ಚರ್ಚೆಮಾಡಬಹುದು. ಯಾವ ಉದ್ದೇಶಕ್ಕಾಗಿ ಬಿ.ಡಿ.ಎ. ರಚನೆಯಾಯಿತೋ ಅದೇ ಉದ್ದೇಶಕ್ಕಾಗಿ ಈಗ ಅದು ಉಳಿದಿಲ್ಲ.

1.40 ಪಿ.ಎಂ

ಬಹಳ ಜನ ಅಧ್ಯಕ್ಷರುಗಳು ಬಂದರು. ಒಂದು ಕಾಲದಲ್ಲಿ ಬಿ.ಟಿ.ಸೋಮಣ್ಣ ಎನ್ನುವವರು ಅಧ್ಯಕ್ಷರಾಗಿ ಬಂದಾಗ ಬಿ.ಡಿ.ಎ.ಗೆ ಒಳ್ಳೆಯ ಹೆಸರಿತ್ತು. ನನಗೆ ಜ್ಞಾಪಕವಿದ್ದ ಹಾಗೆ ಅವರು 8 ವರ್ಷಗಳ ಕಾಲ ಅಧ್ಯಕ್ಷರಾಗಿ ಕೆಲಸ ಮಾಡಿದರು. ಆಗ ಜಮೀನ್ದಾರರು ನ್ಯಾಯಾಲಯಕ್ಕೆ ಹೋಗುತ್ತಿರಲಿಲ್ಲ. ನೇರವಾಗಿ ಪ್ರಾಧಿಕಾರದ ಅಧ್ಯಕ್ಷರೇ ಜಮೀನ್ದಾರರ ಜೊತೆ ಮಾತುಕತೆಯಾಡಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಿವೇಶನ ಹಂಚುವುದಕ್ಕೆ ಜಮೀನುಗಳನ್ನು ಕೊಡುವಂಥ ಜಮೀನ್ದಾರರ ಬಳಿ ಅವರೇ ಹೋಗಿ, ಅವರ ಸ್ವಂತಕ್ಕೆ ಒಂದು ನಿವೇಶನ ಕೊಟ್ಟು, ಅವರ ಕಡೆಯವರಾದ ಇನ್ನೂ ಯಾರಿಗಾದರೂ ನಿವೇಶನ ಕೊಟ್ಟು, ರಾಜಿ ಮಾಡಿ ಅನೇಕ ಸಾವಿರಾರು ನಿವೇಶನಗಳನ್ನು ಹಂಚಿದ್ದು ಉಂಟು. ಅದಾದ ನಂತರ, ಈಗ ನಮ್ಮ ಸ್ನೇಹಿತರಾದ ಶ್ರೀಮಾನ್ ಶಿವರಾಮೇಗೌಡರು ಅಧ್ಯಕ್ಷರಾಗಿ ಬಂದಿದ್ದಾರೆ. ಬಹಳ ಚೆನ್ನಾಗಿ ಕೆಲಸ ಮಾಡಬೇಕು ಎನ್ನುವ ಉತ್ಸಾಹ ಅವರಿಗೆ ಇದೆ. ನಾವು ಅದನ್ನು ತಳ್ಳಿ ಹಾಕತಕ್ಕಂಥಾದ್ದಲ್ಲ. ಆದರೆ ನಿವೇಶನ ಕೊಡುವುದಕ್ಕೆ ಈಗ ಅಲ್ಲಿ ಜಾಗವೇ ಇಲ್ಲ. ಜಾಗ ಇದ್ದರೆ ತಾನೇ ನಿವೇಶನ ಕೊಡುವುದು, ಜಾಗ ಎಲ್ಲಿದೆ? ಜಮೀನುಗಳಿಗೆ ಸಂಬಂಧಪಟ್ಟಂತೆ ಎಲ್ಲವೂ ನ್ಯಾಯಾಲಯದಲ್ಲಿ ಕಟ್ಲೆಯಾಗಿ ನ್ಯಾಯಾಲಯದ ಕಟಕಟೆಯಲ್ಲಿ ಕುಳಿತಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಪರ್ಯಾಯವಾದಂಥ ಅಭಿವೃದ್ಧಿ ಪ್ರಾಧಿಕಾರಗಳೂ ರಚನೆಯಾಗಿದೆ. ಹಿಂದೆ ಜಿ.ವಿ.ಕೆ. ರಾವ್ ಸಮಿತಿ ಒಂದು ವರದಿ ಕೊಟ್ಟಿದೆ. ಆ ವರದಿ ಏನಾಯಿತು? ಸೋಮಣ್ಣನವರೇ ಅದನ್ನು ತಾವು ಸ್ವಲ್ಪ ನೋಡಬೇಕು. ಆ ವರದಿಯಲ್ಲಿ ನೆಲಗಳ್ಳರು ಎಂದು ಹೇಳಿದ್ದಾರೆ. ನೆಲಗಳ್ಳರು ಎಂದರೆ ಜಮೀನನ್ನು ರಾತ್ರೋರಾತ್ರಿ ನುಂಗಿರುವುದು. ಹಗಲು ನುಂಗಿದ್ದಾರೆ ಎಂದು ತಿಳಿದುಕೊಳ್ಳಬೇಡಿ. ಇಡೀ ಬೆಂಗಳೂರನ್ನು ಲೂಟಿ ಮಾಡಿರತಕ್ಕಂಥ ದರೋಡೆಯ ಬಗ್ಗೆ ಜಿ.ವಿ.ಕೆ.ರಾವ್ ಅವರು ಒಂದು ಬಹಳ ಉತ್ತಮವಾದಂಥ ವರದಿಯನ್ನು ಕೊಟ್ಟಿದ್ದಾರೆ. ಬೆಂಗಳೂರಿನಲ್ಲಿ ಆಗಿರತಕ್ಕಂಥ ಅಭಿವೃದ್ಧಿ ಕಾರ್ಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಂಪೂರ್ಣವಾಗಿ ನ್ಯಾಯಾಲಯದಲ್ಲಿದೆ. ಇವತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಉಳಿದಿರುವುದು ಹೇಗೆಂದರೆ, ಪ್ರಾಧಿಕಾರದವರು ಮೂಲೆ ನಿವೇಶನಗಳನ್ನು ಮಾರಿ ಆದರಿಂದ ಬಂದಂಥ ಹಣದಿಂದ ಸಂಬಳವನ್ನು ಕೊಡುತ್ತಿದ್ದಾರೆ. 1988ರಿಂದ ಇಲ್ಲಿಯವರೆಗೆ ನಿವೇಶನಕ್ಕಾಗಿ ಅರ್ಜಿ ಹಾಕಿದ ಜನರ ಸಂಖ್ಯೆ ಒಂದು ಲಕ್ಷಕ್ಕೂ ಮೇಲೆ ಹೋಗುತ್ತದೆ. ಅವರು ಕೊಟ್ಟಿರತಕ್ಕಂಥ ಠೇವಣಿಗೆ ಬಡ್ಡಿ ಇಲ್ಲ. ಅವರಿಗೆ ಹಣವನ್ನೂ ವಾಪಸ್ಸು ಕೊಡಲಿಲ್ಲ ನಿವೇಶನವನ್ನೂ ಕೊಡಲಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : 1988ನೇ ಇಸವಿಯಲ್ಲಿ ಅರ್ಜಿ ಕರೆದು ಸೈಟುಗಳನ್ನು ಕೊಡುತ್ತೇವೆ ಎಂದು ಹೇಳಿದಂಥ ಪ್ರಾಧಿಕಾರಕ್ಕೆ ಸೈಟುಗಳನ್ನು ಕೊಡಲು ಆಗಲಿಲ್ಲ. ಆದರೆ ಕಳೆದ ಎರಡು ವರ್ಷಗಳಿಂದೀಚೆಗೆ, ಅರ್ಜಿ ಹಾಕಿದ್ದಂಥ 88 ಸಾವಿರ ಜನಗಳಿಗೆ ಹಣವನ್ನು ವಾಪಸ್ಸು

ಹಿಂದಿರುಗಿಸಲಾಗಿದೆ. ಅವರ ದುಡ್ಡನ್ನು ನಾವು ಇಟ್ಟುಕೊಂಡಿಲ್ಲ. ಹಿಂದೆ ಯಾರ್ಯಾರು ಅರ್ಜಿ ಹಾಕಿದ್ದರು, ಅವರೆಲ್ಲರಿಗೂ ವಾಪಸ್ಸು ದುಡ್ಡನ್ನು ಕೊಟ್ಟಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಬಡ್ಡಿ ಸಮೇತ ಕೊಟ್ಟಿದ್ದೀರಾ?

ಶ್ರೀ ಎಲ್.ಆರ್. ಶಿವರಾಮೇಗೌಡ : ಬಡ್ಡಿ ಕೊಟ್ಟಿಲ್ಲ, ಹಣ ವಾಪಸ್ಸು ಕೊಟ್ಟಿಲ್ಲ ಎಂದು ಹೇಳಿದ್ದಕ್ಕೆ ನಾನು ಹೇಳಿದೆ. ವಾಟಾಳ್ ನಾಗರಾಜ್‌ರವರು ಹೇಳಿದ್ದಕ್ಕೆ ಹೇಳಿದೆ, ಅವರಿಗೆ ಬಡ್ಡಿ ಕೊಟ್ಟಿಲ್ಲ, ಅವರು ಕಟ್ಟಿದ್ದಂಥ ಹಣವನ್ನು ವಾಪಸ್ಸು ಕೊಟ್ಟಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ : ಅವರು ಕಟ್ಟಿದ್ದಂಥ ಸುಮಾರು 12 ಕೋಟಿ ರೂಪಾಯಿಗಳನ್ನು ಅನುಭವಿಸಿ, ಈಗ ದುಡ್ಡನ್ನು ವಾಪಸ್ಸು ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದಾರೆ.

ಶ್ರೀ ವಿ. ಸೋಮಣ್ಣ : 1988 ರಿಂದ ನಮಗೆ ನಿವೇಶನಕ್ಕಾಗಿ ಅರ್ಜಿಗಳು ಬಂದದ್ದು ನಿಜ. ಈಗಾಗಲೇ ನಾವು ಹಿಂದೆ ಅರ್ಜಿ ಹಾಕಿದ್ದಂಥವರಿಗೆ 33 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅದರಲ್ಲಿ 10 ಕೋಟಿ ರೂಪಾಯಿಗಳನ್ನು ಸೈಟು ಕೊಟ್ಟಿರುವವರಿಗೆ ಅಡ್ಜಸ್ಟ್ ಮಾಡಿಕೊಂಡಿದ್ದೇವೆ. ಉಳಿದ 23 ಕೋಟಿ ರೂಪಾಯಿಗಳನ್ನು ಹಿಂದೆ ಅರ್ಜಿ ಹಾಕಿದ್ದಂಥವರಿಗೆ ವಾಪಸ್ಸು ಕೊಟ್ಟಿದ್ದೇವೆ. ಮೊನ್ನೆ ಅರ್ಜಿಗಳನ್ನು ಕರೆದಾಗ 5 ಸಾವಿರ ಅರ್ಜಿಗಳು ಬಂದಿದ್ದು ಅವುಗಳಿಗೆ 1300 ಸೈಟುಗಳನ್ನು ಈ ಶಾಸನ ಸಭೆ ಮುಗಿದ ಕೂಡಲೇ ಅನೌನ್ಸ್ ಮಾಡುತ್ತಿದ್ದೇವೆ. 1988 ರಿಂದ ಇಲ್ಲಿಯವರೆಗೆ ಅರ್ಜಿಗಳನ್ನು ಹಾಕಿದ್ದವರಿಗೆ ವಾಪಸ್ಸು ದುಡ್ಡು ಕೊಟ್ಟಿಲ್ಲ ಎಂದು ತಾವು ಹೇಳಿದಿರಿ. ಪ್ರತಿಯೊಬ್ಬರಿಗೂ ಕೂಡ ಹಣವನ್ನು ವಾಪಸ್ಸು ಕೊಟ್ಟಿದ್ದೇವೆ. ನಾವು ಅರ್ಜಿಯನ್ನು ಕರೆಯತಕ್ಕಂಥ ಸಂದರ್ಭದಲ್ಲಿ, ನಾವು ಹಣವನ್ನು ವಾಪಸ್ಸು ಕೊಡುವುದಾದರೆ ಅದಕ್ಕೆ ಬಡ್ಡಿಯನ್ನು ಕೊಡುವುದಿಲ್ಲ ಎನ್ನುವ ಒಂದು ನಿಬಂಧನೆ ನಮ್ಮಲ್ಲಿ ಇದ್ದು, ಅದನ್ನು ತಿಳಿಸಿದ್ದೆವು. ಮಾನ್ಯ ವೀರಪ್ಪ ಮೊಯ್ಲಿಯವರು ಮುಖ್ಯಮಂತ್ರಿಗಳಾಗಿದ್ದಾಗ 38-ಸಿಯನ್ನು ತಂದು ಬಿ.ಡಿ.ಎ.ಯಲ್ಲಿನ ಕೊಳೆಯನ್ನು ತೊಳೆಯಬೇಕೆಂದು ತೀರ್ಮಾನ ಮಾಡಿದರು. ಯಾವುದೇ ಕಾರಣಕ್ಕೂ ನಾವು ಸೊಸೈಟಿಗಳವರಿಗೆ ಒಂದು ಇಂಚು ಜಾಗವನ್ನೂ ಕೊಟ್ಟಿಲ್ಲ. ಇಲ್ಲಿಯವರೆಗೆ ಯಾರ್ಯಾರಿಗೆ ಅಲಾಟ್‌ಮೆಂಟ್ ಆಗಿದೆ. ಅವರ ಖಾತೆ ಕಂದಾಯವಾಗಿ ಪ್ಲಾನ್ ಆಗಿದೆ. ತಾವೇ ಹೇಳಿದಿರಿ, ಸಾವಿರಾರು ಮನೆಗಳು ಅಕ್ರಮವಾಗಿ ಬಂದಿವೆ. ಇಡೀ ಸದನ ಒಪ್ಪಿಕೊಳ್ಳುವುದಾದರೆ ಅವುಗಳನ್ನು ಒಡೆಸಿ ಹಾಕೋಣ. ಅವುಗಳನ್ನು ಒಡೆಸಿ ಹಾಕಲು ತಾವು ಒಪ್ಪುತ್ತೀರಾ? ಕೆಲವು ಅಧಿಕಾರಿಗಳು ಕಾನೂನನ್ನು ಕೈಗೆ ತೆಗೆದುಕೊಂಡು ಅವ್ಯವಸ್ಥೆ ಆಗಿದ್ದುದು ಸಹಜ. ಆದರೆ ಇದಕ್ಕೆ ಏನಾದರೂ ಮಾಡಿ ಒಂದು ಪರ್ಯಾಯ ವ್ಯವಸ್ಥೆಯನ್ನು ಮಾಡಬೇಕೆಂದು ವೀರಪ್ಪ ಮೊಯ್ಲಿಯವರು ಬಂದಾಗ, 1988ರಲ್ಲಿ ಏನೇನು ರೆಸಲ್ಯೂಷನ್ ಆಗಿತ್ತು ಅವೆಲ್ಲವನ್ನೂ ತೆಗೆದುಕೊಂಡರು. ಇದು ಆದಂಥ ಸಂದರ್ಭದಲ್ಲಿ ಜನಗಳಲ್ಲಿ ಅವೇರ್‌ನೆಸ್ ಬರಲಿಲ್ಲ. 31 ಸಾವಿರ ಅರ್ಜಿಗಳು ಬಂದಿದ್ದರಲ್ಲಿ, ರೀಕನ್ವೆ ಮಾಡಿಕೊಂಡಂಥ ಜನ 12 ಸಾವಿರ ಆದಾದ ಮೇಲೆ ಇದು ಹೈಕೋರ್ಟ್, ಸುಪ್ರೀಂ ಕೋರ್ಟ್‌ಗೆ ಹೋಗಿ ಬಂದ ಮೇಲೆ, ಇದನ್ನು ಮಾಡಬೇಕಾದರೆ, ಇದಕ್ಕೆ ಸರಿಯಾದ ತಿದ್ದುಪಡಿಯನ್ನು ಮಾಡಿ ಎಂದು ಹೇಳಿದ ಮೇಲೆ ನಾವು ಸಾಧ್ಯತೆಯನ್ನು ನೋಡಿಕೊಂಡು ಮಾಡುತ್ತಿದ್ದೇವೆ. ಬೆಂಗಳೂರು ನಗರದಲ್ಲಿರುವ ಯಾವುದೇ ಒಂದು ಸೊಸೈಟಿಗಾಗಲೀ ಅಥವಾ ಒಬ್ಬ ಏಜೆಂಟಿಗಾಗಲೀ, ಮತ್ತೊಬ್ಬನಿಗಾಗಲೀ ಅನುಕೂಲ ಮಾಡಬೇಕು ಎನ್ನುವುದು ನಮ್ಮ ಉದ್ದೇಶವಲ್ಲ. ನಮ್ಮ

ಉದ್ದೇಶವೆಂದರೆ ಬಡ ಮತ್ತು ಮಧ್ಯಮ ವರ್ಗದ ಜನರನ್ನು ರಕ್ಷಿಸುವುದು. ಒಬ್ಬ ಬಡವ ಒಂದು ಮಹಡಿ ಮನೆ ಕಟ್ಟಿದ್ದು, ಇವತ್ತು ಅವನು ಅದನ್ನು ರಿಪೇರಿ ಮಾಡಲು ಹೋದರೆ ಅಧಿಕಾರಿಗಳು ಅಲ್ಲಿಗೆ ಓಡಿಹೋಗುತ್ತಾರೆ. ಅವನಿಗೆ ಸರಿಯಾದ ಟೈಟಲ್ ಡೀಡ್ ಇಲ್ಲ. ಇಲ್ಲವೆಂದರೆ, ಇಡೀ ಸದನ ಒಪ್ಪುವುದಾದರೆ, ಇಂಥ ಸಾವಿರಾರು ಮನೆಗಳಿವೆ, ಎಲ್ಲವನ್ನೂ ಒಡೆದು ಹಾಕೋಣ, ಆದರೆ ಒಂದು ಮಾತ್ರ ಸತ್ಯ. ಇದಕ್ಕೆ ಎಲ್ಲಾದರೂ ಒಂದು ಕಡೆ ರೂಪ ಕೊಡಬೇಕು ಎಂದು ಅಂದಿನ ಮುಖ್ಯಮಂತ್ರಿಗಳು ತೆಗೆದುಕೊಂಡಂಥ ತೀರ್ಮಾನಕ್ಕೆ ನಾವು ಸಹಭಾಗಿಯಾಗಿ ಕಾರ್ಯಕ್ರಮವನ್ನು ಮಾಡುತ್ತಿದ್ದೇವೆಯೇ ವಿನಃ ಇದರ ಹಿಂದೆ ಬೇರೆ ಯಾವುದೇ ಉದ್ದೇಶ ಇಲ್ಲ. ಹಿಂದೆ ಬಿ.ಟಿ. ಸೋಮಣ್ಣನವರು ಬೆಂಗಳೂರಿನಲ್ಲಿದ್ದಂಥ ಎಲ್ಲರಿಗೂ ಅಲ್ಲಲ್ಲೇ ಒಂದು ಪೇಪರ್‌ನಲ್ಲಿ ಬರೆದು ಕೊಡುತ್ತಿದ್ದಂಥಾದ್ದು ತಮಗೆ ಗೊತ್ತಿದೆ. ಈಗ ಈ ಸೋಮಣ್ಣ ಬಂದು ಅದರ ಕೊಳೆಯನ್ನು ತೊಳೆದು ಏನಾದರೂ ಮಾಡಿ ಒಂದು ಪರ್ಯಾಯ ವ್ಯವಸ್ಥೆಯನ್ನು ಒಂದು ಕಾಯಕಲ್ಪ ಕೊಡಬೇಕಾಗುತ್ತದೆ ಎನ್ನುವ ಉದ್ದೇಶದಿಂದ ಮಾಡುತ್ತಿದ್ದೇನೆ. ನಾವು ಯಾವ ಸೊಸೈಟಿ, ಏಜೆಂಟ್ ಅಥವಾ ಮತ್ತೊಬ್ಬರ ಮುಖವನ್ನು ನೋಡಿದವರಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ನಾವೆಲ್ಲಾ ಚರ್ಚೆ ಮಾಡಿದ ಮೇಲೆ ತಾವು ದಯವಿಟ್ಟು ಉತ್ತರ ಹೇಳಿ.

ಶ್ರೀ ಟಿ.ಬಿ. ಜಯಚಂದ್ರ : ತಮ್ಮ ಮಾತನ್ನು ಒಪ್ಪುವುದಕ್ಕೆ ನಾನು ತಯಾರಿಲ್ಲ. ಬಿ.ಡಿ.ಎ. ಎಂದರೆ ಅದೊಂದು ಲೀಗಲಿ ಕ್ರಿಯೇಟೆಡ್ ಸ್ಟ್ಯಾಚುಟರಿ ಬಾಡಿ. ಸರ್ಕಾರದ ಪರವಾಗಿ ಕ್ರಿಯೇಟ್ ಮಾಡಿರತಕ್ಕಂಥ ಒಂದು ಅಥಾರಿಟಿ ಅದು. ಆ ಅಥಾರಿಟಿಯಲ್ಲಿ ನಾವು ನಿವೇಶನವನ್ನು ಕೊಡುತ್ತೇವೆ ಎಂದು ಅರ್ಜಿಗಳನ್ನು ಕರೆದು, ಡೆಪಾಸಿಟ್ ಹಣವನ್ನು ತೆಗೆದುಕೊಂಡಿರಿ. ಇದು ಎಷ್ಟೆಂದರೆ 60x40 ನಿವೇಶನಕ್ಕೆ 6 ಸಾವಿರ, 50x80 ನಿವೇಶನಕ್ಕೆ 15 ಸಾವಿರ ಈ ರೀತಿಯಾಗಿ ಡೆಪಾಸಿಟ್ ತೆಗೆದುಕೊಂಡಿದ್ದೀರಿ. ರಿಜಿಸ್ಟ್ರೇಷನ್ ಚಾರ್ಜ್ ಒಂದು ಕಡೆಯಾದರೆ ಅಪ್ಲಿಕೇಷನ್ ಹಾಕುವಾಗ ಡೆಪಾಸಿಟ್ ಅಮೌಂಟ್ ಕಲೆಕ್ಟ್ ಮಾಡುವುದು ಇನ್ನೊಂದು ಕಡೆ. ಇವತ್ತಲ್ಲ ನಾಳೆ ನಮಗೆ ನಿವೇಶನವನ್ನು ಕೊಡುತ್ತಾರೆ ಎನ್ನುವ ನಂಬಿಕೆಯಿಂದ ಜನ ಅರ್ಜಿಗಳನ್ನು ಹಾಕಿರುತ್ತಾರೆ. ಅದೇ ಸರ್ಕಾರ ಮತ್ತು ಜನಗಳ ಮಧ್ಯೆ ಇರತಕ್ಕಂಥ ನಂಬಿಕೆ. ಇವತ್ತು ನೀವು, ನಾವು ದುಡ್ಡನ್ನು ವಾಪಸ್ಸು ಕೊಡುತ್ತಿದ್ದೇವೆ ಎಂದು ಹೇಳಿದರೆ, ಜನ ಯಾವ ರೀತಿಯಾಗಿ ನಿವೇಶನವನ್ನು ಪಡೆಯಬೇಕು. ಒಂದು ಸಾರಿ ನೀವು ದುಡ್ಡನ್ನು ಅಕ್ಸೆಪ್ಟ್ ಮಾಡಿದ ಮೇಲೆ ನಿವೇಶನವನ್ನು ಕೊಡಲೇಬೇಕು. ಇವತ್ತಲ್ಲ ನಾಳೆ ಕೊಡುವಂಥಾದ್ದು ತೀರ್ಮಾನವಾಗಬೇಕು. ಅದನ್ನು ಕೊಡದೇ ಇದ್ದಂಥ ಸಂದರ್ಭದಲ್ಲಿ ನೀವು ಅವರ ಹಣವನ್ನು ಬಡ್ಡಿ ಸಮೇತ ವಾಪಸ್ಸು ಕೊಟ್ಟಾಗ ಜನ ಅದನ್ನು ಮೆಚ್ಚುತ್ತಾರೆ, ಅದನ್ನು ಒಪ್ಪುತ್ತಾರೆ. ಆದರೆ ಇವತ್ತು ಮೊದಲೇ ಹಾಕಿದ್ದರಿಂದ ಬರೀ ಅಸಲನ್ನು ಮಾತ್ರ ಕೊಟ್ಟಿದ್ದೇವೆ ಎಂದು ಹೇಳುವುದಾದರೆ, ಅದು ಸರ್ಕಾರ ಕ್ರಿಯೇಟ್ ಮಾಡಿದಂಥ ಅಥಾರಿಟಿಗಳು ವಂಚನೆ ಮಾಡಿದ ಹಾಗೆ ಆಗುತ್ತದೆ. ಆ ಮಟ್ಟಕ್ಕೆ ಹೋಗಬಾರದು. ಇಲ್ಲಿ ಆ ಕೆಲಸ ಆಗಿದೆ. ಸೋಮಣ್ಣನವರೇ, ನಾನು ನಿಮಗೆ ಒಂದು ಸಲಹೆಯನ್ನು ಕೊಡುತ್ತೇನೆ, ಹಿಂದೆ ಇದ್ದಂಥ ಬಿ.ಟಿ. ಸೋಮಣ್ಣನವರು ಕುಳಿತ ಕಡೆ ಸೈಟುಗಳನ್ನು ಅಲಾಟ್ ಮಾಡುತ್ತಿದ್ದಂಥ ಪರಿಸ್ಥಿತಿ ಇತ್ತು. ಅವರು ದಾವಣಗೆರೆಯಿಂದ ಬಂದು ಬೆಂಗಳೂರಿನಲ್ಲೇ ಹುಟ್ಟಿ ಬೆಳೆದಂಥ ಈ ಸೋಮಣ್ಣನವರಿಂದ ಒಂದು ಒಳ್ಳೆಯ ಕೆಲಸ ಮಾಡಲು ಸಾಧ್ಯವಾದರೆ ಆದರಿಂದ

ಬಿ.ಡಿ.ಎ. ಉಳಿಯುತ್ತದೆ. ಈ ಲೆಜಿಸ್ಲೇಷನ್ ಮಾಡುವುದರಿಂದ ಅದು ಖಂಡಿತವಾಗಿ ನೂರಕ್ಕೆ ನೂರರಷ್ಟು ಉಳಿಯುವುದಿಲ್ಲ. ಆದ್ದರಿಂದ ಒಂದು ಕೆಲಸ ಮಾಡಿ. ಈ ವಿಧಾನ ಸಭೆಯಲ್ಲಿ ಈ ಬಗ್ಗೆ ಅನೇಕ ಬಾರಿ ಚರ್ಚೆಯಾಗಿದೆ. ಬಿ.ಡಿ.ಎ.ಯನ್ನು ಅಬಾಲಿಷ್ ಮಾಡಬೇಕು, ಅವರ ಉದ್ದೇಶ ಸಾರ್ಥಕವಾಗುತ್ತಿಲ್ಲ ಎನ್ನುವುದು ಇದೆ. ಬಿ.ಡಿ.ಎ. ಇವತ್ತು ಭೂಮಿಯನ್ನು ಅಕ್ವೈರ್ ಮಾಡಿಕೊಂಡರೆ ಜಮೀನ್ದಾರರು ನಾಳೆ ಬೆಳಿಗ್ಗೆ ಕೋರ್ಟ್‌ಗೆ ಹೋಗಿ ಕೇಸನ್ನು ಹಾಕಿರುತ್ತಾರೆ. ಇವತ್ತು ಅಲ್ಲಿ ಸಂಬಳ ಕೊಡಲೂ ದುಡ್ಡಿಲ್ಲ ಎನ್ನುವುದು ಎಲ್ಲವೂ ಗೊತ್ತಿರತಕ್ಕಂಥಾದ್ದೇ. ಈ ವ್ಯವಸ್ಥೆ ಬಿಟ್ಟು ನಮ್ಮಲ್ಲಿ ಬೇರೆ ವ್ಯವಸ್ಥೆ ಇಲ್ಲವೇ? ದೆಹಲಿಯಲ್ಲಿ ಏನು ವ್ಯವಸ್ಥೆ ಇದೆ, ಮದರಾಸಿನಲ್ಲಿ ಏನು ವ್ಯವಸ್ಥೆ ಇದೆ, ಆ ರೀತಿಯ ಒಂದು ಮಸೂದೆಯನ್ನು ಸಮಗ್ರವಾಗಿ ತನ್ನಿ. ಬಿ.ಡಿ.ಎ.ಯನ್ನು ಅಬಾಲಿಷ್ ಮಾಡಿ. ಆ ಪ್ರಕಾರವಾಗಿ ನೀವು ತಂದರೆ ನಿಮಗೆ ಹೆಸರಾದರೂ ಬರುತ್ತದೆ. ಆ ಕೆಲಸವನ್ನು ಮಾಡಿ. ಅದನ್ನು ಬಿಟ್ಟು, ನಾವು ದುಡ್ಡು ವಾಪಸ್ಸು ಕೊಟ್ಟಿದ್ದೇವೆ ಎಂದರೆ ಅದು ಬಹಳ ದೊಡ್ಡ ಸಾಧನೆ ಎಂದು ತಿಳಿದುಕೊಳ್ಳಬೇಡಿ. ತಮ್ಮ ಒಡವೆಗಳನ್ನು ಅಡವಿಟ್ಟು ಅರ್ಜಿ ಹಾಕಿದವರಿದ್ದಾರೆ. 5-10 ವರ್ಷವಾದ ಮೇಲೆ ಅಸಲನ್ನು ಮಾತ್ರ ತೆಗೆದುಕೊಂಡಿರತಕ್ಕಂಥ ಜನರಿಗೆ ನೀವು ಏನು ಪರಿಹಾರ ಕೊಟ್ಟ ಹಾಗೆ ಆಯಿತು. ಒಂದು ಕಡೆ ನಿವೇಶನವನ್ನೂ ಕೊಡಲಿಲ್ಲ. ಅವರ ಹಣಕ್ಕೆ ಬಡ್ಡಿಯನ್ನೂ ಕೊಡಲಿಲ್ಲ. ದುಡ್ಡು ವಾಪಸ್ಸು ಕೊಟ್ಟಿದ್ದೇವೆ ಎನ್ನುವ ದೊಡ್ಡ ಹೆಗ್ಗಳಿಕೆ ನಿಮಗೆ ಬೇಡ. ಸರ್ಕಾರ ಅರ್ಜಿಗಳನ್ನು ಕರೆದಾಗ, ಸಾಮಾನ್ಯ ಜನರ ನಂಬಿಕೆ ಏನೆಂದರೆ, ಇವತ್ತಲ್ಲ ನಾಳೆ ನಿವೇಶನ ಕೊಡುತ್ತಾರೆ ಎನ್ನುವ ಭಾವನೆ ಇರುತ್ತದೆ. ಅದಕ್ಕೆ ಧಕ್ಕೆ ಬರಬಾರದು. ಇವತ್ತು ಸರ್ಕಾರದಲ್ಲಿ ನೀವು ಕುಳಿತಿರಬಹುದು, ನಾಳೆ ಇನ್ನೊಬ್ಬರು ಕೂರಬಹುದು. ಯಾರೇ ಇರಲಿ, ಅವರು ಆ ನಂಬಿಕೆಯನ್ನು ಉಳಿಸಿಕೊಂಡು ಹೋದಾಗ ಮಾತ್ರ ಜನ ಈ ವ್ಯವಸ್ಥೆಯನ್ನು ನಂಬುತ್ತಾರೆ. ಇಲ್ಲದಿದ್ದರೆ ನಂಬುವುದಿಲ್ಲ. ನೀವು ಮಾಡುತ್ತಿರುವ ಕ್ರಮದಿಂದ ಜನ ಸಂಪೂರ್ಣವಾಗಿ ವಿಶ್ವಾಸವನ್ನು ಕಳೆದುಕೊಳ್ಳುತ್ತಾರೆ. ಆ ಮಟ್ಟಕ್ಕೆ ಅದು ಹೋಗುತ್ತದೆ. ನಿಮ್ಮನ್ನೇ ಅಲ್ಲ, ಯಾರನ್ನೂ ನಂಬದೇ ಇರುವಂಥ ಪರಿಸ್ಥಿತಿಯಾಗುತ್ತದೆ ಎನ್ನುವುದನ್ನು ನೀವು ಗಮನದಲ್ಲಿ ಇರಬೇಕು.

ಶ್ರೀ ವಾಟಾಳ್ ನಾಗರಾಜ್ : ಸುಮಾರು ಹತ್ತು ವರ್ಷಗಳಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಅಧ್ಯಕ್ಷರು ಇರಲಿಲ್ಲ. ಅಧಿಕಾರಿಗಳೇ ಅಧ್ಯಕ್ಷರಾಗಿ ಬರುತ್ತಿದ್ದರು. ಯಾರ್‍ಯಾರನ್ನೋ ಅಧ್ಯಕ್ಷರಾಗಿ ನೇಮಿಸುತ್ತಿದ್ದರು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇರತಕ್ಕಂಥ ಉದ್ದೇಶವೇನು ಎನ್ನುವುದು ಬಹಳ ಪ್ರಾಮುಖ್ಯವಾದುದು. ಮಾನ್ಯ ಸೋಮಣ್ಣನವರಿಗೆ ನಾನು ನೇರವಾಗಿ ಹೇಳುತ್ತಿದ್ದೇನೆ, ಅದರ ಉದ್ದೇಶವೆಂದರೆ ನಿವೇಶನಗಳನ್ನು ಕೊಡುವುದು, ಹೊಸಹೊಸ ಬಡಾವಣೆಗಳನ್ನು ಮಾಡುವುದು ಮತ್ತು ಆ ಬಡಾವಣೆಗಳನ್ನು ಅಭಿವೃದ್ಧಿ ಪಡಿಸುವುದು, ಇದು ಬಹಳ ಪ್ರಾಮುಖ್ಯವಾದುದು. ಈ ಯಾವುದೇ ಕೆಲಸ ಇಲ್ಲದೇ ಇರತಕ್ಕಂಥ ಆ ಅಭಿವೃದ್ಧಿ ಪ್ರಾಧಿಕಾರ ಬೇಕೇ ಎನ್ನುವುದು ನನ್ನ ನೇರವಾದ ಪ್ರಶ್ನೆ. ಆ ಅಭಿವೃದ್ಧಿ ಪ್ರಾಧಿಕಾರ ಬೇಕು ಎನ್ನುವುದಾದರೆ ನೀವು ಹೊಸ ಹೊಸ ಬಡಾವಣೆಗಳನ್ನು ಮಾಡಬೇಕು. ಕಳೆದ 10 ವರ್ಷಗಳಿಂದ ಅಲ್ಲಿ ಅಧ್ಯಕ್ಷರು ಇರಲಿಲ್ಲ. ಈಗ ಹೊಸದಾಗಿ ಈ ಸದನದ ಸದಸ್ಯರಾದ ಶಿವರಾಮೇಗೌಡರು ಅಧ್ಯಕ್ಷರಾಗಿದ್ದಾರೆ. ಎಷ್ಟು ಬಡಾವಣೆಗಳನ್ನು ಹೊಸದಾಗಿ ತೆಗೆದುಕೊಂಡಿದ್ದಾರೆ ಎನ್ನುವುದನ್ನು ಅವರು ಹೇಳಬೇಕು. ಒಂದು ನಿವೇಶನವನ್ನೂ ಕೊಡಲು ಆಗಲಿಲ್ಲವೆಂದರೆ ಅದು ಏಕೆ

ಇರಬೇಕು? ಆದರ ಆಯುಕ್ತರಾದ ಲಕ್ಷ್ಮಿ ವೆಂಕಟಾಚಲ್‌ರವರ ಬಗ್ಗೆ ನನಗೆ ಬಹಳ ಗೌರವಿದೆ. ಬಹಳ ಶಕ್ತಿಯುತವಾದಂಥ ಮಹಿಳೆ ಅವರು. ಅದರ ಬಗ್ಗೆ ತಕರಾರಿಲ್ಲ.

ಆಸ್ತಿ ಉಳಿಸತಕ್ಕಂಥಾದ್ದು ಮಾಡುತ್ತಿದ್ದಾರೆ. ಆದರೆ ಬಹಳ ಕೋಪತಾಪವಿದೆ. ಈ ಪ್ರಜಾತಂತ್ರ ವ್ಯವಸ್ಥೆಗೆ ಅದು ಹೊಂದಾಣಿಕೆಯಾಗುತ್ತಿಲ್ಲ. ಆದರೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಸ್ತಿಯನ್ನು ಉಳಿಸುವುವಲ್ಲಿ ನಾನು ಅವರನ್ನು ಅಭಿನಂದಿಸುತ್ತೇನೆ. ಶಿವರಾಮೇಗೌಡರು ಅಧ್ಯಕ್ಷರಾಗಿದ್ದಾರೆ ಮತ್ತು ಅವರು ಅಲ್ಲಿ ಆಯುಕ್ತರಾಗಿದ್ದಾರೆ. ನಾನು ಏನು ಹೇಳುತ್ತೇನೆ ಎಂದರೆ, ನಿವೇಶನ ಕೊಡಲು ಆಗಲಿಲ್ಲವೆಂದರೆ ಅದು ಬೇಕಾಗಿಲ್ಲ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ನಾವು ಇವತ್ತಿನಿಂದ ರದ್ದು ಮಾಡಿದ್ದೇವೆ, ಇನ್ನು ಅಭಿವೃದ್ಧಿ ಪ್ರಾಧಿಕಾರ ಬೇಡ ಎಂದು ಒಂದು ಮಸೂದೆಯನ್ನು ತೆಗೆದುಕೊಂಡು ಬನ್ನಿ. ಅದು ಬಿಟ್ಟು, ಈ ಅಭಿವೃದ್ಧಿ ಪ್ರಾಧಿಕಾರ ಇರುವುದು ಏತಕ್ಕೋಸ್ಕರ ಎನ್ನುವುದು ನನ್ನ ನೇರವಾದ ಪ್ರಶ್ನೆ. ಸುಮಾರು ಮೂರು ವರ್ಷಗಳ ಹಿಂದೆ ನಾನು ಈ ಸದನದಲ್ಲಿ ಹೇಳಿದ್ದೆ. ಮೂಲೆ ನಿವೇಶನಗಳು ಉಳಿಯಬೇಕು, ಅವುಗಳನ್ನು ಹರಾಜು ಹಾಕಬಾರದು ಎಂದು. ಸಾರ್ವಜನಿಕ ಕೆಲಸಕ್ಕೋಸ್ಕರವಾಗಿ, ಸರ್ಕಾರಿ ಜಮೀನಾಗಿ ಅದು ಉಳಿಯಬೇಕೇ ಹೊರತು ಅದನ್ನು ಹರಾಜು ಹಾಕಬಾರದು. ಹರಾಜು ಹಾಕಿದರೆ ಅದನ್ನು ಕೊಂಡುಕೊಳ್ಳುವವರು ಕರ್ನಾಟಕದ ಕನ್ನಡಿಗರಲ್ಲ. ಗುಜರಾತಿನಿಂದ, ಆಂಧ್ರದಿಂದ, ಉತ್ತರ ಪ್ರದೇಶದಿಂದ ಬರತಕ್ಕಂಥ ಕೋಟ್ಯಾಧೀಶ್ವರರು ಇಂಥ ಮೂಲೆ ನಿವೇಶನಗಳನ್ನು ಕೊಂಡುಕೊಳ್ಳುತ್ತಾರೆ. ಅವರು ಕೊಂಡುಕೊಂಡರೆ ಅದು ಅವರ ಸ್ವತ್ತು ಆಗುತ್ತದೇ ಹೊರತು ನಮ್ಮ ಸ್ವತ್ತು ಆಗುವುದಿಲ್ಲ. ಆದ್ದರಿಂದ ಮೊದಲು ಮೂಲೆ ನಿವೇಶನವನ್ನು ಮಾರತಕ್ಕಂಥಾದ್ದನ್ನು ನಿಲ್ಲಿಸಬೇಕು. ಎರಡನೆಯದಾಗಿ ನ್ಯಾಯಾಲಯದಲ್ಲಿ ಕೇಸುಗಳನ್ನು ಹಾಕಿರುವ ಎಲ್ಲಾ ಮಾಲೀಕರನ್ನು ಕರೆದು ರಾಜಿ ಮಾಡಿಕೊಳ್ಳುವ ಮೂಲಕ, ನಿಮಗೆ ಎಷ್ಟು ಸೈಟುಗಳನ್ನು ಕೊಡಬೇಕು ಎಂದು ಕೇಳಿ, 10 ಎಕರೆಗೆ ಎಷ್ಟು, 5 ಎಕರೆಗೆ ಎಷ್ಟು 3 ಎಕರೆಗೆ ಎಷ್ಟು ಕೊಡಬೇಕು ಎನ್ನುವುದನ್ನು ರಾಜೀ ಮಾಡಬೇಕು. ಹಿಂದೆ ಹೀಗೆ ರಾಜೀ ಮೂಲಕವೇ ಪ್ರಾಧಿಕಾರ ನಡೆದದ್ದು. ರಾಜೀ ಮೂಲಕ ಇದು ನಡೆಯಬೇಕೇ ಹೊರತು ಇದು ಮಿಲಿಟರಿ ಆಫೀಸ್ ಅಲ್ಲ, ಇದು ದಂಡಿನ ಆಳ್ವಿಕೆಯಲ್ಲ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ನೀವು ಒಂದು ಜಮೀನನ್ನು ಅಕ್ವೈರ್ ಮಾಡಿಕೊಂಡಾಗ, ಆ ಜಮೀನಿನ ಮಾಲೀಕರ ಜೊತೆ ಮಾತನಾಡಿ, ಇಷ್ಟು ಪ್ರದೇಶವನ್ನು ನಾವು ತೆಗೆದುಕೊಳ್ಳುತ್ತೇವೆ, ಇಷ್ಟು ನಿವೇಶನಗಳನ್ನು ನಿಮಗೆ ಕೊಡುತ್ತೇವೆ ಎಂದು ರಾಜಿ ಮಾಡಿಕೊಳ್ಳಬೇಕೋ ಅಥವಾ ಬೇಡವೋ? ನೀವು ರಾಜಿಯನ್ನೇ ಮಾಡಲಿಲ್ಲವೆಂದರೆ ಆಗುವುದಿಲ್ಲ. ನೀವು ಅವನಿಗೆ ಒಂದು ಸೈಟನ್ನೂ ಕೊಡುವುದಿಲ್ಲ. ಅವನಿಗಾಗಲಿ, ಅವನ ಮಗನಿಗಾಗಲೀ ಬದುಕುವುದಕ್ಕೆ ಒಂದು ಸೈಟು ಬೇಕಲ್ಲಾ. ಹತ್ತು ಎಕರೆ ಜಮೀನನ್ನು ನೀವು ತೆಗೆದುಕೊಂಡಾಗ ಅದರ ಮಾಲೀಕನಾದ ಆ ವ್ಯಕ್ತಿಗೆ ನೀವು ಒಂದೆರಡು ಸೈಟುಗಳನ್ನು ಕೊಡಲೇಬೇಕು. ನೀವು ಸಂಪೂರ್ಣವಾಗಿ ಯಾವುದನ್ನೂ ಕೊಡುವುದಿಲ್ಲ ಎಂದರೆ ಅವನು ನೇರವಾಗಿ ನ್ಯಾಯಾಲಯಕ್ಕೆ ಹೋಗುತ್ತಾನೆ. ಹೀಗೆ ನ್ಯಾಯಾಲಯಕ್ಕೆ ಹೋಗಿರತಕ್ಕಂಥಾದ್ದು ಕನಿಷ್ಟವೆಂದರೆ ಸಾವಿರಾರು ಎಕರೆ ಪ್ರದೇಶವಾಗುತ್ತದೆ. ಈ ಸಾವಿರಾರು ಎಕರೆ ಪ್ರದೇಶಗಳನ್ನು ತಾವು ರಾಜೀ ಮೂಲಕ ತೀರ್ಮಾನ ಮಾಡುವುದಾದರೆ ಹೆಚ್ಚು ಕಡಿಮೆ ಆರು ತಿಂಗಳಲ್ಲಿ ಈ ಸಮಸ್ಯೆ ಬಗೆಹರಿಯುತ್ತದೆ ಎಂದು ನನಗನ್ನಿಸುತ್ತದೆ. ಈ ಆಯುಕ್ತರನ್ನು

ಬದಲಾವಣೆ ಮಾಡಲೇ ಬೇಡಿ. ಆ ಆಯುಕ್ತರು ಅಲ್ಲಿ ಇರಲಿ. ಇವರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಆಯುಕ್ತರಾಗಿರುವುದಕ್ಕೆ ನಾವು ಸಂತೋಷ ಪಡುತ್ತೇನೆ. ಇಲ್ಲದಿದ್ದರೆ ಅನೇಕ ಜನ ಲೂಟಿ ಹೊಡೆದುಬಿಡುತ್ತಿದ್ದರು. ಲಕ್ಷಾಂತರ ರೂಪಾಯಿ, ಕೋಟ್ಯಾಂತರ ರೂಪಾಯಿ ಲೂಟಿಯಾಗತಕ್ಕಂಥಾದ್ದು ನಿಂತಿದೆ. ಅದಕ್ಕಾಗಿ ಪ್ರಶಂಸೆ ಮಾಡಬೇಕಾಗಿದೆ ಮತ್ತು ಅವರಿಗೆ ಅಭಿನಂದನೆ ಸಲ್ಲಿಸಬೇಕಾಗಿದೆ. ಅದರ ಬಗ್ಗೆ ಎರಡನೇ ಅಭಿಪ್ರಾಯವಿಲ್ಲ. ಆದರೆ ಒಂದು ಮಾತನ್ನು ನಾನು ಮತ್ತೊಮ್ಮೆ, ಮತ್ತೊಮ್ಮೆ ತಮಗೆ ಹೇಳುತ್ತೇನೆ. ಹಿಂದೆ ನಿವೇಶನಕ್ಕಾಗಿ ಅರ್ಜಿ ಹಾಕಿದವರಿಗೆ ತಾವು ಹಣವನ್ನು ವಾಪಸ್ಸು ಕೊಟ್ಟಿರಿ. ನಾವು ಅರ್ಜಿ ಹಾಕಿದ್ದು ನಮಗೆ ಹಣ ವಾಪಸ್ಸು ಕೊಡಿ ಎಂದು ಅಲ್ಲ. ನಮಗೆ ನಿವೇಶನ ಬೇಕು ಎಂದು. ನಿವೇಶನ ಕೊಡದೇ, ಹಣ ವಾಪಸ್ಸು ಕೊಡುವುದಕ್ಕಲ್ಲ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವಿರುವುದು. ನಿವೇಶನವನ್ನೇ ಕೊಡಬೇಕು. ನಿವೇಶನವನ್ನು ಕೊಡಬೇಕಾದರೆ, ಈಗಾಗಲೇ ಇರತಕ್ಕಂಥ ಎಲ್ಲಾ ಕೇಸುಗಳನ್ನೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ವಾಪಸ್ಸು ಪಡೆಯಬೇಕು. ಆ ಜಮೀನುಗಳ ಮಾಲೀಕರ ಜೊತೆ ಮಾತುಕತೆಯಾಡಬೇಕು. ಮತ್ತು ಇವತ್ತು ಆ ಜಮೀನುಗಳಿಗೆ ಮಾರುಕಟ್ಟೆ ರೇಟ್ ಏನಿದೆ, ಆ ರೇಟಿಗೆ ನೀವು ಮಾತನಾಡಬೇಕು. ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಪಡೆಯುವಂಥ ಜಮೀನಿನ ಬದಲು ಬೇರೆ ಪರ್ಯಾಯವಾದ ನೆಲವನ್ನು ಕೊಡಬೇಕು. ಅಂದರೆ ನೆಲಗಳ್ಳರಿಂದ ಸೈಟುಗಳನ್ನು ಕೊಡಿಸಬೇಕು. ಎಷ್ಟೋ ಸೈಟುಗಳನ್ನು ಅವರು ಹಂಚುವುದಕ್ಕೆ ಹೋಗಿದ್ದಾರೆ. ಅವರದೇ ಪ್ರಾಧಿಕಾರ, ಅವರದೇ ರಸ್ತೆ, ಅವರದೇ ಕೊಳವೆ ಬಾವಿಗಳು, ಅವರು ಮಾಡಿದಷ್ಟು ಸೈಟುಗಳು, ಅವರು ಹಾಕಿದಷ್ಟು ರೇಟು ಆಗಿದೆ. ಇವತ್ತು ಎಷ್ಟೋ ಲಕ್ಷಾಂತರ ಜನ ಇಂಥ ಸೊಸೈಟಿಗಳಿಗೆ ಹಣವನ್ನು ಕಟ್ಟಿ ಸೈಟು ಇಲ್ಲದೇ ಇರತಕ್ಕಂಥವರಿದ್ದಾರೆ. ಸೈಟು ಬೇಕು ಎಂದು ಕೇಳಿದವರು ಒಬ್ಬರು, ಕೊನೆಗೆ ಸೈಟು ಅಲಾಟ್ ಆಗತಕ್ಕಂಥಾದ್ದು ಇನ್ನೊಬ್ಬರಿಗೆ. ಈ ರೀತಿಯಲ್ಲಿ ಬೆಂಗಳೂರು ನಗರದಲ್ಲಿ ಕನಿಷ್ಠವೆಂದರೆ 10 ಲಕ್ಷ ಜನ ಇಂಥ ಸಹಕಾರ ಸಂಘಗಳ ಸೊಸೈಟಿಗಳಿಗೆ ಹಣವನ್ನು ಕಟ್ಟಿ ನಿವೇಶನ ದೊರೆಯದೇ ಇರತಕ್ಕಂಥವರಿದ್ದಾರೆ. ಆದ್ದರಿಂದ, ಈ ಸೊಸೈಟಿಗಳ ಬಗ್ಗೆ ತನಿಖೆಯಾಗಬೇಕು. ಬೆಂಗಳೂರಿನ ಸುತ್ತ ಆಗಿರತಕ್ಕಂಥ ಈ ನೆಲಗಳ್ಳರ ಸೊಸೈಟಿಗಳು ಎಷ್ಟೆಷ್ಟು ಮಾಡಿದ್ದಾರೆ ಎನ್ನುವ ಬಗ್ಗೆ ಸಂಪೂರ್ಣವಾಗಿ ಸಮಗ್ರವಾದ ತನಿಖೆಯಾಗಬೇಕು. ಬೆಂಗಳೂರಿನ ಸುತ್ತ ಆಗಿರತಕ್ಕಂಥ ಈ ನೆಲಗಳ್ಳರ ಸೊಸೈಟಿಗಳು ಎಷ್ಟೆಷ್ಟು ಸದಸ್ಯರನ್ನು ಹೊಂದಿದ್ದಾರೆ, ಎಷ್ಟು ಸದಸ್ಯರಿಗೆ ನಿವೇಶನವನ್ನು ಕೊಟ್ಟಿದ್ದಾರೆ, ಎಷ್ಟು ಸದಸ್ಯರಿಗೆ ನಿವೇಶನ ಕೊಟ್ಟಿಲ್ಲ, ಪ್ರಾರಂಭದಲ್ಲಿ ಅರ್ಜಿ ಹಾಕಿದಂಥ ಯಾರ್‍ಯಾರಿಗೆ ನಿವೇಶನ ದೊರಕಿಲ್ಲ ಇಂಥವರೆಲ್ಲರನ್ನೂ ಸಂಪೂರ್ಣ ಪಟ್ಟಿ ಮಾಡಬೇಕೆಂದು ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡುತ್ತೇನೆ. ಈಗ ಇಲ್ಲಿ ಬಿ.ಡಿ.ಎ. ಅಧ್ಯಕ್ಷರು ಮತ್ತು ಮಂತ್ರಿಗಳಿದ್ದಾರೆ. ನೀವು ಎರಡರಲ್ಲಿ ಒಂದನ್ನು ತೀರ್ಮಾನ ಮಾಡಿ ಎಂದು ನಾನು ನಿಮಗೆ ಹೇಳುತ್ತೇನೆ. ಒಂದು ಸಾವಿರ, ಎರಡು ಸಾವಿರ ನಿವೇಶನಗಳನ್ನು ಕೊಡುವುದಾದರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಬೇಡ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಬೇಕು ಎನ್ನುವುದಾದರೆ ನೀವು ಹೊಸ ಬಡಾವಣೆಗಳನ್ನು ಮಾಡಿ ಒಂದು ವರ್ಷಕ್ಕೆ ಕನಿಷ್ಠವೆಂದರೆ ಎರಡು ಲಕ್ಷ ನಿವೇಶನಗಳನ್ನು ಕೊಡಬೇಕು. ಇದು ಪ್ರಾರಂಭವಾದದ್ದು ಬಿ.ವಿ. ಲಕ್ಕಪ್ಪನವರ ಕಾಲದಲ್ಲಿ. ಅವರನ್ನು ನೆನೆಸಿಕೊಳ್ಳಬೇಕು. ಬಿ.ವಿ.ಲಕ್ಕಪ್ಪನವರ

ಕಾಲದಲ್ಲಿ ಆರಂಭವಾದಂಥ ಈ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಕಳೆದ 8 ವರ್ಷಗಳಿಂದ ಅಧ್ಯಕ್ಷರಿಲ್ಲದೇ ಈಗ ಹೊಸದಾಗಿ ಅಧ್ಯಕ್ಷರನ್ನು ನೇಮಕ ಮಾಡಿದ್ದಾರೆ. ಇದು ಒಂದು ಕಡೆಯಾದರೆ, ಮತ್ತೊಂದು ಕಡೆ ಬೆಂಗಳೂರಿಗೆ ಬರತಕ್ಕಂಥ ವಲಸೆಯನ್ನು ತಡೆಯುವುದಕ್ಕಾಗುತ್ತಿಲ್ಲ. 15 ವರ್ಷಗಳ ಹಿಂದೆ 15 ಲಕ್ಷ ಜನ ಇದ್ದಂಥ ಬೆಂಗಳೂರು ನಗರದಲ್ಲಿ ಇಂದು 50 ಲಕ್ಷ ಜನರಿದ್ದಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಬೆಂಗಳೂರು ಮಹಾನಗರ ಪಾಲಿಕೆ ಸಹೋದರರಿದ್ದ ಹಾಗೆ. ಬೆಂಗಳೂರಿಗೆ ಬೇಕಾದಂಥ ಕುಡಿಯುವ ನೀರಿನ ವ್ಯವಸ್ಥೆ, ಸಂಪರ್ಕ ವ್ಯವಸ್ಥೆ ಯಾವುದೂ ಆಗುತ್ತಿಲ್ಲ. ಪ್ರತಿದಿನವೂ ಜನಸಂಖ್ಯೆ ಜಾಸ್ತಿಯಾಗುತ್ತಿದ್ದು, ವರ್ಷಕ್ಕೆ ಸುಮಾರು 50 ಸಾವಿರ ಜನಸಂಖ್ಯೆ ಜಾಸ್ತಿಯಾಗುತ್ತಿದೆ. ಜನಸಂಖ್ಯೆಯನ್ನು ಕಡಿಮೆ ಮಾಡಲು ನಮ್ಮಲ್ಲಿ ಯಾವುದೇ ಒಂದು ನೀತಿ ಇಲ್ಲ. ಬೆಂಗಳೂರಿಗೆ ಬಂದಂಥ ಎಲ್ಲರಿಗೂ ನಿವೇಶನ ಕೊಡುವುದಕ್ಕಾಗುವುದಿಲ್ಲ. ರಸ್ತೆಗಳು ರಿಪೇರಿಯಾಗುವುದಿಲ್ಲ, ಯಾವ ವ್ಯವಸ್ಥೆಯೂ ಇಲ್ಲ. ಎಲ್ಲರಿಗೂ ನಿವೇಶನ ಕೊಡುವುದಾದರೆ ಪ್ರಾಧಿಕಾರವನ್ನು ಉಳಿಸಿಕೊಳ್ಳಿ. ಇಲ್ಲವೆಂದರೆ, ಅದನ್ನು ರದ್ದು ಮಾಡಿ. ಅಂತಿಮವಾಗಿ ನಾನು ಕೇಳುತ್ತಿದ್ದೇನೆ, ವಲಸೆ ತಡೆಯುವುದಕ್ಕೆ ನಿಮ್ಮ ಕಾರ್ಯಕ್ರಮವೇನು ಎನ್ನುವುದನ್ನು ಹೇಳಬೇಕು. ಯಾರು ಬೇಕಾದರೂ ಬರಲಿ, ಬೆಂಗಳೂರಿನಲ್ಲಿ ಇರಲಿ ಎಂದರೆ ಆಗುವುದಿಲ್ಲ. ಅದು ಒಳ್ಳೆಯ ಸೂಚನೆಯಲ್ಲ. ಮೊದಲು ನೀವು ಈಗಿರತಕ್ಕಂಥ 50 ಲಕ್ಷ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ರಸ್ತೆ ವ್ಯವಸ್ಥೆ, ನಿವೇಶನದ ವ್ಯವಸ್ಥೆ ಇವುಗಳ್ಯಾವುದನ್ನೂ ಮಾಡದೆ, ನಿಮ್ಮ ಇಚ್ಛೆ ಬಂದ ಹಾಗೆ ಮಾಡುವುದಕ್ಕೆ ಹೋದರೆ ಅದು ಒಳ್ಳೆಯದಲ್ಲ ಎನ್ನುವುದನ್ನು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇವೆ. ಆದ್ದರಿಂದ, ಈ ಮಸೂದೆಯನ್ನು ತರುವುದಕ್ಕೆ ಮೊದಲು ಸ್ವಲ್ಪ ಚಿಂತನೆ ಮಾಡಿ. ಇದನ್ನು ತಾವು ಜಂಟಿ ಸಲಹಾ ಸಮಿತಿಗೆ ಕಳುಹಿಸಿ, ಮುಂದಿನ ಜೂನ್ ತಿಂಗಳಲ್ಲಿ ನಾವು ಪುನಃ ಸಭೆ ಸೇರಿದಾಗ ಇದನ್ನು ಒಪ್ಪಿಕೊಳ್ಳೋಣ. ಅದರ ಬಗ್ಗೆ ನನ್ನ ಅಭ್ಯಂತರವೇನೂ ಇಲ್ಲ. ಬಡವರು ಮನೆಗಳನ್ನು ಕಟ್ಟಿಕೊಂಡಿದ್ದಾರೆ, ನಿಜ, ಅವನ್ನು ಒಡೆದು ಹಾಕಬೇಕು ಎಂದು ಯಾರೂ ಹೇಳುವುದಿಲ್ಲ. ಈ ರೀತಿ ಬಡವರ ಮನೆಗಳು ಯಾವು ಎಂದು ನೀವು ಒಂದು ಲಿಸ್ಟ್ ಮಾಡಬೇಕು. ಒಂದು ಕರ್ಮಕಾಂಡವೆಂದರೆ, ಬೆಂಗಳೂರು ವಿಮಾನ ನಿಲ್ದಾಣದಿಂದ ಟ್ರಿನಿಟಿ ಸರ್ಕಲ್‌ವರೆಗೆ ಕಟ್ಟಿರುವಂಥ ಕಟ್ಟಡಗಳು ಕಡಿಮೆ ಕಟ್ಟಡಗಳೇ. ಆ ಕಟ್ಟಡಗಳ ಬಗ್ಗೆ ನಿಮ್ಮ ಗಮನ ಹರಿಯಲಿಲ್ಲವೇ? ಅದೊಂದು ವಜ್ರದ ನಗರ. ಅವರು ಬಿ.ಡಿ.ಎ.ನಿಂದಲೂ ಪರ್ಮಿಷನ್ ತೆಗೆದುಕೊಂಡಿಲ್ಲ, ಯಾರಿಂದಲೂ ತೆಗೆದುಕೊಂಡಿಲ್ಲ. ಅವರಿಗೆ ಇಚ್ಛೆ ಬಂದ ಹಾಗೆ ಯದ್ವಾತದ್ವಾ ಕಟ್ಟಿದ್ದಾರೆ. ಕಿಡ್ಸ್ ಕೆಂಪ್‌ನ ಮನುಷ್ಯ ಬೆಂಗಳೂರಿನ ಜನರಿಗೆ ಏನು ಮೋಸ ಮಾಡಿದನೆಂದರೆ, ಮೊದಲು ಅಲ್ಲಿಗೆ ಒಂದು ದೊಡ್ಡ ಶಿವನನ್ನು ತಂದಿಟ್ಟರು. ನಮ್ಮ ಊರಿನ ಜನರೆಲ್ಲಾ ಶಿವನ ಮೂರ್ತಿ ಉದ್ಭವವಾಗಿದೆ ಎಂದು ನೋಡಿದ್ದೇ ನೋಡಿದ್ದು. ಈಗ ಶಿವನನ್ನು ಮುಚ್ಚಿ, ಅದರ ಮುಂದೆ ಒಂದು ದೊಡ್ಡ ಕಟ್ಟಡ ಬಂದಿದೆ. ಆ ಕಟ್ಟಡ ಅಕ್ರಮವಾಗಿ ಕಟ್ಟಲಾದ ಕಟ್ಟಡವಾಗಿದೆ. ಸರ್ಕಾರಕ್ಕೆ ತಾಕತ್ತಿದ್ದರೆ ಮಾಡಿ. ನಾನೇಕೆ ಕಮೀಷನರ್‌ರವರನ್ನು ಪ್ರಶಂಸೆ ಮಾಡುತ್ತೇನೆಂದರೆ ಅವರಿಗೆ ಅಧಿಕಾರ ಕೊಡಿ. ವಿಮಾನ ನಿಲ್ದಾಣದಿಂದ ಅಲ್ಲಿರುವ ಸಮಗ್ರ ಕಟ್ಟಡದ ಬಗ್ಗೆ ತನಿಖೆ ನಡೆಸಲಿ. ಡೈಮೆಂಡ್ ಡಿಸ್ಟ್ರಿಕ್ಟ್ ಏನದು? ನನಗನ್ನಿಸುತ್ತದೆ, ಇದು ಯಾರಿಗೂ ಗೌರವ ತರತಕ್ಕಂಥದ್ದಲ್ಲ. ಇದರಲ್ಲಿ ಕೆಲವು ರಾಜಕಾರಣಿಗಳು ಸೇರಿದ್ದಾರೆ. ಕೆಲವು ರಾಜಕಾರಣಿಗಳ

ಬೆಂಬಲ ಇದೆ. ವಿಮಾನ ನಿಲ್ದಾಣದಿಂದ ಟ್ರಿನಿಟಿ ಸರ್ಕಲ್‌ವರೆಗೂ ಕಟ್ಟಿರುವ ಕಟ್ಟಡಗಳ ಬಗ್ಗೆ ಒಂದು ಸಮಗ್ರ ತನಿಖೆಯಾಗಲಿ. ಶ್ರೀ ಸೋಮಣ್ಣನವರೇ ನಿಮಗೆ ಕೀರ್ತಿ ಬರುತ್ತದೆ, ಮಾಡಿ. ಇವತ್ತೇ ತೀರ್ಮಾನ ತೆಗೆದುಕೊಳ್ಳಿ. ಮಣಿಪಾಲದ ಎದುರು ಪಂಚತಾರಾ ಹೋಟೆಲೊಂದು ಬರುತ್ತಿದೆ. ಅದಕ್ಕೆ ಲೈಸೆನ್ಸ್ ಕೊಟ್ಟುವರಾರು? ಲೀಲಾ ಕೆಂಪೀಸ್ ಎಂಬ ದೊಡ್ಡ ಹೋಟೆಲ್. ಅದರ ಹಿಂದಿರುವವರಾರು? ಅದೇನು ಹುಡುಗಾಟವೇ? ಬೆಂಗಳೂರಿನ ಹಣೆಬರಹವೇನು? ಬೆಂಗಳೂರಿನ ಗತಿ ಏನಾಗಬೇಕು? ಬಡವರ್ಯ್ಯಾರಾದರೂ ಮನೆ ಕಟ್ಟಿದರೆ ಒಡೆಯುವುದಕ್ಕೆ ಹೋಗುತ್ತೀರಿ. ಬಡವರೇನಾದರೂ ಸಣ್ಣದು ಕಟ್ಟಿದರೆ ಅವರನ್ನು ನೀವು ಬಿಡುವುದಿಲ್ಲ. ಜಾಸ್ತಿ ಮನೆ ಕಟ್ಟಿದರೆ ಗುದ್ದಲಿ ಪೂಜೆ ಮಾಡುವುದಕ್ಕೆ ಹೋಗುತ್ತೀರಿ. ಈ ಪರಿಸ್ಥಿತಿಯಲ್ಲಿ ಸೋಮಣ್ಣನವರು ಅಧಿಕಾರ ವಹಿಸಿಕೊಂಡಿದ್ದಾರೆ, ಇದರ ಬಗ್ಗೆ ಅವರು ಹೇಳಬೇಕು. ನಿಮಗೆ ಗೊತ್ತಿದೆ. ರಾಜಕಾರಣಿಗಳು ಯಾರ್ಯಾರಿದ್ದಾರೆ? ನೀವು ಇಲ್ಲ. ಕೆಲವು ಮಂತ್ರಿಗಳಿದ್ದರು. ಅದನ್ನು ಹೇಳಬೇಕು. ಬಯಲಾಗಲಿ. ವಿನ್ಯಾಸ ಕೊಟ್ಟವರು ಯಾರು? ರಸ್ತೆ ಮಾಡಿದವರು ಯಾರು? ಯೋಜನೆ ಕೊಟ್ಟವರ್ಯ್ಯಾರು? ಯಾವುದು? ಯಾರ-ಆಸ್ತಿ ಅದು? ಆ ಜಾಗ ಯಾವುದು? ಆ ಜಾಗ ಸ್ವಲ್ಪ ಹೆಚ್ಚು ಕಡಿಮೆ 10 ಸಾವಿರ ಕೋಟಿ ರೂಪಾಯಿ ಬೆಲೆ ಬಾಳುತ್ತದೆ. ಆ ವಿಮಾನ ನಿಲ್ದಾಣದಿಂದ ಇಲ್ಲಿ ಬರತಕ್ಕದ್ದು. ಆ ಕಟ್ಟಡಗಳನ್ನು ಅಕ್ರಮವಾಗಿ ಕಟ್ಟಿದವರಾರು? ಅಕ್ರಮವಾಗಿ ಅಲ್ಲಿಯವರೆಗೆ ಕಟ್ಟುವುದಕ್ಕೆ ಬಿಟ್ಟವರ್ಯ್ಯಾರು? ರಾತ್ರೋರಾತ್ರಿ ಕಟ್ಟಡಗಳು ಎದ್ದಿವೆ. ಇದನ್ನು ತಾವೇನಾದರೂ ನೋಡಿದ್ದೀರಾ? ತನಿಖೆ ನಡೆಸಿದ್ದಾರಾ? ಯಾರೂ ಏನೂ ಮಾಡಿಲ್ಲ. ಈ ಸರ್ಕಾರದ 4 ವರ್ಷಗಳಲ್ಲಿ ಕಟ್ಟಿದರೆಂದು ನಾನು ಹೇಳುವುದಿಲ್ಲ ಇದು 10 ವರ್ಷಗಳಿಂದ ನಡೆದುಕೊಂಡು ಬಂದಿದೆ. ನಾನು ನೋಡಿದ ಹಾಗೆ, ಅಲ್ಲಿ ಮೈದಾನ ಮಾತ್ರ ಇತ್ತು, ಜಮೀನಿತ್ತು, ಆಕಡೆ ಹೋದಾಗ ನಾವು ನೋಡುತ್ತಿರುತ್ತೇವೆ. ಈ ಕಟ್ಟಡಗಳ ವಿನ್ಯಾಸ ಬರುವ ಕಟ್ಟಡದ ವ್ಯವಸ್ಥೆ, ನಗರ, ಮಹಾನಗರ ಪಾಲಿಕೆ ಕಮಿಷನರ್ ಗಮನಕ್ಕೆ ಬಂದಿಲ್ಲ ಅಭಿವೃದ್ಧಿ ಪ್ರಾಧಿಕಾರದ ಗಮನಕ್ಕೆ ಬಂದಿಲ್ಲ. ಅದರ ಮಾಲೀಕರು ಯಾರು? ಎಲ್ಲಾ ಹೊರಗಡೆಯವರು. ಅದರ ಷೇರ್ ಹೋಲ್ಡರ್ಸ್ ಯಾರು? ಕಂಪನಿಗಳ ಮಾಲೀಕರ್ಯ್ಯಾರು? ಎಲ್ಲಾ ಹೊರಗಡೆಯವರು. ಅದರ ಬಗ್ಗೆ ತಾವು ಉತ್ತರ ಕೊಡುವಾಗ ಹೇಳಬೇಕು. ಆಗ ನಿಮ್ಮನ್ನು ನಾನು ಪ್ರಶಂಸೆ ಮಾಡುತ್ತೇನೆ. ಇಲ್ಲವಾದರೆ ನೀವು ನಿಜವಾಗಲೂ ಕೆಲಸ ಮಾಡುತ್ತಿಲ್ಲವೆನ್ನುವ ಮಾತನ್ನು ನಾನು ಹೇಳಬೇಕಾಗುತ್ತದೆ. ಒಳ್ಳೆಯ ಕೆಲಸ ಮಾಡತಕ್ಕ ಅಧಿಕಾರಗಳ ಬಗ್ಗೆ ಇಲ್ಲಿ ನಾವು ಗೌರವ ಕೊಟ್ಟಿದ್ದೇವೆ. ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಇಲ್ಲಿ ಕೆಲಸ ಮಾಡುವ ವ್ಯವಸ್ಥೆಯಲ್ಲಿ ನೀವು ಬೆಂಗಳೂರು ನಗರವನ್ನು ಉಳಿಸುತ್ತೇವೆಂದು ಹೇಳಿ ಒಂದು ಕಡೆ ನಾವು 4ನೇ ಹಂತದ ನೀರು ತಂದರೆ ಕುಡಿಯಲು ನೀರೇ ಇಲ್ಲ. ಅಕ್ರಮ ಕಟ್ಟಡಗಳ ಬೆಂಗಳೂರಿನ ಸುತ್ತ ಯದ್ವಾತದ್ವಾ ಏಳುತ್ತಿವೆ. ಸಾಮಾನ್ಯ ಬಡವರು ಸಣ್ಣಪುಟ್ಟ ಮನೆ ಕಟ್ಟಿಕೊಂಡರೆ ನನ್ನ ಅಭ್ಯಂತರವಿಲ್ಲ ಅದರ ಬಗ್ಗೆ ನನ್ನ ತಕರಾರೇನೂ ಇಲ್ಲ. ಸಣ್ಣಪುಟ್ಟ ಮನೆಯವರ ಹೆಸರಿನಲ್ಲಿ ದೊಡ್ಡ ದೊಡ್ಡ ಕಟ್ಟಡ ಕಟ್ಟುವವರಿಗೆ ಅವಕಾಶ ಕೊಡಬಾರದು.

ಶ್ರೀ ವಿ. ಸೋಮಣ್ಣ : ಡೈಮಂಡ್ ಡಿಸ್ಟ್ರಿಕ್ ಬಗ್ಗೆ ಮಾನ್ಯ ವಾಟಾಳ್‌ರವರು ಏನು ಹೇಳಿದ್ದಾರೆ

ಮತ್ತು ಅವರು ಹೇಳಿದ ಕಟ್ಟಡಗಳ ಬಗ್ಗೆ ತನಿಖೆ ಮಾಡಿ ಬಿಡಿಎನಿಂದ 1995ರಲ್ಲಿ ಬಿಸಿಸಿ ಬಂದಿರುವುದರ ಬಗ್ಗೆ ಕ್ರಮ ತೆಗೆದುಕೊಳ್ಳಲು ಆದೇಶ ಮಾಡುತ್ತೇನೆ. ಏನು ಕ್ರಮ ತೆಗೆದುಕೊಳ್ಳಬೇಕೆನ್ನುವ ಬಗ್ಗೆ. ನಿಮಗೆ ನಾಳೆ ಬೇಕಾದರೆ ಮಾಹಿತಿ ಕೊಡುತ್ತೇನೆ. ಯಾವುದೇ ಕಾರಣಕ್ಕಾಗಿಯೂ ಸರ್ಕಾರ ಯಾರ ಜೊತೆಯಲ್ಲೂ ಸೇರುವ ಪರಿಸ್ಥಿತಿ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಆಗಲೇ ಕಟ್ಟಡಗಳನ್ನು ಕಟ್ಟಲಾಗಿದೆ. ಕೆಲವನ್ನು ಕಟ್ಟುತ್ತಿದ್ದಾರೆ. ತಕ್ಷಣಕ್ಕೇನು ಮಾಡುತ್ತೀರಿ? ತಡೆ ಮಾಡುತ್ತೀರಾ?

ಶ್ರೀ ವಿ.ಸೋಮಣ್ಣ : ಈಗಲೇ ಸೂಚನೆ ಕೊಡುತ್ತೇನೆ. ಮಹಾನಗರಪಾಲಿಕೆ ವ್ಯಾಪ್ತಿಗೆ ಹೋಗುವುದರಿಂದ ತಕ್ಷಣವೇ ಕೆಲಸಗಳನ್ನು ನಿಲ್ಲಿಸಲು ಸೂಚನೆ ಕೊಡುತ್ತೇನೆ. ಪ್ಲಾನ್‌ಗಳೇನಿವೆ, ಅದರ ಬಗ್ಗೆ ಮಾಹಿತಿಯನ್ನು ತರಿಸಿಕೊಳ್ಳುತ್ತೇನೆ. ಯಾವುದೇ ಕಾರಣಕ್ಕೂ ಸರ್ಕಾರ ಯಾರ ಜೊತೆಯಲ್ಲೂ ಶಾಮೀಲಾಗುವ ಕೆಲಸವನ್ನು ನಾನಾಗಲಿ, ನಮ್ಮ ನಾಯಕರಾಗಲಿ, ಮಾಡುವುದಿಲ್ಲ. ತಮಗೆ ಅನುಮಾನ ಬರುವುದು ಬೇಡ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ, ನಿಮ್ಮ ನಾಯಕರ ಪ್ರಶ್ನೆ ಇಲ್ಲಿ ತರಲೇ ಇಲ್ಲ, ಡೈಮಂಡ್ ಡಿಸ್ಟ್ರಿಕ್ ಬಗ್ಗೆ ಏನು ಮಾಡುತ್ತೀರಿ, ಲೀಲಾ ಕೆಂಪೀಸ್ ಬಗ್ಗೆ ಏನು ಮಾಡುತ್ತೀರಿ, ಎಂಬ ಬಗ್ಗೆ ಮಾತ್ರ ಹೇಳಿದೆವು. ಕಮಿಷನರ್ ಬಗ್ಗೆ ಪ್ರಶಂಸೆ ಮಾಡಿದ್ದೇನೆ. ತಾವು ಬೆಂಗಳೂರು ನಗರಕ್ಕೆ ಮಂತ್ರಿಗಳಾಗಿದ್ದೀರಿ ಛೇರ್ಮನ್ ಏನೂ ಪ್ರಯೋಜನವಿಲ್ಲ. ಅದನ್ನು 20 ಸಾರಿ ಹೇಳಿದ್ದೇನೆ. ಅದರ ಬಗ್ಗೆ ಈಗಲೇ ಉತ್ತರ ಹೇಳಿ.

ಶ್ರೀ ವಿ. ಸೋಮಣ್ಣ : ಗೌರವಾನ್ವಿತ ಸದಸ್ಯರೇನು ಹೇಳಿದ್ದಾರೆ, ಪ್ರಾಯಶಃ ನಕ್ಷೆಗಳಿಗೆ ವಿರುದ್ಧವಾಗಿ ಏನೇ ಕಟ್ಟಿದ್ದರೂ ಕೂಡ, ನಾವು ಕ್ರಮ ತೆಗೆದುಕೊಳ್ಳುವುದರಲ್ಲಿ ಮೊದಲನೆಯವರು. ಡೈಮೆಂಡ್ ಡಿಸ್ಟ್ರಿಕ್ಸ್ ಮತ್ತು ಲೀಲಾ ಕೆಂಪೀಸ್ ಬಗ್ಗೆ ಹೇಳಿದ್ದೀರಿ. ನಾಳೆಯೇ ಆ ಎರಡು ಕಡತಗಳನ್ನು ತರಿಸಿಕೊಳ್ಳುತ್ತೇನೆ. ಕಾನೂನು ಬಿಟ್ಟು ಒಂದಿಂಚು ಏನಾದರೂ ಕಟ್ಟಿದ್ದರೂ ಇವತ್ತಿನಿಂದಲೇ ಕೆಲಸ ನಿಲ್ಲಿಸಲು ಆದೇಶ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಈಗೇನೋ ಒಂದು ಭರವಸೆ ಕೊಟ್ಟಿದ್ದಾರೆ. ಈಗ ಅವರು ಬಂದು ಯಾವ್ಯಾವ ದೃಷ್ಟಿಯಲ್ಲಿ ತರುತ್ತಾರೋ ಗೊತ್ತಿಲ್ಲ. ಅವರ ಒತ್ತಡಕ್ಕೆ ನೀವು ಎಲ್ಲಿ ಬಲಿಯಾಗುತ್ತೀರೋ ಗೊತ್ತಿಲ್ಲ. ಅದರ ಬಗ್ಗೆ ನಾನು ಚಿಂತನೆ ಮಾಡುವುದಕ್ಕೆ ಹೋಗುವುದಿಲ್ಲ. ನಾಳೆ ಏನಾಗುತ್ತದೆ, ನೋಡೋಣ. ಮುಂದಿನ ಜೂನ್‌ನಲ್ಲಿ ಸದನ ಸೇರುತ್ತದೆ. ನಾಳೆ ಕೊನೆ ದಿವಸ ಅಷ್ಟರೊಳಗೆ ಸೋಮಣ್ಣನವರು ಏನೇನು ಮಾಡುತ್ತಾರೆ, ಅದು ನಮಗೂ ಗೊತ್ತಾಗುತ್ತದೆ. ನೋಡೋಣ ನಾಳೆ ಸ್ವಲ್ಪ ನೀವು ಬಿಡಿಎ ಕಮಿಷನರ್ ಅಧ್ಯಕ್ಷರು, ಎಲ್ಲರೂ ಒಟ್ಟಿಗೆ ಹೋಗಿಬನ್ನಿ. ಬಿಡಿಎ ಅಧ್ಯಕ್ಷರ ಬಗ್ಗೆ ಕಳಕಳಿಯಿಂದ ಹೇಳಿದ್ದೇನೆ. ಸೋಮಣ್ಣನವರ ನಂತರ ಮತ್ತೊಬ್ಬರು ಅಧ್ಯಕ್ಷರು ಬಂದಿದ್ದಾರೆಂದರೆ ಅಷ್ಟು ಎತ್ತರದ ಗೌರವವನ್ನು ನಾನು ಕೊಟ್ಟಿದ್ದೇನೆ. ಒಂದಿಂಚೂ ಸೈಟ್ ಕೊಟ್ಟಿಲ್ಲ. ಜನರಿಗೆ ಸೈಟ್ ಇಲ್ಲ. ನನಗೇನೋ ಶಿವರಾಮೇಗೌಡರ ಮೇಲೆ ನಂಬಿಕೆ ಇದೆ. ಆ ನಂಬಿಕೆಯನ್ನು ಎಷ್ಟು ಉಳಿಸಿಕೊಳ್ಳುತ್ತಾರೆಂಬುದನ್ನು ನೋಡೋಣ. ಎಷ್ಟು ಸೈಟ್ ಕೊಡುತ್ತಾರೋ ನೋಡೋಣ. ನಿಜವಾಗಲೂ ನನಗೆ ಇವರು ಸೈಟ್ ಕೊಡಲಿಲ್ಲವೆಂದರೆ ನಾನೇನು ಮಾಡಬೇಕು?

ಶ್ರೀ ಎಲ್.ಆರ್ ಶಿವರಾಮೇಗೌಡ (ನಾಗಮಂಗಲ) : ಸೈಟ್ ಕೊಡಲಿಲ್ಲವೆನ್ನುತ್ತೀರಿ. ಲಿಟಿಗೇಷನ್ ಮೇಲಿರುವ ಜಾಗದಲ್ಲಿ ಸೈಟ್ ಕೊಡುವುದಿಲ್ಲವೆನ್ನುವ ತೀರ್ಮಾನದ ಮೇಲೆ ನೇರವಾಗಿ ಜಮೀನು ಕೊಂಡುಕೊಂಡು ಸೈಟ್ ಮಾಡಬೇಕೆಂದು ಕನಕಪುರ ರಸ್ತೆಯಲ್ಲಿ 25ಸಾವಿರ ಸೈಟ್ ಮಾಡಬೇಕೆಂದು 450 ಎಕರೆ ಜಮೀನಿಗೆ ಗೆಜೆಟ್ ನೋಟಿಫಿಕೇಷನ್ ಹೊರಡಿಸಿದ್ದೇವೆ. ವಾಪಸ್ ಕೊಡುವ ಪ್ರಶ್ನೆ ಇಲ್ಲ. ಲಿಟಿಗೇಷನ್ ಬರುವುದಿಲ್ಲ. ನಮ್ಮ ಅವಧಿಯಲ್ಲೇ ಅದನ್ನು ಕೊಡುತ್ತೇವೆಂದು ಹೇಳುತ್ತೇನೆ.

ಶ್ರೀ ಡಿ. ಕೆ. ಶಿವಕುಮಾರ್ : ಒಬ್ಬ ಛೇರ್ಮನ್‌ನಾಗಿ ಇಲ್ಲಿ ಮಾತನಾಡಲು ಹಕ್ಕೇ ಇಲ್ಲ. ಮಂತ್ರಿಗಳಿರುವುದು ಎತಕ್ಕೆ ?

ಶ್ರೀ ಎಲ್.ಆರ್. ಶಿವರಾಮೇಗೌಡ : ಏನೂ ಕೊಡಲಲ್ಲಿವೆಂದರೆ ನಾನು ಛೇರ್ಮನ್‌ನಾಗಿ ಬಾಯಿಬಡಿದುಕೊಂಡು ಕುಳಿತುಕೊಳ್ಳಬೇಕೆ ಎಂದು ಶಿವಕುಮಾರ್‌ರವರನ್ನು ಕೇಳಿ.

ಶ್ರೀ ಡಿ.ಕೆ. ಶಿವಕುಮಾರ್ : ಇವರು ಕೇವಲ ಎಂಎಲ್‌ಎ.

ಶ್ರೀ ಎಲ್.ಆರ್. ಶಿವರಾಮೇಗೌಡ : ಇರಬಹುದು. ಆದರೆ ಆ ಪ್ರಾಧಿಕಾರದ ಅಧ್ಯಕ್ಷನಾಗಿ ಹೇಳಲು ಅವಕಾಶವಿದೆ.

ಶ್ರೀ ಕೆ.ಎನ್. ನಾಗೇಗೌಡ (ಭಾರೀ ನೀರಾವರಿ ಸಚಿವರು) : ಯಾವ ರೂಲ್ ಮೇಲೆ........

ಶ್ರೀ ಎಲ್.ಆರ್. ಶಿವರಾಮೇಗೌಡ : ಇದು ಹಕ್ಕುಚ್ಯುತಿಯಾಗುತ್ತದೆ. ಯಾವ ರೂಲ್ ಮೇಲೆ ನಾನು ಮಾತನಾಡಲು ಅವಕಾಶವಿಲ್ಲವೆಂಬುದನ್ನು ಅವರು ಹೇಳಬೇಕು. ನಾನು ಆ ಸಮಿತಿಯ ಅಧ್ಯಕ್ಷನಾಗಿ ಮಾಡಿರುವ, ಕೈಗೊಂಡಿರುವ ಕಾರ್ಯಕ್ರಮಗಳನ್ನು ಹೇಳಿದರೆ ತಪ್ಪೇ? 10ವರ್ಷಗಳಿಂದ ಸೈಟ್ ಕೊಡುವುದಕ್ಕಾಗಿರಲಿಲ್ಲ 25ಸಾವಿರ ಸೈಟ್ ಕೊಡುತ್ತೇವೆಂದು ಹೇಳಿದ್ದೇವೆ. 1,300 ಸೈಟ್‌ಗಳನ್ನು ಈಗಾಗಲೇ ಕೊಟ್ಟಿದ್ದೇವೆ. 2,400 ಸೈಟ್‌ಗಳನ್ನು ಇನ್ನೊಂದು ವಾರದಲ್ಲಿ ಕೊಡಲು ನೋಟಿಫಿಕೇಷನ್ ಹೊರಡಿಸುತ್ತಿದ್ದೇವೆ. ಹೀಗೆ ಹೇಳಿದರೆ ಹೇಗೆ?ಕೊಟ್ಟಿದ್ದನ್ನು, ಕೊಡುವುದನ್ನು ಸ್ವಲ್ಪ ಹೇಳಬೇಕು

ಉಪಾಧ್ಯಕ್ಷರು : ಈಗ ಸದನವನ್ನು ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2.11 ಗಂಟೆಗೆ ಮುಂದೂಡಲ್ಪಟ್ಟು. ಮತ್ತೆ ಮಧ್ಯಾಹ್ನ 3.00 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು.)

ಸದನವು ಪುನಃ 3 ಗಂಟೆ2 ನಿಮಿಷಗಳಿಗೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ ರಮೇಶ್ ಕುಮಾರ್‌ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು

ಶ್ರೀ ಹೆಚ್.ಎನ್.ನಂಜೇಗೌಡ : ಮಾನ್ಯ ಸಭಾಧ್ಯಕ್ಷರೆ ತಡವಾಗಿಯಾದರೂ ಈ ಬಿಲ್ಲನ್ನು ತಂದಿರತಕ್ಕದ್ದು ಸ್ವಾಗತಾರ್ಹ.

ಶ್ರೀ ಶಿವಾನಂದ ನಾಯಕ್ : ಮಾನ್ಯ ಗೃಹಸಚಿವರು ಜಗನ್ನಾಥಶೆಟ್ಟಿ ಆಯೋಗದ ಬಗ್ಗೆ ಉತ್ತರ ಕೊಡಬೇಕು.

ಅಧ್ಯಕ್ಷರು : ಗೃಹ ಮಂತ್ರಿಗಳು ಆಮೇಲೆ ಬರುತ್ತಾರೆ. ಕೌನ್ಸಿಲ್‌ಗೆ ಹೋಗುತ್ತಾರೆ ಆಮೇಲೆ ಬರುತ್ತಾರೆ. ಮಾನ್ಯ ನಂಜೇಗೌಡರು ತಾವು ಮಾತನಾಡಿ.

ಶ್ರೀ ಹೆಚ್. ಎನ್. ನಂಜೇಗೌಡ (ಬಸವನಗುಡಿ) : ನಾನು ಏಕೆ ತಡವಾಗಿಯಾದರೂ ಎಂದು ಹೇಳುತ್ತಿದ್ದೇನೆಂದರೆ ನಮ್ಮ ಮನೆಯ ಎದುರುಗಡೆ22 ಎಕರೆ ಜಮೀನನ್ನು ಅಕ್ವೈರ್ ಮಾಡಿ ಕೊಂಡಿದ್ದಾರೆ.

ನಾನು ವಾಸ ಇರುವ ಮನೆಯ ಎದರುಗಡೆ ಅದು ತಿಗಳ ಸಮಾಜಕ್ಕೆ ಸೇರಿದವರ ಜಮೀನು. ಅವರ ಮನೆಯಲ್ಲಿ 46-47 ಇದ್ದಾರೆ. ಎರಡು ವರ್ಷದಲ್ಲಿ ಇದು ನನ್ನ ಗಮನಕ್ಕೆ ಬಂದಾಗ ಅಲ್ಲಿ ಏನಾಗಿತ್ತು ಪರಿಸ್ಥಿತಿ ಅಂದರೆ ಅಷ್ಟು ಜಮೀನು ಅಕ್ವೈರ್ ಮಾಡಿಕೊಂಡ ಮೇಲೆ ಅವರು ವಾಸ ಇರುವುದಕ್ಕೆ ವಾಪಸ್ಸು ಜಮೀನು ಕೊಡತಕ್ಕ ಪರಿಸ್ಥಿತಿ ಇಲ್ಲ 22 ಎಕರೆ 100 ಕೋಟಿ ರೂಪಾಯಿ ಬೆಲೆ

(ಚೇರ್ಮನ್ ಶ್ರೀ ಕಾಗೋಡುತಿಮ್ಮಪ್ಪನವರು ಅಧ್ಯಕ್ಷ ಪೀಠವನ್ನಂಲಕರಿಸಿದರು) ಬಾಳತಕ್ಕ ಜಾಗ. ಆ ಮಾಲೀಕರು ಪಾಪ ತರಕಾರಿ ಬೆಳೆದುಕೊಂಡು ಜೀವನ ಮಾಡುತ್ತಿದ್ದರು ಆ ಜಮೀನಿನಲ್ಲಿ. ಇವತ್ತು ಅವರಿಗೆ ಏನೇನೂ ಇಲ್ಲ. ಕೆಲವು ಸ್ಥಳದಲ್ಲಿ ಅವರು ವಾಸ ಇದ್ದಾರೆ. ಅದು ಪಿತ್ರಾರ್ಜಿತವಾದ ಆಸ್ತಿ. ಇವತ್ತು ಇರತಕ್ಕ ಕಾನೂನಿನಲ್ಲಿ ಅದನ್ನು ಅವರಿಗೆ ವಾಪಸ್ಸು ಕೊಡುವುದಕ್ಕೆ ಅವಕಾಶವಿಲ್ಲ. ಇದನ್ನು ಇವತ್ತು ಇರತಕ್ಕ ಕಾನೂನಿನಲ್ಲಿ ಅದನ್ನು ಅವರಿಗೆ ವಾಪಸ್ಸು ಕೊಡುವುದಕ್ಕೆ ಅವಕಾಶವಿಲ್ಲ. ಇದನ್ನು ಎರಡು ವರ್ಷಗಳಲ್ಲಿ ಪ್ರಸ್ತಾಪ ಮಾಡಿದಾಗ ಸರ್ಕಾರದವರು ಇಂತಹ ಕೇಸುಗಳಿಗೆ ಅನುಕೂಲ ಮಾಡುವುದಕ್ಕೆ ಒಂದು ಬಿಲ್ಲನ್ನು ಅಮೆಂಡ್ ಮಾಡಿ ತರುತ್ತೇವೆಂದು ಹೇಳಿದರು. ಏಕೆಂದರೆ ಕೋರ್ಟ್‌ನಲ್ಲಿ ಒಂದು ಆರ್ಡರ್ ಆಗಿತ್ತು. ಒಂದು ಸಾರಿ ಜಮೀನನ್ನು ಅಕ್ವೈರ್ ಮಾಡಿಕೊಂಡರೆ ಅದನ್ನು ಯಾವುದೇ ಕಾರಣಕ್ಕೂ ವಾಪಸ್ಸು ಕೊಡಬಾರದು ಎಂದು. ಈಗ ಅವರ ಆಸ್ತಿಯಲ್ಲಿ ಅವರು ವಾಸ ಇರುವುದಕ್ಕೆ ವಾಪಸ್ಸು ಕೊಡಬೇಕಾದರೂ ಕಾನೂನಿನಲ್ಲಿ ಅವಕಾಶ ಇಲ್ಲ. ಅದಕ್ಕೆ ಈ ಬಿಲ್ಲನ್ನು ತರಬೇಕೆಂದು ಹೇಳಿ ಎರಡು ವರ್ಷಗಳಿಂದ ಪ್ರಯತ್ನ. ಕೊನೆಗೆ ಅದನ್ನು ಈ ಸಭೆಯಲ್ಲಿ ಮಂಡಿಸುವುದಕ್ಕೆ ಸೋಮಣ್ಣನವರು ಬರಬೇಕಾಯಿತು. ಇದರಲ್ಲಿ ಒಂದೇ ಒಂದು ಅಮೆಂಡ್‌ಮೆಂಟ್ ಅಷ್ಟೆ. ಇದರಲ್ಲಿ ಎಂತಹುದು ದೊಡ್ಡದಾದ ಮಹತ್ವವಾದ ವಿಚಾರವಿಲ್ಲ.

ನಮ್ಮ ಸ್ನೇಹಿತರು ಮಾತನಾಡಿದ್ದು ಅದು ಬೇರೆ ಬಿಲ್ಲಿನಲ್ಲಿ ಬರುತ್ತಿದೆ. ಹಂಡ್ರೆಡ್ ಪರ್ಸೆಂಟ್ ರೂಲ್ಸ್ ವಯಲೇಟ್ ಮಾಡಿ ಕಟ್ಟುತ್ತಿರುವ ಬಿಲ್ಡಿಂಗ್ ಬೆಂಗಳೂರಿನಲ್ಲಿ ಅಂತಹವು 500 ಬಿಲ್ಡಿಂಗ್‌ಗಳಿವೆ. 500 ಫೈಲ್ಸ್ ಪೆಂಡಿಂಗ್ ಇರಬೇಕು.

ಛೇರ್ಮನ್: ಮಾನ್ಯ ನಂಜೇಗೌಡರೆ ಒಂದು ಪ್ರಿನ್ಸಿಪಲ್ ಅರೈಸ್ ಆಗುತ್ತದೆ. ಈಗ್ಗ ಲ್ಯಾಂಡ್ ಅಕ್ವಿಜಿಷನ್ ಆಕ್ಟ್ ಪ್ರಕಾರ ಭೂಮಿ ಸ್ವಾಧೀನಪಡಿಸಿಕೊಳ್ಳತಕ್ಕ ಅಧಿಕಾರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಇದೆ. ಬೇರೆ ಬೇರೆ ಸ್ಟ್ಯಾಚುಟರಿ ಅಥಾರಿಟಿಗೆ ಅನೇಕ ಸಂಸ್ಥೆಗಳಿಗೆ ಇದೆ. ಈಗ ಈ ಪ್ರಿನ್ಸಿಪಲ್‌ನ್ನು ಅಕ್ಸೆಪ್ಟ್ ಮಾಡಿದರೆ ಲ್ಯಾಂಡ್ ಅಕ್ವಿಜಿಷನ್ ಆಕ್ಟ್ ಕೆಳಗಡೆ ಯಾವ್ಯಾವ ಏಜೆನ್ಸಿಗಳು ಯಾವ್ಯಾವ ಉದ್ದೇಶಗಳಿಗೆ ಆಕ್ವೈರ್ ಮಾಡಿರುತ್ತವೆ ಆ ಜಮೀನು ಅವರಿಗೆ ಬೇಡವೆಂದು ಕೊಟ್ಟರೆ ಅದನ್ನು ಅದೆ ಓನರ್‌ಗಳಿಗೆ ಕೊಡುವುದಕ್ಕೆ ಅವಕಾಶ ಬರುತ್ತಾ?

ಶ್ರೀ ಹೆಚ್.ಎನ್. ನಂಜೇಗೌಡ : ರೂಲ್ಸ್ ಮಾಡುತ್ತಾರಲ್ಲಾ ಅದರಲ್ಲಿರುತ್ತವೆ. ಕೆಲವು ಕಂಡೀಷನ್ಸ್ ಹಾಕಿದ್ದಾರೆ ಇದರಲ್ಲಿ ವಿವರವಾಗಿ ಬರೆದಿದ್ದಾರೆ. ಅದಕ್ಕೆ ಕೆಲವು ರಿಸ್ಟ್ರಿಕ್ಷನ್ಸ್ ಹಾಕಿಕೊಂಡಿದ್ದಾರೆ. ರೂಲ್ಸ್ ಮಾಡುವಾಗ ಫರ್ದರ್ ರಿಸ್ಟ್ರಿಕ್ಷನ್ಸ್ ಹಾಕಿಕೊಳ್ಳಬಹುದು. ಆದರೆ ಬೆಂಗಳೂರು ನಗರದಲ್ಲಿ ಇದು ಏನಾಗಿದೆ ಅಂದರೆ ಬಡವರು ಮಧ್ಯಮವರ್ಗದವರು ಇವರಿಗೆ ಬಹುತೇಕವಾಗಿ ಅನುಕೂಲವಾಗತಕ್ಕ ಬಿಲ್ ಇದು.

ಬೇಕಾದರೆ ನೀವು ಸರ್ವೆ ಮಾಡಿಸಿಬಿಡಿ. ನಾನು ಬೇಕಾದರೆ ಸಾಬೀತು ಮಾಡುತ್ತೇನೆ. ಇದರಲ್ಲಿ ಶ್ರೀಮಂತರ ಪ್ರಶ್ನೆ ಬರುವುದಿಲ್ಲ. ಶ್ರೀಮಂತರಿಗೆ ಅನುಕೂಲ ಮಾಡುವುದಕ್ಕೆ ಬೇರೆ ಬಿಲ್ ತರುತ್ತಾರೆ. ಆದ್ದರಿಂದ ಈಗ ನಮ್ಮ ಸ್ನೇಹಿತರು ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹಾಕಬೇಕು ಎಂದರು. ಅದರ ಅವಶ್ಯಕತೆ ಇಲ್ಲ. ಇದನ್ನು ಇವತ್ತೇ ಇಂದೇ ಪಾಸ್ ಮಾಡತಕ್ಕಂಥಾದ್ದು ಸೂಕ್ತ. ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ. ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ): ಅಧ್ಯಕ್ಷರೇ ಈ ಅಮೆಂಡ್‌ಮೆಂಟ್ ಬಿಲ್‌ನಲ್ಲಿ ಒಂದೇ ಪ್ರಶ್ನೆ ಅಕ್ವಿಸಿಷನ್ ಮಾಡುವಾಗ ಅಧಿಕಾರಿಗಳು ಲ್ಯಾಂಡ್ ನೋಡಿ ಮಾಡುವುದಿಲ್ಲವೇ ಎಂದು. ಏಕೆಂದರೆ ಒಂದು ಸಲ ಅಕ್ವೈರ್ ಆದಮೇಲೆ ಅದು ಆಯಿತು ಎಂದು ಗೊತ್ತಾದ ಮೇಲೆ ಏನಾದರೂ ಟೆಂಪರರಿ ಸ್ಟ್ರಕ್ಚರ್ಸ್ ಬಂದರೆ ಅಕಸ್ಮಾತ್ ಅಕ್ವೈರ್ ಆದಮೇಲೆ ಏನಾದರೂ ಇದು ಡಿನೋಟಿಫೈ ಆಗುತ್ತದೆ ಎನ್ನುವ ಒಂದೇ ಕಾರಣಕ್ಕೆ ಆ ಲ್ಯಾಂಡ್ ಓನರ್ ಅದರ ಮೇಲೆ ಸ್ಟ್ರಕ್ಚರ್ಸ್ ನಿರ್ಮಾಣ ಮಾಡಿದರೆ ಅಂತಹ ಕಾರಣ ಹೇಳಿಕೊಂಡು ನೀವು ಲ್ಯಾಂಡ್‌ನ್ನೆಲ್ಲ ಡಿನೋಟಿಫೈ ಮಾಡುವುದಕ್ಕೆ ಪ್ರಾರಂಭವಾದರೆ ಗತಿಯೇನು? ಲ್ಯಾಂಡ್ ಅಕ್ವಿಸಿಷನ್‌ಗೆ ಕೆಲವು ನಿಯಮಗಳು ಇವೆ. ಸರ್ಕಾರಕ್ಕೆ ಲ್ಯಾಂಡ್‌ನ್ನು ಅಕ್ವೈರ್ ಮಾಡಬೇಕಾದರೆ ಅದಕ್ಕಾಗಿ ನೀವು ಅಸಿಸ್ಟೆಂಟ್ ಕಮಿಷನರ್‌ಗಳನ್ನು ಇಟ್ಟಿರುತ್ತೀರಿ, ಅದು ಯೋಗ್ಯವೋ, ಅಯೋಗ್ಯವೋ ಅದರಲ್ಲಿ ಏನಿದೆ. ಬೆಳೆ ಇದೆಯೇ ಸ್ಟ್ರಕ್ಚರ್ ಇದೆಯೇ ಎಂದು ಹೇಳಿ ನಿಮ್ಮ ಸುಪರ್ದಿಗೆ ಬಂದಂಥ ಭೂಮಿಯನ್ನು ಮತ್ತೆ ವಾಪಸ್ಸು ಕೊಡಲಿಕ್ಕೆ ನೀವು ಶಾಸನ ಮಾಡುವುದು ಸೂಕ್ತವೇ ಎನ್ನುವುದು ಒಂದು. ಎರಡನೆಯದು ಅಕ್ವಿಸಿಷನ್ ಪ್ರೊಸೀಡಿಂಗ್ಸನ್ನೇ ನಾಳೆ ಪ್ರಶ್ನೆ ಮಾಡಬೇಕಾಗುತ್ತದೆ. ಎಲ್ಲೋ ಕುಳಿತುಕೊಂಡು ಈ ತರಹ ಅಕ್ವೈರ್ ಮಾಡಬೇಕಾದರೆ ನೀವು 4(1) ಮಾಡಬೇಕಾದರೆ, 5(1) ಮತ್ತೊಂದು ಮಾಡಬೇಕಾದರೆ ಆ ಭೂಮಿ ಮೇಲೆ ಏನೇನು ಇತ್ತು ಎಂದು ನೋಡುವುದೇ ಇಲ್ಲವೆಂದು ಭಾವಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದ ಇದನ್ನು ಸರ್ಕಾರ ಇನ್ನೊಂದು ಸಲ ಯೋಚನೆ ಮಾಡಬೇಕಾಗುತ್ತದೆ. ಅಕ್ವೈರ್ ಮಾಡಿಕೊಂಡು ನೋಟಿಫೈ ಮಾಡಿ ಡಿನೋಟಿಫೈ ಮಾಡುವುದಕ್ಕೆ ಪ್ರಾರಂಭವಾದರೆ ಎಲ್ಲರೂ ಇದೆ ಕಾರಣದ ಕೆಳಗಡೆ ಒಂದಲ್ಲ ಒಂದು ಕಾರಣ ಕೊಟ್ಟುಕೊಂಡು ಫೈನಾನ್ಸಿಯಲ್ ಇನ್‌ಸ್ಟೆಬಿಲಿಟಿ ಕಾರಣ. ಕೊಟ್ಟುಕೊಂಡು ಸ್ವಂತಕ್ಕೆ ಬೇಕು ಅಂದುಕೊಂಡು ಜಮೀನ್ನು ಹಿಂದಕ್ಕೆ ತೆಗೆದುಕೊಳ್ಳುವುದಕ್ಕೆ ಹೊರಟರೆ ಅಂತಹ ಒಳ್ಳೆಯ ಹೆಸರು ಬರುವುದಿಲ್ಲವೇನೋ. ಇದನ್ನು ಸಚಿವರು ಮರುಚಿಂತನೆ ಮಾಡುವುದು ಒಳ್ಳೆಯದು ಎಂದು ನಾನು ಬಾವಿಸುತ್ತೇನೆ.

ಶ್ರೀ ಹೆಚ್. ಎನ್. ನಂಜೇಗೌಡ : ಮಾಧುಸ್ವಾಮಿಯವರೇ, ಡಿ ನೋಟಿಫೈ ಯಾರು ಯಾವ್ಯಾವುದನ್ನು ಮಾರಿಕೊಂಡಿದ್ದಾರೆ ಅಷ್ಟಕ್ಕೆ ಮಾತ್ರ ಅನ್ವಯಿಸತಕ್ಕಂಥ ಕಾನೂನು ಇದು. ಬೇರೆ ಎಲ್ಲಾ ಅಕ್ವೈರ್‌ಗೂ ಎಂದರೆ ...ಇಲ್ಲಿ ಏನಾಗಿದೆ ಎಂದರೆ ಇವರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಏನು ಮಾಡಿದ್ದಾರೆ ಎಂದರೆ, ಈಗ ತಮಿಳುನಾಡಿನಲ್ಲಿ ಒಂದು ಸಿಸ್ಟಮ್ ಇದೆ, ಡೆಲ್ಲಿಯಲ್ಲೂ ಒಂದು ಸಿಸ್ಟಮ್ ಇದೆ. ಅವರು ವಯಬಲ್ ಯೂನಿಟ್ ಎಂದು ನೋಡಿಕೊಂಡು ಇನ್‌ಸ್ಪೆಕ್ಟ್ ಮಾಡಿ ಇಷ್ಟು ಎಕರೆ ಮಿನಿಮಮ್ ಇದ್ದರೆ ಮಾತ್ರ ಅಕ್ವೈರ್ ಮಾಡಿಕೊಳ್ಳುತ್ತಾರೆ. ಆದರೆ ಇಲ್ಲಿ ಅರ್ಧ ಎಕರೆ ಇದ್ದರೂ ಮಾಡಿದ್ದಾರೆ,

ಒಂದು ಎಕರೆ ಇದ್ದರೂ ಮಾಡಿದ್ದಾರೆ. ಒಂದು ಸೈಟು ಇದ್ದರೂ ಅದನ್ನೂ ಮಾಡಿಕೊಂಡುಬಿಟ್ಟಿದ್ದಾರೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ನಂಜೇಗೌಡರೇ let them come with the amendment Bill.

ಅಕ್ವಿಸಿಷನ್ ಮಾಡುವುದಕ್ಕೆ ನಾವು ಏನೇನು ಮಾಡಬೇಕು ಎಂದು ನಿಯಮಗಳು ಮಾಡುವುದಕ್ಕೆ ಬರಲಿ. ಒಂದು ಸಲ ಅಕ್ವೈರ್ ಮಾಡಿ ಡಿ-ನೋಟಿಫೈ ಮಾಡುವುದು ಎಂದರೆ ಇದು ಹೇಳುವ ಕಾರಣ ಸುಲಭ. ಸ್ಟ್ರಕ್ಚರ್ ಇದ್ದರೆ if it is unfit for house construction, if it is unfit for site formation ಅಂದರೆ ವಾಪಸ್ಸು ಆ ಭೂಮಿ ಮಾಲೀಕರಿಗೆ ಮಾರುವುದು ಎಂದು ಹೇಳಿ ಬಿಲ್‌ನಲ್ಲಿ ಹೇಳಿದ್ದೀರಿ. The reading was like that.

ಇದು ನೀವು ಅಕ್ವೈರ್ ಮಾಡಬೇಕಾದರೆ ಸಾಮಾನ್ಯ ಪ್ರಜ್ಞೆ ಇಲ್ಲದೇನೆ ಮಾಡುತ್ತಿದ್ದೀರಿ ಎಂದು ಆಗುತ್ತದೆ. ರೆವಿನ್ಯೂ ಸೈಟ್ ಕಟ್ಟಿ ಅನ್‌ಆಥರೈಸ್ಡ್ ಕನ್‌ಸ್ಟ್ರಕ್ಷನ್ ಇತ್ತು ಎಂದರೆ ನಿಮ್ಮ ಅಕ್ವಿಸಿಷನ್ ಆಫೀಸರ್ ಏನು ಮಾಡುತ್ತ ಇರುತ್ತಾನೆ? will he not go on the spot ?

ಇದನ್ನು ನೀವು ಎಲ್ಲಿಯವರೆಗೆ ತೆಗೆದುಕೊಂಡು ಹೋಗುತ್ತೀರಿ? ಒತ್ತಡ ಬಂತು ಎಂದು ಡಿನೋಟಿಫೈ ಮಾಡುವುದು. ಈ ಸೊಸೈಟಿಯವರಿಗೆ ಯಾರಿಗೋ ಬೇಕು ಎಂದು ಡಿ-ನೋಟಿಫೈ ಮಾಡುವುದು. ಹೀಗೆ ಆಗುವುದು ಸರಿಯಲ್ಲ. ಮಾನ್ಯ ಸಚಿವರು ಇನ್ನೊಂದು ಸಲ ಯೋಚನೆ ಮಾಡುವುದು ಒಳ್ಳೆಯದು.

ಶ್ರೀ ಎಂ. ವೀರಪ್ಪ ಮೊಯಿಲಿ ಕಾರ್ಕಳ : ಸನ್ಮಾನ್ಯ ಅಧ್ಯಕ್ಷರೇ ಇದು ನಾನು ಈ ತಿದ್ದುಪಡಿಯನ್ನು ಕೂಲಂಕಷವಾಗಿ ನೋಡುತ್ತಿದ್ದೆ. ಇದು ಸರ್ವೆಸಾಮಾನ್ಯವಾಗಿ ತಂದಂಥ ಒಂದು ತಿದ್ದುಪಡಿ ಎಂದು ಹೇಳಿ ನಾನು ಯೋಚನೆ ಮಾಡುತ್ತಿದ್ದೆ ಮತ್ತು ಮಾತನಾಡುವುದು ಬೇಡ ಎಂದೂ ಕೂಡ ನಾನು ಆಲೋಚನೆ ಮಾಡುತ್ತಿದ್ದೆ. ಇಲ್ಲಿ ಬೆಳಿಗ್ಗೆ ಬಂದು ಕುಳಿತುಕೊಂಡ ಮೇಲೆ ಸ್ವಲ್ಪ ಪರಾಂಭರಿಸಿ ನೋಡಿದಾಗ ಇದರಲ್ಲಿ ಬಹಳ ಗಂಭೀರವಾದಂಥ ಕೆಲವು ವಿಚಾರಗಳು ಅಡಗಿವೆ. 38(ಸಿ) ಇದು ಹಿಂದೆ ನಮ್ಮ ಸರ್ಕಾರ ಇರುವಾಗಲೇ ಅಮೆಂಡ್‌ಮೆಂಟ್ ಮಾಡಿದ್ದು. It was only for a limited purpose.

ಏಕೆಂದರೆ ಇದನ್ನು ನಾನು ಸ್ವಲ್ಪ ಪುನರುಚ್ಚಿಸುತ್ತೇನೆ.

"Notwithstanding any thing contained in this Act or in any other law or any development scheme sanctioned under this Act, or City Improvement Trust Board Act, 1945 where the authority or the erstwhile city Improvement Trust Board, Bangalore has already passed a resolution to reconvey ....

ಅಂದರೆ 38(ಸಿ) ಹೊಸ ಕೇಸುಗಳಿಗೆ ಇದು ಅನ್ವಯ ಆಗುತ್ತಾ ಇರಲಿಲ್ಲ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಯಾವುದು ನಿರ್ಣಯಗಳನ್ನು ಬಹಳ ಕಾಲದಿಂದ ಮಾಡುತ್ತಾ ಬಂದಿದ್ದರು, ಆನ್‌ಮೆರಿಟ್ ಅಲ್ಲಿ ನಿರ್ಣಯಗಳು ಆನೇಕ ವರ್ಷಗಳಿಂದ ಬಾಕಿ ಇದ್ದವು. ಒಂದು ರೀತಿ ನೆನಗುದಿಗೆ ಆ ಕೇಸುಳುಗೆ ಬಿದ್ದಿದ್ದವು. ಈ ನಿರ್ಣಯವನ್ನು ಅನುಷ್ಠಾನ ಮಾಡಲಿಕ್ಕೆ ಅದಕ್ಕೆ ಸೀಮಿತವಾಗಿ ಒಂದು ತಿದ್ದುಪಡಿಯನ್ನು ಆಸಂದರ್ಭದಲ್ಲಿ..

" .. In favour of any person any site formed in the land which belong to them or vested in or acquired by them for the purpose of any development

scheme and on the ground that it is not practicable to include such site for the purpose of the development scheme, the authority may allot such site by way of sale or lease in favour of such person subject to the following conditions :-

ಇದರಲ್ಲಿ ಒಂದು ಕಂಡೀಷನ್ ಏನೆಂದರೆ : the allottee shall be liable to pay any charges ಅದನ್ನು ಮೊದಲು ಇಂಕ್ಲೂಡ್ ಮಾಡಿದ್ದಾರೆ. 'ಬಿ' ನಲ್ಲಿ

"(b) the total extent of the site allotted under this section together with the land already held by the allottee shall not exceed the ceiling limit specified under section 4 of urban land (Ceiling and regulation) Act. 1976."

ಸೀಲಿಂಗ್ ಆ್ಯಕ್ಟ್ ಪ್ರಕಾರ ಅದಕ್ಕೆ ಒಂದು ಲಿಮಿಟ್ ಇದೆ. these are the limitations. ಆ ಸಂದರ್ಭದಲ್ಲಿ ಅದನ್ನು ಹಾಕಿದರು. ನನಗೆ ಒಂದು ಕೇಸ್ ಜ್ಞಾಪಕಕ್ಕೆ ಬರುತ್ತಿದೆ. One case still remember.

ಏಕೆಂದರೆ ಅದನ್ನು ಮುಖ್ಯವಾಗಿ ಮೆಡಲ್ ಮಾಡಬಾರದು. It should be taken as an exception. Not as a general rule.

ಏಕಂದರೆ ಒಮ್ಮೆ ಫೈನಲ್ ನೋಟಿಫಿಕೇಷನ್ ಆದಮೇಲೆ ಈಗ ಬಾಕಿ ಪ್ರಿಲಿಮಿನರಿ ಮತ್ತೊಂದು ಆದಮೇಲೆ ಡಿನೋಟಿಫಿಕೇಷನ್ ಮಾಡತಕ್ಕಂಥ ಪ್ರೋಸಸ್ ಅದು ನಡೆದೇ ನಡೆಯುತ್ತದೆ. ಆದರೆ ಒಮ್ಮೆ ಫೈನಲ್ ನೋಟಿಫಿಕೇಷನ್ ಕೊಟ್ಟಮೇಲೆ, ಜಾಗವನ್ನು ಸ್ವಾಧೀನಕ್ಕೆ ತೆಗೆದುಕೊಂಡ ಮೇಲೆ ಇವತ್ತು ಅದನ್ನು ಹಿಂದೆ ಕೊಡತಕ್ಕಂಥ ವಿಚಾರ ಅದು ಬಹಳ exceptional case ಆಗಿರಬೇಕು ಕಾನೂನು ಮಾಡಲು ಈಗಲೂ ಕೂಡ ಅದು ಇರಬೇಕು 48 (c) is a bar.

ಮಾನ್ಯ ಅಧ್ಯಕ್ಷರೇ ಅವರು ಹೇಳಿದ ಪ್ರಕಾರ ಸುಪ್ರೀಂ ಕೋರ್ಟು ಮತ್ತು ಹೈಕೋರ್ಟುಗಳ ನಿರ್ಣಯಗಳೂ ಕೂಡ ಇವೆ. ಆ ನಿರ್ಣಯಗಳು ಯಾವುದನ್ನೂ ಈಗಿನ ತಿದ್ದುಪಡಿಯಲ್ಲಿ ಗಣನೆಗೆ ತೆಗೆದುಕೊಂಡಿದ್ದು ನನಗೆ ಕಾಣುತ್ತಿಲ್ಲ. It is likely to be struck down in the High Court or the Supreme court.ಇದು ನಡೆಯುತ್ತಿದೆ. ಏಕೆಂದರೆ ನಾವು ಯಾವುದೇ ಕಾನೂನು ಮಾಡುವುದಿದ್ದರೆ ಅದಕ್ಕೆ ಒಂದು ಇತಿಮಿತಿ ಇರುತ್ತದೆ. ಕಾನೂನು ಮಾಡತಕ್ಕಂಥ ಅಧಿಕಾರ ಶಾಸಕಾಂಗಕ್ಕೆ ಇದ್ದ ಕೂಡಲೇ ನಾವು ಕಾನೂನನ್ನು ಬೇಕಾಬಿಟ್ಟಿ ಮಾಡುವುದಕ್ಕೆ ಆಗುವುದಿಲ್ಲ. You cannot create an anarchy by making a law. ಅದು ಅರಾಜಕತೆ ಆಗಬಾರದು. It is a regulatory one.

ಏಕೆಂದರೆ ಒಮ್ಮೆ ಫೈನಲ್ ನೋಟಿಫಿಕೇಷನ್ ಆದರೆ ಏನು ಸ್ಯಾಂಕ್ಟಿಟಿ ಉಳಿಯುತ್ತದೆ? ಪುನಃ ಅದನ್ನು ರಿಕನ್ವೆ ಮಾಡದೆ ಇದ್ದರೆ, ಪುನಃ ಅವನಿಗೇ ಕೊಡುವುದಿದ್ದರೆ - it should be extraordinary. ಒಂದು ಉದಾಹರಣೆಯನ್ನು ನಾನು ಕೊಡುವುದಕ್ಕೆ ಬಯಸಿದೆ. ಇಲ್ಲಿ ಅರೆಬಿಕ್ ಕಾಲೇಜ್ ಎಂದು ಒಂದು ಇತ್ತು. ಅದು ಶಿವಾಜಿನಗರ ಕ್ಷೇತ್ರಕ್ಕೆ ಬರುತ್ತದೆ. ನಾನು ಅದನ್ನು ವಿಸಿಟ್ ಮಾಡಿದ್ದೆ ಇಡೀ ದೇಶದಲ್ಲಿ ಬಹಳ ಅತ್ಯಂತ ಉನ್ನತವಾದಂಥ ಒಂದು ಅರೆಬಿಕ್ ಕಾಲೇಜ್ ಆದು. ಸರ್ವೇಸಾಧಾರಣವಾದ ಜಾಗ ಅದು ಅಲ್ಲ. ಲಕ್ನೋದವರು ಯಾರೋ ಅದನ್ನು ನಡೆಸುತ್ತಿದ್ದರು. ಅಲ್ಲಿಗೆ ಶಿವಾಜಿನಗರ ದಾಟಿ ಹೋಗಬೇಕು. ಆ ಅರೆಬಿಕ್ ಕಾಲೇಜಿನಲ್ಲಿ ಏನಾಗಿದೆ ಎಂದರೆ ಅವರು

ಬಹಳ ವರ್ಷಗಳಿಂದ ಕಾಂಪೌಂಡ್ ಹಾಕಿಬಿಟ್ಟಿದ್ದಾರೆ. it is a part and parcel of the arabic College Campus.

ಆದರೆ ಏನು ಮಾಡಿದ್ದಾರೆ? ಯಾರದ್ದೋ ರಾಜಕೀಯ ದ್ವೇಷವೋ, ವೈಯಕ್ತಿಕ ದ್ವೇಷವೋ, ಅದನ್ನು ಮಾಡಿ ಆ ಜಾಗವನ್ನು ನೋಟಿಫೈ ಮಾಡಿ ಅಪ್ರೂವ್ ಮಾಡಿ ಅದರ ಫೈನಲ್ ನೋಟಿಫಿಕೇಷನ್ ಕೂಡ ಹಾಕಿಬಿಟ್ಟರು. I am telling you one hard case. ಅಂಥಾದ್ದು ಬಹಳ ಎಕ್ಸಪ್‌ಶನಲ್ ಕೇಸ್ ಇವೆ. ಎಲ್ಲಿ ನಮಗೆ ಹಿಂದೆ ಕೊಡುವುದಕ್ಕೆ ಆಗುವುದಿಲ್ಲ. ಅಲ್ಲಿ ನಾವು ಬಹಳ ಚರ್ಚೆ ಮಾಡಿದ್ದೇವೆ. ಆದರೆ ಕಾನೂನು ಪ್ರಕಾರ ಇದು ಆಗುವುದಿಲ್ಲ, ಅದಕ್ಕಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್, ಬೋರ್ಡ್ ಅದರ ಬಗ್ಗೆ ನಿರ್ಣಯ ಮಾಡುತ್ತಲೇ ಇದ್ದರು. ಆದರೆ ನಮಗೆ ಅದನ್ನು ಅನುಷ್ಠಾನ ಮಾಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಆದರೆ ಅದನ್ನು ಕೊಡಿಸಿಕೊಡುವುದಕ್ಕೆ ಆಗಲೀ, it would have become a big law and order problem in the entire country. ಅದು ಮಾಡುವುದಕ್ಕೆ ಸಾಧ್ಯವೇ ಇಲ್ಲ. ಇಂಥಾದ್ದು ಅನೇಕ ಹಾರ್ಡ್‌ಕೇಸಸ್, ಅನಿವಾರ್ಯವಾದಂಥ ಕೇಸ್‌ಗಳು, ನಾವು ಸ್ವಾಧೀನ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಅವರೂ ಕೂಡ ಅದನ್ನು ಎಂಜಾಯ್ ಮಾಡುವುದಕ್ಕೆ ಆಗುವುದಿಲ್ಲ. It is a great heart-burning exercise, ಅದು ಇತ್ತು. ಕೆಲವು ಸಾರಿ ಅಂಥಾದ್ದು ಆದಾಗ ಇಂತಹ ಕೆಲವು ನಿರ್ಣಯಗಳು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಆಗಿವೆ. ಆದರೆ ಅದನ್ನು ಅನುಷ್ಠಾನ ಮಾಡಬೇಕೆಂದು ಹೇಳಿ ಅದನ್ನು ಸ್ವಾಧೀನ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಲೇ ಇರಲಿಲ್ಲ ಈ 38 (c) ಇದರ ಬಗ್ಗೆ ಮಾಡಿದ್ದು - 38 (c) amendement, is a very rare case, one-time operation and for the resolution already taken by the BDA, not to be taken in future. It has a very limited purpose.

ಮತ್ತೆ ಇನ್ನೊಂದು ರಿಸ್ಟ್ರಿಕ್ಷನ್ ಏನೆಂದರೆ ಅರ್ಬನ್ ಸೀಲಿಂಗ್ ಆಕ್ಟ್‌ನಲ್ಲಿ ಏನು ಎಲಿಜಿಬಲ್ ಇದೆ. ಅಷ್ಟಕ್ಕೆ ಸೀಮಿತಗೊಳಿಸಬೇಕು. ಈಗ ಅರ್ಬನ್ ಸೀಲಿಂಗ್ ಆಕ್ಟ್‌ನ್ನು ತೆಗೆದೇ ಬಿಡಬೇಕೆಂದು ಕೇಂದ್ರಸರ್ಕಾರ ನಿರ್ಣಯ ಮಾಡಿದೆ. ಈ ಅಧಿವೇಶನದಲ್ಲಿ ನೀವೂ ಕೂಡ ರಿಪೀಲ್ ಮಾಡುತ್ತೀರೆಂದು ಭಾವನೆ ಇದೆ. ಏಕೆಂದರೆ, it will introduce a lot of transparency.

ಇಲ್ಲವಾದರೆ ಚರ್ಚೆಗೆ ಇಟ್ಟುಕೊಳ್ಳುತ್ತೀರಿ. ಸಾಕಷ್ಟು ಅಪವಾದ ಬರುತ್ತದೆ. ಸಾಕಷ್ಟು ಚಾರ್ಜಸ್ ಆಗುತ್ತದೆ. ಆ ಕಾಲದಲ್ಲಿ ಅದೊಂದು ರಿಸ್ಟ್ರಿಕ್ಷನ್ ಇತ್ತು. It is alright now. It is no more valid. ಏಕೆಂದರೆ ಹೌಸಿಂಗ್ ಕಾರ್ಯಕ್ರಮಗಳಿಗೆ, it has become obsolete. I agree with the Government of India, that is the best decision taken.

ಚೇರ್ಮನ್ : ಲ್ಯಾಂಡ್ ರಿಫಾರ್ಮ್‌ಗೆ ಏಕೆ ಸೀಲಿಂಗ್ ಹಾಕಬೇಕು? ಒಂದು ಸೆಕ್ಷನ್‌ಗೆ ಸೀಲಿಂಗ್ ಹಾಕಿದರೆ ಇನ್ನೊಂದು ಸೆಕ್ಷನ್‌ಗೆ ಸೀಲಿಂಗ್ ಹಾಕುವುದು ಬೇಡವೇ?

ಶ್ರೀ ಎಂ. ವೀರಪ್ಪ ಮೊಯ್ಲಿ : ಲ್ಯಾಂಡ್ ರಿಫಾರ್ಮಗೂ ಇದಕ್ಕೂ ಬಹಳ ವ್ಯತ್ಯಾಸ ಇದೆ. ನೀವು ಅರ್ಬನ್‌ನಲ್ಲಿ ರಿಲ್ಯಾಕ್ಸೇಷನ್ ಕೊಡುತ್ತಲೇ ಇದ್ದೀರಿ. You are making the relaxation.

ಇಲ್ಲದೇ ಹೋದರೆ ಸರ್ಕಾರದ ವಿವೇಚನೆಗೆ ಇಡಲೇಬಾರದು. ಏಕೆ ಲ್ಯಾಂಡ್ ರಿಫಾರ್ಮ್ಸ್ ಆಗಬೇಕು. Be very strict. Whoever occupies. Wherever land ceiling

ಹೆಚ್ಚಾದರೆ, ಅದನ್ನು ನೀವು ಬಿಟ್ಟುಬಿಡಿ. ಇಲ್ಲಿ ಪ್ರಶ್ನೆ ಎಂದರೆ, ವಿವೇಚನೆಗೆ ಹೋದಕೂಡಲೇ ಅಲ್ಲಿ ಕರಪ್ಷನ್ ಆಗುತ್ತದೆ. ಅದರಲ್ಲಿ red-tapism ಆಗುತ್ತದೆ. It is only those people who will really grease the hands, will get it. ನಿಜವಾದ ನೀಡ್ ಇದ್ದವರಿಗೆ ಸಹಾಯಕ್ಕೆ ಬರುವುದಿಲ್ಲ.

ಆದ್ದರಿಂದ, ಅದು ಒಂದು ಭಾಗ. ಅದಕ್ಕೆ ಚರ್ಚೆ ಇದೆ. ಅವರು ಹೇಳಿದ್ದು ಸರಿ. ಇಲ್ಲಿ ಡಿಬೇಟ್ ಆಗಬಹುದು. ಡಿಬೇಟ್ ಆಗಲಿ, ನಾನು ಡಿಬೇಟಿಗೆ ಅಡ್ಡಿ ಬರುವುದಿಲ್ಲ. ಆದರೆ ನನ್ನ ಅಭಿಪ್ರಾಯ ಹೇಳಿದೆ. ಆ ರೆಫರೆನ್ಸ್ ಈ ಆಕ್ಟ್‌ಗೆ ನೇರವಾಗಿ ಬರುವುದಿಲ್ಲ. ಇಲ್ಲಿ ಏಕೆ ತಂದೆ ಎಂದರೆ ನೀವು ಇಂಟ್ರಡ್ಯೂಸ್ ಮಾಡಿದಂಥ ಅಮೆಂಡ್‌ಮೆಂಟ್ ಏನಿದೆ, ಅದರ ರೆಫರೆನ್ಸ್‌ಗೆ ತಂದೆ. ಅರ್ಬನ್ ಸೀಲಿಂಗ್ ಬಗ್ಗೆ ದೊಡ್ಡ ವ್ಯಾಖ್ಯಾನ ಮಾಡತಕ್ಕ ಸಮಯ ಇದಲ್ಲ. ನಾನು ಅದನ್ನು ಹೇಳುವುದಿಲ್ಲ. ಆದರೆ ಇಲ್ಲೇನು ತಾವು ಇಂಟ್ರಡ್ಯೂಸ್ ಮಾಡಿದ್ದೀರಿ.

"Notwithstanding anything contained in this Act or any other... where acquired by it, is of the opinion that such land cannot be used by it on account of existing structure or building thereon or it is not practicable to include such land for the purpose of development scheme of formation of sites, the Authority may with prior approval of the government allot such land by the sale in favour of the original owner of the land or any other person who has put up such structure.."

In sec 38 (c) it was very clear, where the land belongs to them by title or vested in or acquired by it.

ಇಲ್ಲಿ ರೈಟ್‌ಫುಲ್ ಟೈಟಲ್ ಬೇಕಾಗಿಯೇ ಇಲ್ಲ. ಇವತ್ತು ಇದಕ್ಕೆ ಪ್ರಿಸ್ಕ್ರೈಬ್‌ಡೇಟ್ ಏನೂ ಇಲ್ಲ ಇವತ್ತು ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ.

It has given a prior notice to all the people, ನಾಳೆ ಬೆಳಿಗ್ಗೆಯಾದರೆ ಎಲ್ಲಾ ಸ್ಟ್ರಕ್ಚರ್ಸ್ ಬಂದುಬಿಡುತ್ತದೆ, ಎಲ್ಲಾ ಆಕ್ಯುಪೇಷನ್ ಬಂದುಬಿಡುತ್ತದೆ.

A person who occupies, I think already from Bombay and other places, the mafia gang must have already arrived here. ಯಾರಿಗೆ ರೈಟಫುಲ್ ಸೈಟ್ ಅಲಾಟ್ ಆಗಿದೆ. ಆಜಾಗವೆಲ್ಲಾ ಇವತ್ತು ಮೈಟ್ ಈಸ್ ರೈಟ್. ಆಕ್ಯುಫೈ ಆಗುತ್ತದೆ ಬಲಾತ್ಕಾರ ಆಗುತ್ತದೆ.

Bangalore has been classified No.2 worst kind City in the country. First place goes to Patna, next to Bangalore.

ಇದು ಗೃಹ ಇಲಾಖೆಯ ನೋಟಿಫಿಕೇಷನ್. ಇದು ನನ್ನ ಸ್ವಂತ ಅಲ್ಲ. ಎಲ್ಲಾ ಕ್ರೈಮ್‌ಗಳಾಗ ತಕ್ಕಂಥ ಮಾಫಿಯಾ ಗ್ಯಾಂಗ್ ಬರತಕ್ಕಂಥ ಪರಸ್ಪರ ಕೊಲ್ಲತಕ್ಕಂಥಾದ್ದು. ಯಾವರೀತಿಯಲ್ಲಿ ಒಕ್ಕಲೆಬ್ಬಿಸಬೇಕು, ಯಾವರೀತಿಯಲ್ಲಿ ಭೂಮಿ ಕಬಳಿಸಬೇಕು, ತಾವು ಹೇಳಿದಹಾಗೆ ಹಿಂದಿನ ಆರ್ಗುಮೆಂಟ್ ಹೋಯಿತು. ಜಿ.ವಿ.ಕೆ. ರಾವ್ ರಿಪೋರ್ಟ್ ಬಗ್ಗೆ ಯಾರೋ ಮಾತನಾಡುತ್ತಿದ್ದರು.

ಜಾಗ ಕಬಳಿಸುವವರ ಬಗ್ಗೆ ನೆಲಗಳ್ಳರ ಬಗ್ಗೆ ಹೇಳುತ್ತಿದ್ದರು. ಇದು ನೆಲಗಳ್ಳರ ಪ್ರಶ್ನೆ ಅಲ್ಲ. ಇದು ದೊಡ್ಡ ನೆಲ ಮಾಫಿಯಾವೇ. ಎಲ್ಲಾ ಕಡೆಯಿಂದ ಬಂದು they will land here with this kind of an act. ದಯಮಾಡಿ ಇದನ್ನು ಆಲೋಚನೆ ಮಾಡಬೇಕು. ಅದಕ್ಕಾಗಿ ಮಾನ್ಯ ನಂಜೇಗೌಡರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಏಕೆಂದರೆ ಅನೇಕ ಬಡವರಿಗೆ ಸಹಾಯವಾಗಬಹುದು. That is one part of the argument. He has a view. ನಿಮ್ಮ ಅಭಿಪ್ರಾಯವನ್ನು ಕಾರ್ಪೆಟ್ ಅಡಿಯಲ್ಲಿ ಹಾಕುವುದಕ್ಕೆ ಹೋಗಬೇಡಿ. people have views. Doesn't matter. There is merit also.

ಶ್ರೀ ಹೆಚ್. ಎನ್. ನಂಜೇಗೌಡ : ಮಾನ್ಯ ಕಾಗೋಡು ತಿಮ್ಮಪ್ಪನವರು ನನ್ನ ಜೊತೆ ಬಂದರೆ ತಬ್ಬಲಿಗಳ ಜಮೀನು ವಶಪಡಿಸಿಕೊಂಡಿದ್ದಾರಲ್ಲಾ ಅವರ ಸ್ಥಿತಿಯನ್ನು ತೋರಿಸುತ್ತೇನೆ. ನಾಳೆ ಅವರನ್ನು ಬಿಡಿಸಿದರೆ, ಅವರು ಮಲಗುವುದಕ್ಕೆ ವಾಸಕ್ಕೆ ನಿಮ್ಮ ಮನೆಗೆ ಕಳುಹಿಸಬಹುದೇ? ಅವರೇನು ಕೂಲಿ ಮಾಡುವುದಕ್ಕೆ ಹೋಗುತ್ತಾರೆಯೇ? ನೂರು ಕೋಟಿ ಜಮೀನು ಕಳೆದುಕೊಂಡವರು ಕೂಲಿ ಮಾಡುವ ಸ್ಥಿತಿಗೆ ಬಂದಿದ್ದಾರೆ. ಅಂತಹವರಿಗೆ ಇರುವುದಕ್ಕೆ ಸ್ಥಳವಾದರೂ ಬೇಡವೇ?

ಶ್ರೀ ಎಸ್. ಪಿ. ಮುದ್ದಹನುಮೇಗೌಡ : ಆ ಭಾಗದಲ್ಲಿ ಮನೆ ಕಟ್ಟಿಕೊಂಡಿದ್ದಾರಲ್ಲಾ ಅವರ ಮನೆಯಲ್ಲಿ ಕೂಲಿ ಮಾಡುತ್ತಿದ್ದಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅಂತಹವರಿಗೆ ಕೊಟ್ಟರೆ ನಮ್ಮದೇನೂ ಆಕ್ಷೇಪಣೆ ಇಲ್ಲ. ಆದರೆ ಇನ್ನೂ ರೂಲ್ಸ್ ಫ್ರೇಮ್ ಮಾಡಿಲ್ಲ. ನೀವು ಏನು ರೂಲ್ಸ್ ಫ್ರೇಮ್ ಮಾಡುತ್ತೀರಿ ಅದು ನಮಗೆ ಗೊತ್ತಾಗಬೇಕಲ್ಲಾ. ಯಾರಿಗೆ ಕೊಡುತ್ತೀರಿ. ಕಳ್ಳರಿಗೆ ಕೊಡುತ್ತೀರೋ? ಸ್ಮಗ್ಲರ್ಸ್‌ಗೆ ಕೊಡುತ್ತೀರೋ? ಮಾಫಿಯಾ ಗ್ಯಾಂಗ್‌ಗೆ ಕೊಡುತ್ತೀರೋ ಯಾರಿಗೆ ಕೊಡುತ್ತೀರಿ?

ಆದ್ದರಿಂದ ರೂಲ್ಸ್ ಹೇಗೆ ಫ್ರೇಮ್ ಮಾಡುತ್ತೀರಿ ಎಂಬುದಕ್ಕೆ ಗೈಡಲೈನ್ಸ್ ಹಾಕಬೇಕಾಗುತ್ತದೆ. ಹಾಗೆಯೇ ಕೊಡುವುದಕ್ಕೆ ಬರುವುದಿಲ್ಲ. ಲ್ಯಾಂಡ್ ಸೀಲಿಂಗ್ ಒಂದು ಫ್ಯಾಮಿಲಿಯಲ್ಲಿ ಎಷ್ಟಿರುತ್ತದೆ? ಅದನ್ನು ಚೆಕ್ ಮಾಡಬೇಕಲ್ಲಾ ಇದನ್ನು ಹೇಗೆ ಮಾಡಬೇಕೆಂಬುದನ್ನು ತಾವು ಹೇಳಬೇಕಾಗುತ್ತದೆ. ಆಮೇಲೆ ಇನ್ನು ಮುಂದೆ ಬರತಕ್ಕ ಫ್ಯೂಚರ್ ಸ್ಕೀಮ್‌ಗೆ ಇದು ಅಪ್ಲೈ ಆಗುವುದಿಲ್ಲವೆಂಬುದನ್ನು ದಯವಿಟ್ಟು ತಾವು ಕ್ಲಾರಿಫೈ ಮಾಡಬೇಕು. ಈಗಾಗಲೇ ಸಿಕ್ಸ್ ಒನ್ ನೋಟಿಫಿಕೇಷನ್ ಎಲ್ಲಾಗಿದೆ ಫೈನಲ್ ನೋಟಿಫಿಕೇಷನ್ ಎಲ್ಲಾಗಿದೆ ಅದಕ್ಕೆ ಮಾತ್ರ ಸೀಮಿತಗೊಳಿಸುತ್ತೇವೆಂದು ಮಾಡಬೇಕು. ಮತ್ತೆ ಎರಡು ತಿಂಗಳೊಳಗೆ ತಾವು ಇದನ್ನು ಮಾಡುವುದಾದರೆ ಮಾಡಬೇಕು. ನೀವು ಮಾಡತ್ತೇವೆಂದು ಹೇಳಿಕೊಂಡು ಇನ್ನು 6 ತಿಂಗಳು ರೂಲ್ಸ್ ಫ್ರೇಮ್ ಮಾಡಿಕೊಂಡು ಮಾಡುವುದಾದರೆ ನೀವು ಮಾಡಲೇಬೇಡಿ. ರೂಲ್ಸ್ ತೆಗೆದುಕೊಂಡು ಬಂದು, ಯಾವ ತರಹ ಮಾಡುತ್ತೇವೆಂದು ಹೇಳಿದರೆ, ನಮಗೆ ಗೊತ್ತಾಗುತ್ತದೆ. ಇಲ್ಲದಿದ್ದರೆ ನಮಗೆ ಕಷ್ಟವಾಗುತ್ತದೆ. ಆದ್ದರಿಂದ ಇದರ ಬಗ್ಗೆ ತಾವು ದಯವಿಟ್ಟು ಹೇಳಬೇಕಾಗುತ್ತದೆ.

ಶ್ರೀ ಎಲ್. ಆರ್. ಶಿವರಾಮೇಗೌಡ : ಸೆಕ್ಷನ್ 38 (ಸಿ) ತಂದಿದ್ದು ಸಹ ಎಂತಹ ಅನ್ಯಾಯವಾಗಿದೆ ಇದೆಲ್ಲಾ ಸರಿಪಡಿಸಬೇಕೆಂಬ ಉದ್ದೇಶದಿಂದಲೇ ನೀವು ತಂದಿದ್ದು. ನಂತರ ಸೆಕ್ಷನಂ 38 (2)

ಮಾಡಿರತಕ್ಕಂತಾದ್ದು ಆದರಿಂದೀಚೆಗೆ ಏನೇನು ಅನ್ಯಾಯವಾಗುತ್ತಿದೆ. ಅದನ್ನು ಸರಿಪಡಿಸುವುದಕ್ಕೋಸ್ಕರ ತಂದಿರುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಮೊಯ್ಲಿಯವರೇ ಸೆಕ್ಷನ್ 38 (C) ತಿದ್ದುಪಡಿ ತಂದಿದ್ದು ಅವರು ಒನ್ ಟೈಮ್ ಫೈನಲ್ ಎನ್ನುವ ಉದ್ದೇಶದಿಂದ ತಂದರು. ಅದಕ್ಕೆ ನಿರ್ಬಂಧ ಏನಿತ್ತು? ಲ್ಯಾಂಡ್ ಸೀಲಿಂಗ್ ಆಕ್ಟ್ ಪ್ರಕಾರ ಇಷ್ಟು ಸೀಲಿಂಗ್ ಇತ್ತು ಆದರೆ ನೀವು ತಂದಿದ್ದೀರಲ್ಲಾ ಬಿಲ್‌ನಲ್ಲಿ ಏನಿದೆ ಎಂದು ಒಂದೇ ಒಂದು ವರ್ಡ್ ಹೇಳುತ್ತೇನೆ.

".... without prejudice to sub-section (1) where the acquired by it, is of the opinion that such land cannot be used by it on account of existing sturcture or building..

ಒಪೀನಿಯನ್ ಎಂದರೇ ಹೇಗೆ? ಇದನ್ನು ಯಾವರೀತಿ ಅರ್ಥಮಾಡಿಕೊಳ್ಳಬಹುದೆಂದರೆ, ನಿಮಗೆ ಬೇಕಾಗಿರುವ ಒಬ್ಬರು ಬಿ ಡಿ ಎ ಕಮೀಷನರ್ ಇದ್ದರೆ...

ಶ್ರೀ ವಿ. ಸೋಮಣ್ಣ : ಪ್ರಿಂಟ್ ಆಗಿರುವುದರಲ್ಲಿ ಒಂದು ತಪ್ಪಾಗಿದೆ. Authority after carrying out all the survey.. ಸರ್ವೆ ಇದೆಲ್ಲಾ ಮಾಡಿ ಅದಾದಮೇಲೆ ಒಪೀನಿಯನ್ ಎಂದು ಬರುತ್ತದೆ. ಮಾನ್ಯ ವೀರಪ್ಪಮೊಯ್ಲಿಯವರು ಹೇಳಿದ ಹಾಗೆ 42 ಸೊಸೈಟಿಗಳು ಅರೇಬಿಕ್ ಸೊಸೈಟಿ ಇವೆಲ್ಲಾ ಹೇಳಿದರಲ್ಲಾ. 1986 ಆದಂಥ ನಿರ್ಣಯದ ಆಧಾರದ ಮೇಲೆ ಸುಮಾರು 31 ಸಾವಿರ ಅರ್ಜಿಗಳು ಬಂದವು. ಈ 31 ಸಾವಿರದಲ್ಲಿ ಯಾರು ಯಾರು ದೊಡ್ಡ ದೊಡ್ಡ ಅರೇಬಿಕ್‌ನಂಥವರು, ಮತ್ತೊಬ್ಬರು ಇದ್ದರೋ ಇಂತಹ 12 ಸಾವಿರ ಜನರಿಗೆ ಈ ನಿರ್ಣಯ ಆಯಿತು. ಅದರಂತೆ 38 (ಸಿ) ಅಪ್ಲೈ ಆಯಿತು. ಕಾಮನ್ ಪೀಪಲ್ ಯಾರಿದ್ದಾನೆ 20-30 30-40 ರಲ್ಲಿ ಕಟ್ಟಿಕೊಂಡಿರುವವನಿಗೆ 38 (ಸಿ) ಯಾರು ಕೂಡ ಅಪ್ಲೈ ಮಾಡಿಕೊಳ್ಳುವುದಕ್ಕೆ ಹೋಗಿಲ್ಲ. 1986 ಈ ಬಗ್ಗೆ ನಿರ್ಣಯವೂ ಆಗಿಲ್ಲ. 1986ನಲ್ಲಿ ಆದಂಥ ನಿರ್ಣಯ ದೊಡ್ಡ ದೊಡ್ಡ ವ್ಯಕ್ತಿಗಳ ನಿರ್ಣಯ. ಯಾರೂ ಸಣ್ಣಪುಟ್ಟವರು ಹೋಗಿ ಅರ್ಜಿ ಹಾಕಿಕೊಂಡು ರೆಸಲ್ಯೂಷನ್ ಮಾಡುವ ಪರಿಸ್ಥಿತಿಯಲ್ಲಿರಲಿಲ್ಲ. ಅಂತಹ ವ್ಯಕ್ತಿಗಳನ್ನು ಇವತ್ತು ಮಾನವೀಯತೆ ದೃಷ್ಟಿಗಿಂತ ಹೆಚ್ಚಾಗಿ ಇವತ್ತೇನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಮಾಡಿದ್ದಾರೆ. ಒಂದು ಕಡೆ 38 (c) ನಲ್ಲಿ ನೀವು ಮಾಡಿ ಅವರೆಲ್ಲರಿಗೂ ಬಿಟ್ಟುಕೊಟ್ಟಿದ್ದೀರಿ ಪಕ್ಕದಲ್ಲಿರುವವರೆಲ್ಲರಿಗೂ ನಾಗರೀಕ ಸೌಲಭ್ಯಗಳು ಸಿಕ್ಕಿವೆ.

3.50 ಪಿ.ಎಂ.

ಬೆಂಗಳೂರು ನಗರಕ್ಕೆ ಬಂದು ಒಬ್ಬ ಕಾರ್ಮಿಕನಾಗಿ ಒಂದು ಕಿರಾಣಿ ಅಂಗಡಿಯನ್ನು ಇಟ್ಟುಕೊಂಡು 20x30 ಅಳತೆಯಲ್ಲಿ ಒಂದು ಮನೆಯನ್ನು ಕಟ್ಟಿಕೊಂಡಿದ್ದಂತಹ ಜನ ಯಾರು ಇದ್ದರು ಅಂತಹವರಿಗೆ ನಾವು ಮಾಡುತ್ತಿರುವ ಟೈಟಲ್ ಡೀಡ್‌ಗೋಸ್ಕರ ನಾವು ಯಾವುದೇ ಒಂದು ಸೀಲಿಂಗ್ ಲಿಮಿಟ್ ಆಗಲಿ, ಎಕರೆಗಟ್ಟಲೆ ಮಾಡತಕ್ಕಂಥವರಿಗೆ ಆಗಲಿ ಅಥವಾ ಯಾವುದೇ ಒಂದು ಸೊಸೈಟಿ ಮಾಡಿಕೊಡುವಂಥಾದ್ದು ಅಲ್ಲ. ಯಾರು ಅರ್ಜಿ ಹಾಕಿಕೊಂಡು ಅವತ್ತಿನಿಂದ ಇದ್ದರು ಅವರಿಗೋಸ್ಕರ ನಾವು ಇವತ್ತು ಇದನ್ನು ತಂದಿದ್ದೇವೆಯೇ ವಿನಹ ಬೇರೆಯದ್ದಕ್ಕೆ ಅಲ್ಲ. ತಾವು ಎರಡು ತಿಂಗಳು ಟೈಮ್ ಹೇಳಿದ್ದೀರಿ ಒಂದೂವರೆ ತಿಂಗಳಲ್ಲಿ ಈ ಎಲ್ಲಾ ಸರ್ವೆಯನ್ನು ಮಾಡಿ ಸರ್ಕಾರದ ಮುಂದೆ

ತರಬೇಕೆಂದು ಮಾಡಿದ್ದೇವೆ. ಇದರಲ್ಲಿ ಏನೋ ಹೈಡ್ ಅಂಡ್ ಸೀಕ್ ಮಾಡಿ ಮಾಡಬೇಕೆಂದು ಇಲ್ಲ. ತಾವು ಮತ್ತೊಂದು ಮಾತು ಹೇಳಿದಿರಿ. ಅದಕ್ಕೆ ನಾವು ಒಂದು ಕಾಲ ನಿಗಧಿ ಸಹ ಮಾಡುತ್ತೇವೆ. ಇವತ್ತು ಸುಮಾರು 5500 ಕೇಸುಗಳು ಇವೆ. ಬಿಡಿಎ ನಲ್ಲಿ ನಮ್ಮ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ಅವರು ಹೇಳಿದಂತೆ ನಾವು ಏನಾದರೂ ಅದನ್ನು ಮಾಡಿದರೆ ಇನ್ನೂ ನಾವು ಸುಮಾರು 25-30 ಸಾವಿರ ಜನಗಳಿಗೆ ಸೈಟ್ ಕೊಡಬಹುದು. 5500 ಕೇಸ್‌ಗಳು ಸುಮ್ಮನೆ ನಡೆಯುತ್ತಿವೆ ಕೋರ್ಟಿನಲ್ಲಿ. ಇದರ ಜೊತೆಗೆ ಮಾನ್ಯ ಸದಸ್ಯರಾದ ನಂಜೇಗೌಡರು ಹೇಳಿದ ಹಾಗೆ 20 ಎಕರೆ 30 ಎಕರೆ ಇಟ್ಟುಕೊಂಡಿದ್ದವರಿಗೆ ನಾವು ಒಂದು ಸೈಟ್ ಕೊಡುವುದಕ್ಕೆ ಆಗಿಲ್ಲ. ಅಕ್ವಿಸಿಷನ್‌ಗೆ ಒಂದು ಲಕ್ಷದಿಂದ 70 ಸಾವಿರ ಮಾತ್ರ ಇವರು ಕೊಟ್ಟಿರುವುದು, ಒಂದು ಎಕರೆಗೆ. ಯಾರೋ ಒಬ್ಬ ಮಧ್ಯದಲ್ಲಿ ಬಂದ ದುಡ್ಡು ತೆಗೆದುಕೊಂಡು ಹೊರಟು ಹೋದ. ಅಲ್ಲಿ ವಾಸ ಮಾಡುತ್ತಾ ಇರತಕ್ಕಂಥ ಜನ ಯಾರು ಇದ್ದಾರೆ ಬೇಡ ಎಂದು ಈ ಸದನದಲ್ಲಿ ತೀರ್ಮಾನ ಮಾಡಿ ಸುಮಾರು 35 ಸಾವಿರ ಜನ ಬರುತ್ತಾರೆ. ಅವರನ್ನೆಲ್ಲಾ ಒಡೆದು ಹಾಕುವುದಾದರೆ ನನ್ನದೇನೂ ಅಭ್ಯಂತರ ಇಲ್ಲ. ಅದಕ್ಕೆ ನೀವು ಏನಾದರೂ ಒಂದು ಮಾಡಬೇಕಾಗುತ್ತದೆ. ಏನಾದರೂ ಒಂದು ಮಾಡಬೇಕೆಂದಾದಾಗ ನೀವು 38 (ಸಿ) ಅನ್ನು ತಂದು 42 ಸೊಸೈಟಿಯವರಿಗೆ ನೀವು ಅಪ್ರೂವ್ ಮಾಡಿಕೊಟ್ಟುಬಿಟ್ಟು ಯಾರ್‍ಯಾರು ಇಂಡಿವಿಜಿಯಲ್ಸ್ ಇದ್ದರು ಅವರಿಗೆ ಏನೂ ಮಾಡುವುದು ಬೇಡ ಅಂದರೆ ಏನು ಅರ್ಥ? ತಾವು ತೀರ್ಮಾನ ಮಾಡಿ ನನ್ನದೇನೂ ಅಭ್ಯಂತರ ಇಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೇ ಇದಕ್ಕೆ ಏನಾದರೂ ಒಂದು ಆಧಾರ ಬೇಕಲ್ಲಾ ನಮಗೆ. ತಾವು ಏನಾದರೂ ನೆಗೋಷಿಯೇಷನ್ಸ್ ಮಾಡಿ ಕರೆದು ಸೆಟಲ್ ಮಾಡುತ್ತೀರಾ? ಪಾರ್ಕ್‌ಗಳಲ್ಲಿ ರಸ್ತೆಗಳಲ್ಲಿ ಇವತ್ತು ಮನೆಗಳನ್ನು ಕಟ್ಟಿರುತ್ತಾರೆ. ನೀವು ಅವರಿಗೂ ಕೊಡುತ್ತೀರಾ.

ಪ್ಲಾನ್ಡ್ ಸಿಟಿ ಆಗಬೇಕೋ ಬೇಡವೋ? ಈ ಕಾನೂನು ತಂದು ಅಂತಹವರಿಗೂ ಕೊಡುತ್ತೀರಾ? ಅದರ ಬಗ್ಗೆ ಏನಾದರೂ ರೂಲ್ಸ್ ಫ್ರೇಮ್ ಮಾಡುತ್ತಿರೋ ಹೇಗೆ ಎಂದು ನಮಗೆ ಹೇಳಬೇಕಲ್ಲ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಮಾನ್ಯ ಸಚಿವರು ಕಾಲ ಮಿತಿ ಹಾಕುತ್ತೇವೆಂದು ಹೇಳಿದರು ಏನು ಕಾಲಮಿತಿ?

ಛೇರ್ಮನ್ : ಮಾನ್ಯ ಸದಸ್ಯರಾದ ಮೊಯ್ಲಿಯವರ ಭಾಷಣ ಮುಗಿಯಲಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ : ಮಾನ್ಯ ಅಧ್ಯಕ್ಷರೇ ಇಲ್ಲಿ ತಮ್ಮ ಮೋಟೀವ್ ಒರಿಜನಲ್ ಇನ್‌ಟೆಂಷನ್ ಬಗ್ಗೆ ತಾವು ಹೇಳಿದ್ದೀರಿ ಅದರ ಬಗ್ಗೆ ನಮಗೆ ಸಂಶಯ ಇಲ್ಲ. ಆದರೆ ನಾವು ಎಲ್ಲಿಗೆ ಹೋಗುತ್ತೇವೆ ಅದು ಪ್ರಶ್ನೆ. ಆದ್ದರಿಂದ ತಾವು ಇದನ್ನು ಸ್ವಲ್ಪ ಸೂಕ್ಷ್ಮವಾಗಿ ಯೋಚನೆ ಮಾಡಿ ಹಿಂದಕ್ಕೆ ತೆಗೆದುಕೊಂಡು ಸ್ವಲ್ಪ ವಿಚಾರ ಮಾಡಿ. ಬೇಕಾದರೆ ಎಲ್ಲಾ ವಿರೋಧಪಕ್ಷದ ಫ್ಲೋರ್ ಲೀಡರ್ಸ್‌ನ್ನು ಕರೆಯಿರಿ. ಮಾತನಾಡಿ. ಏಕೆಂದರೆ ಇದರ ಪರಿಣಾಮ ಹದ್ದು ಮೀರಿ ಹೋಗುತ್ತದೆ. ಏಕೆಂದರೆ ನಾವು ಹಿಂದೆ ಮಾಡಿದಾಗಲೂ ಕೂಡ ಇದನ್ನು ಮಾಡಬೇಕೋ ಬೇಡವೋ ಎಂದು ಚರ್ಚೆ ಮಾಡಿ ಮಾಡಿ ಅದು ಏನೋ ಪಂಡೋರಸ್ ಬಾಕ್ಸ್ ಓಪನ್ ಮಾಡಬಾರದು. ಈಗಾಗಲೇ ನಿಮ್ಮ ಸರ್ಕಾರ ಇರುವಾಗಲೇ ಕೆಲವು ನಿರ್ಣಯಗಳನ್ನು ಮಾಡಿತ್ತು. ಜೆನಿಯನ್ ಕೇಸಸ್. ಮತ್ತೆ ನೋಡಿ ಆ

ಸೊಸೈಟಿ ಈ ಸೊಸೈಟಿ ಅಂತ ಹೇಳುತ್ತೀರಿ. ಆ ಸೊಸೈಟಿಗಳ ಬಗ್ಗೆ ಕೂಡ ಜಿ.ವಿ. ಕೆ. ರಾವ್ ಕಮಿಟಿ ಎಲ್ಲಾ ಪರಿಶೀಲನೆ ಮಾಡಿ ಇದು ಜಿನಿಯನ್ ಸೊಸೈಟಿ ಎಂದು ಹೇಳಿ ಮಾನ್ಯ ವೀರೇಂದ್ರ ಪಾಟೀಲ್ ಅವರ ಕಾಲದಲ್ಲಿ ಕ್ಯಾಬಿನೇಟ್ ಸಬ್ ಕಮಿಟಿಯವರು ಅದನ್ನೆಲ್ಲಾ ಸ್ಕ್ರೀನ್ ಮಾಡಿ ಮೆಂಬರ್ಸ್ ಲಿಸ್ಟ್ ಸ್ಕ್ರೀನ್ ಮಾಡಿ ಸಿ ಓ ಡಿ ಯವರು ಸ್ಕ್ರೀನ್ ಮಾಡಿ ಆದ ಮೇಲೆ ಅಂತಹ ಸ್ಕ್ರೀನ್ ಮಾಡಿದ ಸೊಸೈಟಿಗಳಿಗೆ ಮಾತ್ರ ಆಗ ಕೊಟ್ಟಿದ್ದು. ಈಗ ಇದರಲ್ಲಿ ಏನಾಗುತ್ತದೆ ಎಲ್ಲಾ ಇಲ್ಲೀಗಲ್ ಸೊಸೈಟಿಗಳು ಬಂದು ಬಿಡುತ್ತದೆ. ತಡೆಯಲಿಕ್ಕೆ ಆಗುವುದಿಲ್ಲ ನಿಮಗೆ. ತಾವು ಸ್ಟೇಟ್‌ಮೆಂಟ್ ಕೊಡುವುದು ಬೇರೆ. ಕಾನೂನು ಬೇಕು ಅದಕ್ಕೆ. ಕಾನೂನು ಕೈ ಸಡಿಲ ಆದ ಕೂಡಲೇ ಏನಾಗುತ್ತದೆ ತೊಂದರೆಯಾಗುತ್ತದೆ. ಆದ್ದರಿಂದ ಕಾನೂನು ಗಟ್ಟಿಯಾಗಿರಬೇಕು. ಕಾನೂನು ಎನ್‌ಫೋರ್ಸ್ ಮಾಡುವ ಹಾಗೆ ಇರಬೇಕು. ನಿಮ್ಮ ಉದ್ದೇಶವನ್ನು ಅನುಷ್ಠಾನ ಮಾಡುವ ಹಾಗೆ ಕಾನೂನು ಇರಬೇಕಲ್ಲ. ನಿಮ್ಮ ಉದ್ದೇಶವನ್ನು ಅನುಷ್ಠಾನ ಮಾಡುವುದಕ್ಕೆ ಈ ಕಾನೂನಿನಲ್ಲಿ ಬರುವುದಕ್ಕೆ ಸಾಧ್ಯವೇ ಇಲ್ಲ. ಈಗಲೂ ಕೂಡ ನಾವು ಕೋರ್ಟಿಗೆಲ್ಲಾ ಹೋಗುವವರು. ನಾನು ಕಾನೂನು ಮಂತ್ರಿಯಾಗಿ ಸಹ ಕೆಲಸ ಮಾಡಿದವನು. ನಾನು ತಮಗೆ ಸತ್ಯ ಹೇಳಬೇಕೆಂದರೆ ಅನಾವಶ್ಯಕವಾಗಿ ನಾನು ಎದ್ದು ನಿಂತು ಮಾತನಾಡುವ ಉದ್ದೇಶ ಇರಲಿಲ್ಲ. ಏಕೆಂದರೆ ಇವತ್ತು ನಿಮ್ಮ ಸರ್ಕಾರ ಇರಬಹುದು ನಾಳೆ ಮತ್ತೊಂದು ಸರ್ಕಾರ ಬರಬಹುದು ಅಥವಾ ಪುನಃ ನೀವೆ ಬರಬಹುದು. ನಮ್ಮ ಹತೋಟಿ ಅರಾಜತೆಯಾಗಬಾರದಲ್ಲಾ. ಏಕೆಂದರೆ ಮುಂದಕ್ಕೆ ಬರತಕ್ಕಂಥ ದಿವಸಗಳಲ್ಲಿ ಇಂತಹ ಸಂಸ್ಥೆಗಳು ಟೌನ್ ಪ್ಲಾನಿಂಗ್ ಕಾನ್ಸೆಫ್ಟ್ ಅನ್ನೇ ಡೆವಲಪ್ ಮಾಡಬೇಕೇ ಹೊರತು ಬರೀ ಸೈಟ್ ಕೊಡತಕ್ಕಂಥಾದ್ದು ಆಗಬಾರದು. ಹೋಯಿತು ಈಗ ಲಿಬರಲೈಜೇಶನ್ ಹೆಸರಿನಲ್ಲಿ ಯಾರ್‍ಯಾರಿಗೆ ಸೈಟ್ ಬೇಕೋ ಅವರು ಸೊಸೈಟಿ ಮಾಡುತ್ತಾರೆ ನ್ಯಾಯವಾಗಿ ಮಾಡುವುದಿದ್ದರೆ ಅವರೆಲ್ಲಾ ಮಾಡಿಕೊಳ್ಳಲಿ. ಇನ್ನು ಮೇಲೆ 25 ಸಾವಿರ ಸೈಟ್ ಕೊಡುತ್ತೇವೆ. 40 ಸಾವಿರ ಸೈಟ್ ಕೊಡುತ್ತೇವೆ ಬಿ ಡಿ ಎ ಮುಖಾಂತರ ಎಂದು ಮಾಡುವುದಕ್ಕೆ ಹೋಗಬೇಡಿ. ಬಿ ಡಿ ಎ ಅಂದರೆ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ.

ಶ್ರೀ ವಾಟಾಳ್ ನಾಗರಾಜ್ : ಹಾಗಾದರೆ ಬಿ ಡಿ ಎ ಏಕೆ ಇರಬೇಕು. ಮಹಾನಗರಪಾಲಿಕೆ ಇರುವಾಗ ಅದರ ಅಭಿವೃದ್ಧಿ ಬೇಡ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಂದರೆ ನೀವು ನಿವೇಶನಗಳನ್ನು ಕೊಡುವುದಕ್ಕೆ ಇರಬೇಕೆ ಹೊರತು ಇಲ್ಲದಿದ್ದರೆ ಅದು ಬೇಕಾಗಿಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ : ಕೊಡುವುದಿದ್ದರೆ ನೀವು ಜಾಗವನ್ನು ಅಕ್ವೈರ್ ಮಾಡಿ ಬಡವರಿಗೆ ಹಂಚುವುದು ಇದ್ದರೆ ಮಾಡಿ. ನಾನು ಹೇಳುವುದೇನೆಂದರೆ ಇದನ್ನು ಸ್ವಲ್ಪ ಉನ್ನತೀಕರಣ ಮಾಡಬೇಕು. ಈಗ ಬಿ ಡಿ ಎ ನಲ್ಲಿ ಸೈಟ್‌ಗೆ ಅರ್ಜಿ ಕೊಡುವುದು ಸೈಟ್ ಕೊಡುವುದು ಇದೆಲ್ಲಾ ನೀವು ಹೇಳಿದ ಹಾಗೆ ಯಾರು ಹಣವಂತರು ಇದ್ದಾರೆ ಬೇರೆ ಬೇರೆ ರಾಜ್ಯಗಳಲ್ಲಿ ಅವರೇ ಬಂದು ತೆಗೆದುಕೊಳ್ಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಅದನ್ನು ತಡೆಯಬೇಕು.

ಶ್ರೀ ಎಂ. ವೀರಪ್ಪಮೊಯ್ಲಿ : ಅದನ್ನು ತಡೆಯುವುದು ಅಲ್ಲ. ಈಗ ತಾವು ಒಂದು ಅಸ್ಸೆಸ್‌ಮೆಂಟ್ ಮಾಡಿ. ಬಡಾವಣೆಗಳಲ್ಲಿ ಎಷ್ಟು ಜನ ಕನ್ನಡಿಗರು ಇದ್ದಾರೆ. ಅದಕ್ಕೆ ನಾನು ಏನು ಹೇಳಿದೆ ಅಂದರೆ ಬೆಂಗಳೂರು ಡೆವಲಪ್‌ಮೆಂಟ್ ವಿಷನ್ ಕಾನ್ಸೆಫ್ಟ್ ಬದಲಾಗಬೇಕು. ಅದು ಡೆವಲಪ್‌ಮೆಂಟ್

ಅಥಾರಿಟಿ ಎಂದು ಹೇಳಿದರೆ ಯಾವ ರೀತಿ ಒಂದು ಪ್ಲಾನ್ಡ್ ಸಿಟಿ ಆಗಬೇಕು. ಏಕೆಂದರೆ ಬಹಳ ಬೆಳೆದಿದೆ. ಈ ರಾಮನಗರ ಚನ್ನಪಟ್ಟಣ ಎ ಡಿ ಬಿ ಯವರು ಏನು ಸೆಟಲೈಟ್ ಟೌನ್ ಮಾಡುತ್ತಿದ್ದಾರೆ ಆ ತರಹ ಇರಬೇಕು. ಆ ಹಂತಕ್ಕೆ ನಾವು ಹೋಗಿದ್ದೇವೆ ನಾವೀಗ. ಇಲ್ಲಿ ನೀವು ಏನು ಜಾಗ ಅಕ್ವೈರ್ ಮಾಡಿದಿರಿ 10 ವರ್ಷದಲ್ಲಿ ಸೈಟ್ ಕೊಡಲಿಕ್ಕೆ ಆಗಲಿಲ್ಲ ಎಂದು ಹೇಳಿದರು. ನಾವು ಕೊಟ್ಟಿದ್ದೇವೆ. ನಾನು ಮುದ್ದಪ್ಪನವರಿಗೆ ಫೋನ್ ಮಾಡಿ ಕೇಳಿದೆ. ಏನು ನೀವು ಸೈಟ್ ಕೊಡಲಿಲ್ಲವೇ ಎಂದು. ನೀವು ಮಾಡಿದ್ದರೆ ಬಹಳ ಸಂತೋಷ. ಅದರ ಬಗ್ಗೆ ಆರ್ಗ್ಯುಮೆಂಟ್ ಬೇಡ. ನಾನು ಮಧ್ಯಾಹ್ನ ಮುದ್ದಪ್ಪನವರಿಗೆ ಕೇಳಿದೆ ಏನು ನೀವು ಸೈಟ್ ಕೊಟ್ಟಿದ್ದೇವೆಂದು ನಮಗೆ ಹೇಳಿದಿರಿ, ನೀವು ಸೈಟ್ ಕೊಡಲಿಲ್ಲ ಎಂದು ಶಿವರಾಮೇಗೌಡರು ಭಾಷಣ ಮಾಡಿದರಲ್ಲಾ ಎಂದು. ಎಕ್ಸ್‌ಚೇಂಜ್‌ನಲ್ಲಿ ಆಗ 700 ಸೈಟ್ ಆಗ ಕೊಟ್ಟಿದ್ದಾರೆ. ಆಮೇಲೆ 3 ಸಾವಿರ ವರೆಗೂ ಸೈಟ್ ಕೊಟ್ಟಿದ್ದಾರೆ.

ಇದರಲ್ಲಿ ನನ್ನ ಸಮಸ್ಯೆ ಅಂದರೆ ಹಿಂದೆ ಅರ್ಬನ್ ಲ್ಯಾಂಡ್ ಸೀಲಿಂಗ್‌ದು ಒಂದು ಲಿಮಿಟೇಷನ್ ಇತ್ತು. ಈಗ ಒಬ್ಬೊಬ್ಬರಿಗೆ ಒಂದೊಂದು ಸೈಟ್ ಎಂದು ಹೇಳಿ. ಈ ಕಾನೂನಿನಲ್ಲಿ ಒಬ್ಬರಿಗೆ ಎಷ್ಟು ಸೈಟ್ ಸಿಗಬಹುದು. ಈಗ ಇವರು ಮಾಡಿದಂತಹ ತಿದ್ದುಪಡಿಯಲ್ಲಿ ಒಂದು ಸೈಟ್. ಈಗ ಮಾನ್ಯ ನಂಜೇಗೌಡರು ಯಾರ ಪರವಾಗಿ ಹೇಳಿದರು ಅಂದರೆ ಒಂದೊಂದು ಸೈಟ್‌ನಲ್ಲಿ ಅವರು ಮನೆ ಕಟ್ಟಿಕೊಂಡಿದ್ದರು. ಅವರಿಗೆ ಏಕೆ ಕೊಡಬಾರದು ಎಂದು. ಆ ಪ್ರಶ್ನೆಯನ್ನು ಅವರು ಎತ್ತಿದ್ದು. ನಾನು ತಿಳಿದಕೊಂಡ ಹಾಗೆ. ಆದರೆ ಅದು ಹಾಗಿಲ್ಲ. ಇದರಲ್ಲಿ ಎಲ್ಲಾ ಬರಬಹುದು. ಒಂದು ಸೈಟ್ ಒಬ್ಬ ಮಾಡಿದರೆ whether the right is vested as a owner?

ಅಥವಾ ಅವನಿಗೆ ಏನಾದರೂ ಹಕ್ಕು ಬಂದಿದ್ದರೆ. ಆಗ ಒಂದು ಸೈಟ್ ಇದ್ದರೆ ಆ ವಿಚಾರ ಮಾಡಿ. We are not coming in the way.

ಅದು ಆಗುತ್ತಿಲ್ಲ. ಇದರ ಪ್ರಕಾರ ಒಬ್ಬರಿಗೆ ನೂರು ಸೈಟ್ ಮಾಡಬಹುದು. ಆಕ್ಯುಪೆಂಟ್ ಎನ್ನುವ ಉಪಯೋಗ ನೋಡಿ. ನಾವು 38(ಸಿ) ಯಲ್ಲಿ ಉಪಯೋಗ ಮಾಡಿದಂತಹ ಶಬ್ದಗಳಿಗೂ

".. belong to them or vested in or
acquired by them.."

ಆಕ್ಯುಪೆನ್ಸಿ ಎನ್ನುವ ಶಬ್ದವನ್ನು ನಾವು ಉಪಯೋಗ ಮಾಡಲೇ ಇಲ್ಲ. ಇದರಲ್ಲಿ ಹಾಗಿಲ್ಲ. ಒರಿಜನಲ್ ಓನರ್ ಎನ್ನುವುದಕ್ಕೆ ಡಿಫೈನ್ ಮಾಡುವುದಕ್ಕೆ ಡೆಪನಿಷನ್ಸ್ ನೋಡಿ.

"original owner of the land" means a person who was occupant of the land immediately before publication of the development scheme which contained proposal for acquisition of such land"

ಅಂದರೆ ಏನು ಅರ್ಥ ಅಂದರೆ ಆಕ್ಯುಪೆಂಟ್. ಅವನಿಗೆ ಹಕ್ಕು ಇರಬಹುದು, ಇಲ್ಲದೇ ಇರಬಹುದು. ಏನಿದ್ದರೂ ಕೂಡ ಆಕ್ಯುಪೆಂಟ್ಸ್ ಅಂದರೆ ಇವತ್ತು ರಾತ್ರಿ ಹೋಗಿ ಗೂಟ ಹಾಕಿ ಸ್ಟ್ರಕ್ಚರ್ಸ್ ಹಾಕಿ ಕುಳಿತು ಕೊಳ್ಳುವುದು. ಆಕ್ಯುಪೆಂಟ್ಸ್ ಎನ್ನುವ ಪದವನ್ನು ದಯಮಾಡಿ ತೆಗೆದುಹಾಕಿ ಅದು ಬಹಳ ಡೇಂಜರ್. ಈ ವರ್ಡ್‌ನ್ನು ಏಕೆ ಚೇಂಜ್ ಮಾಡುತ್ತೀರಿ?

".. in favour of any person any site formed in
the land which belong to them or vested in

or acquired by them.."

ಒಬ್ಬ 5(1) ನೋಟಿಫಿಕೇಶನ್ ಆದ ಮೇಲೆ ಮೊದಲೇ ಮಾರಿರಬಹುದು. ಅಗ್ರಿಮೆಂಟ್ ಮಾಡಿರಬಹುದು. ಪರಿಹಾರ ತೆಗೆದುಕೊಂಡಿರಬಹುದು. ಇದೆಲ್ಲಾ ಪ್ರಶ್ನೆಗಳು ಉದ್ಭವವಾಗುತ್ತವೆ. ಇದು ಎಲ್ಲಿಯವರೆಗೆ ಅಂದರೆ ಇವತ್ತು ರಾತ್ರಿ ಕೆಲವರು if you are in a position to immediately hire a gang..

ಶ್ರೀ ಎಲ್. ಆರ್. ಶಿವರಾಮೇಗೌಡ : ಕಾನೂನು ಮಾಡುವಾಗ ತಾವು ತಿದ್ದುಪಡಿಯನ್ನು ಕೊಟ್ಟರೆ ನಾವು ರೂಲ್ಸ್‌ನಲ್ಲಿ ಮಾಡಿಕೊಳ್ಳುತ್ತೇವೆ. ರೂಲ್ಸ್ ಮಾಡುವಾಗ ನಾವು ಈಗಾಗಲೇ ಗುರುತು ಮಾಡಿರತಕ್ಕಂಥ ಜಾಗ ಎಂದು ಸ್ಪಷ್ಟವಾಗಿ ಹೇಳುತ್ತೇವೆ.

ಶ್ರೀ ಎಂ. ವೀರಪ್ಪಮೊಯಿಲಿ : ಅದು ಕಾನೂನಿನಲ್ಲಿ ಬರೆದಿರಬೇಕಲ್ಲಾ. ಒಂದು ಶಬ್ಧ ನೀವು ರಿಸ್ಟ್ರಿಕ್ಟ್ ಮಾಡತಕ್ಕಂಥಾದ್ದು ಇರಬೇಕಲ್ಲಾ. ಕಾನೂನುಗಳು ಎಕ್ಸ್‌ಪ್ಷನಲ್ ಆಗಿ ಇರಬೇಕು. ಈ ಕಾನೂನುಗಳು ಎಕ್ಸ್‌ಪ್ಷನಲ್ ಆಗಿಲ್ಲದೇ ಇದ್ದರೆ ಒಂದು ಸಬ್‌ಸ್ಟ್ಯಾನ್‌ಟೀವ್ ರೈಟ್‌ನ್ನು ಕೊಡತಕ್ಕಂಥ ಕಾನೂನು ಆಗಬಾರದು. ಇಂತಹ ತಿದ್ದುಪಡಿಗಳು, ಇಂತಹ ಕಾನೂನುಗಳು ಒಂದು ಹಕ್ಕನ್ನು ಕೊಡತಕ್ಕಂಥ ಕಾನೂನುಗಳು ಆಗಿರಬಾರದು. Do you agree?

ಸಾರಾಸಗಟಾಗಿ ಅರಾಜಕತೆಗೆ ನೀವು ನಾಂದಿಯನ್ನು ಹಾಡುತ್ತಾ ಇದ್ದೀರಿ. ಇದನ್ನು ದಯಮಾಡಿ ಆಲೋಚನೆ ಮಾಡಿ, ವಿಚಾರ ಮಾಡಿ. ಇದನ್ನು ಕ್ಯಾಬಿನೆಟ್‌ನಲ್ಲಿ ಪುನಃ ತಂದು ಇಲ್ಲಿಗೆ ಬನ್ನಿ. ಒಂದು ಸೈಟ್ ಎಂಬುದನ್ನು ಎಕ್ಸೆಪ್‌ಷನ್ ಮಾಡಿ. ಎಕ್ಸೆಪ್‌ಷನ್ನಲ್ಲಿ ಅಪವಾದ ಯಾವುದು ಅಂದರೆ ಒಂದು ಸೈಟ್ ಎಂಬುದನ್ನು ಹೊರತಾಗಿ ಬೇರೆ ಯಾವುದಕ್ಕೂ ಕೊಡುವುದಿಲ್ಲ ಎಂದು ಇದರಲ್ಲಿಯೇ ಹಾಕಿ. ರೂಲ್‌ನಲ್ಲಿ ಹೇಗೆ ಹಾಕಲು ಬರುತ್ತದೆ? ಕಾನೂನಿನಲ್ಲಿ ಏನು ಹಾಕುತ್ತೀರೋ ಅವುಗಳನ್ನು ರೂಲ್‌ನಲ್ಲಿ ಹಾಕಲು ಬರುವುದಿಲ್ಲ. ಕಾನೂನಿನಲ್ಲಿ ನೀವು ರಿಸ್ಟ್ರಿಕ್ಟ್ ಮಾಡಿ ಒಂದು ಸೈಟ್, ಸ್ಟ್ರಕ್ಚರ್ ಇದೆ, ಬಿಲ್ಡಿಂಗ್ ಇದೆ, ಸರ್ವೇ ಪ್ರಕಾರ ಅಲ್ಲಿ ಇದ್ದರೆ ಅದಕ್ಕೆ ಕಟ್ ಆಫ್ ಡೇಟ್ ಹಾಕಿ. Date of publication,

ಈ ಕಾನೂನು ಬೇಡಿ. ಯಾವುದಾದರೂ ಒಂದು ಕಟ್ ಆಫ್ ಡೇಟ್ ಹಾಕಿ. ಆ ಮೇಲೆ ಈ ನೋಟಿಫಿಕೇಷನ್ ಆಗುವವರೆಗೆ ಎಲ್ಲಾ ಖಾಲಿಯಾಗಿ ಬಿಡುತ್ತದೆ. ಸೈಟ್ ಕೊಟ್ಟವರು ಅಲ್ಲಿ ಕಿತ್ತುಕೊಂಡಿರುತ್ತಾರೆ. ಎಲ್ಲಿ ಖಾಲಿ ಇದೆ ಅಲ್ಲೆಲ್ಲಾ ಅಕ್ಯುಪೈ ಮಾಡಿ ಬಿಡುತ್ತಾರೆ. occupied after all.

ಯಾವ ಹಕ್ಕೂ ಇರಬೇಕಾಗಿಲ್ಲ. ಯಾವ ದಾಖಲೆಯೂ ಇರಬೇಕಾಗಿಲ್ಲ. ಕಾರ್ಪೋರೇಷನ್ ಲೈಸನ್ಸ್ ಬೇಕಾಗಿಲ್ಲ. ಓಟರ್ಸ್‌ಲಿಸ್ಟ್ ಬೇಕಾಗಿಲ್ಲ, ಹೀಗೆ ಯಾವುದೂ ಬೇಕಾಗಿರುವುದಿಲ್ಲ. The word 'occupation' it can be used freely. ಪಬ್ಲಿಕೇಷನ್ ಆಗುವುದು ಇನ್ನೂ ಎರಡು ತಿಂಗಳುಗಳ ಮೇಲೆ, ಅಲ್ಲಿಯ ತನಕ ಸಾಕಷ್ಟು ಸಮಯವಿದೆ. ಯಾರ್‍ಯಾರು ಯಾರ್‍ಯಾರನ್ನು ಎಂಗೇಜ್ ಮಾಡಿಕೊಂಡು ಏನೇನು ಮಾಡಬೇಕೋ ಅದನ್ನು ಮಾಡಬಹುದು. ಹೀಗೆ ಆದರೆ ಎಲ್ಲಾ ನಿಸ್ಸಂತಾನವಾಗಿ ಹೋಗುತ್ತದೆ. ಡೆವಲಪ್‌ಮೆಂಟ್, ಪ್ಲಾನ್, ಎಲ್ಲಾ ನಿಸ್ಸಂತಾನವಾಗಿ ಹೋಗಿ ಏನೂ ಉಳಿಯುವುದಿಲ್ಲ ಬೆಂಗಳೂರಿನಲ್ಲಿ. ದಯಮಾಡಿ ಇದನ್ನು ಪರಿಶೀಲಿಸಿ. ಇದೊಂದು ಔಟ್ ರೇಜಿಯಸ್ ಕಾನೂನು ಎಂದು ಬಹಳ ನೊಂದು ಹೇಳಬೇಕಾಗಿದೆ. ಇಂಥ ಒಂದು ಹಾರ್ಷ್ ಶಬ್ದವನ್ನು ಉಪಯೋಗಿಸ ಬೇಕಾದರೆ It is most

outrageous, violative ಬಹುಶಃ this law is just enough to rape Bangalore ರೇಪ್ ಆದಾಗ ಇನ್‌ಶೂರೆನ್ಸ್ ಕವರ್ ಕೊಡಬೇಕೆಂದು ನೀವೇನು ಹೇಳುತ್ತಾ ಇದ್ದೀರಲ್ಲಾ ಇದನ್ನು ಕೈಬಿಟ್ಟು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ. This will definitely violate the modesty of Bangalore city. ದಯಮಾಡಿ ಇದನ್ನು ಕ್ಯಾಬಿನೆಟ್‌ನಲ್ಲಿ ತರಿಸಿ ತಾವುಗಳು ವಿಚಾರ ಮಾಡಿ. ತಾವುಗಳು ತುಂಬಾ ವಿಚಾರವಂತರಿದ್ದೀರಿ. I know that many of you are thinking people. ಬಹಳ ಅಲೋಚನೆ ಮಾಡಬಹುದು. You must have vision. ಇಂಥ ಕಾನೂನು ಮಾಡುವಾಗ ಸ್ವಲ್ಪ ಮಟ್ಟಿಗಾದರೂ ದೂರದರ್ಶಿತ್ವ ಇರಬೇಕಾಗುತ್ತದೆ. ಇದರಿಂದ ಮುಂದೆ ಬರತಕ್ಕಂಥ ದಿನಗಳಲ್ಲಿ ಬೆಂಗಳೂರು ನಗರ ಏನಾಗಬಹುದು ಎಂಬುದನ್ನು ಆಲೋಚಿಸಬೇಕು. ಆ ತರಹ ಬೆಂಗಳೂರು ಬ್ಲೀಡಿಂಗ್ ಮಾತ್ರ ಅಲ್ಲ ಸಂಪೂರ್ಣ ಬ್ಲೀಡಿಂಗ್ ಆಗಿ ಅದರಲ್ಲಿ ಏನೂ ರಕ್ತವೇ ಉಳಿಯುವುದಿಲ್ಲ. Clacutta was a city of Joy, but now bleeding. ಇದು ತುಂಬಾ ಗಂಭೀರವಾದ ವಿಚಾರ ಎಂದು ತುಂಬ ಹೊತ್ತು ಮಾತನಾಡಬೇಕಾಯಿತು. ಇದು ಸಣ್ಣ ಮತ್ತು ಸರಳವಾದಂಥ ಕಾನೂನು. ಆದರೆ ಇದರ ಅರ್ಥ ಬಹಳ ಸ್ಪಷ್ಟವಾಗಿದೆ. ಮಾನ್ಯ ಶಿವರಾಮೇಗೌಡರ ಉದ್ದೇಶವನ್ನು ನಾನು ಒಪ್ಪುತ್ತೇನೆ. ಆದರೆ ಉದ್ದೇಶ ಒಂದು ಕಾನೂನು ಬೇರೆ ರೀತಿಯಲ್ಲಿ ಇದೆ. ನಿಮ್ಮ ಉದ್ದೇಶ ಒಳ್ಳೆಯದಿದ್ದು ಒಳ್ಳೆಯ ಭಾವನೆಯಿಂದ ಮಾಡಿರಬಹುದು. ಆದರೆ ಒಳ್ಳೆಯ ಭಾವನೆಗಳು ಕಿಂಚಿತ್ ಕೂಡ ಸಾಧನೆಯಾಗುವುದಿಲ್ಲ. It will be outraging, molesting this Bangalore City. Don't do that. ಅದರಲ್ಲಿ ಏನೂ ಉಳಿಯುವುದೇ ಇಲ್ಲ. ಬಡವರಿಗೆ ಏನಾದರೂ ಜಮೀನಿನ ಕೇಸ್‌ಗಳು ಇದ್ದರೆ ಅದಕ್ಕೆ ಏನು ಸೇಫ್ ಗಾರ್ಡ್ ಮಾಡಬೇಕು, ಹೇಗೆ ಲಿಮಿಟ್ ಮಾಡಬೇಕು, ಎಂಬಿತ್ಯಾದಿಗಳ ಬಗ್ಗೆ ತಾವುಗಳು ಯೋಚನೆ ಮಾಡಿ. ಪ್ರೊವ್ಯಾಸೋ ಹಾಕಬಹುದು...

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಒಂದು ಕುಟುಂಬದಲ್ಲಿ 10-20 ಜನರು ಮೆಂಬರ್ಸ್ ಇದ್ದರೆ, ಕುಟುಂಬಕ್ಕೆ ಒಂದೇ ಸೈಟ್ ಎಂದು ಹೇಳಿದರೆ ಉಳಿದವರು ಏನು ಮಾಡಬೇಕು?

ಶ್ರೀ ಎಂ. ವೀರಪ್ಪ ಮೊಯಿಲಿ : ಆಗ ಮೇಜರ್ ಮೆಂಬರ್ಸ್ ಇದ್ದರೆ ಎಷ್ಟು ಕೊಡಬಹುದು ಎಂದು ನೋಡಿ ಕೊಡಬಹುದಲ್ಲವೇ? ಈ ಕಾನೂನು ಬಾಹಿರವಾದ ಸೊಸೈಟಿಗಳ ಬಗ್ಗೆ ಜಿವಿಕೆರಾವ್ ವರದಿಯಲ್ಲಿ ಕಂಡೆಮ್ ಮಾಡಿದ್ದಾರೆ. ಸ್ಟ್ರಕ್ಚರ್ಸ್ ಪಾಸ್ ಮಾಡಿದ್ದಾರೆ. ಅದರ ಪ್ರಕಾರ ಯಾರ್‍ಯಾರು ಅಂಥ ಅವ್ಯವಹಾರ ಮಾಡಿದ್ದಾರೋ ಅವೆಲ್ಲವೂ ಇವೊತ್ತು ರೆಗ್ಯುಲರೈಸ್ ಆಗುತ್ತದೆ. ಇದನ್ನು ತಡೆಯಲಿಕ್ಕೆ ಸಾಧ್ಯವಾಗದೇ ತಡೆಯಲ್ಲಿಕ್ಕಾಗಿಯೇ ನೀವು ಇನ್ನೊಂದು ಕಾನೂನನ್ನು ತರಬೇಕಾಗುತ್ತದೆ. ಮಾನ್ಯ ಪ್ರಕಾಶರವರೇ ಇದನ್ನು ತಡೆಯಲು, ಅನಾಹುತಗಳನ್ನು ತಡೆಯಲು ಇನ್ನೊಂದು ಕಾನೂನನ್ನು ಮಾಡಬೇಕಾಗಿ ಬರಬಹುದು. Write down today, you will have to bring another law. ಯಾಕೆ ಆ ತರಹ ಮಾಡುತ್ತೀರಿ? ಒಂದು ಕಾನೂನಿನಿಂದ ಉಂಟಾದಂಥ ಹಾವಳಿಯನ್ನು ತಡೆಯಲು ಇನ್ನೊಂದು ಕಾನೂನು ಮಾಡುವ ಪ್ರಮೇಯ ಬಂದರೆ ಏನಾಗುತ್ತದೆ? They will laugh at us. ಇಷ್ಟೊಂದು ದೊಡ್ಡ ಪರಂಪರೆಯಿದ್ದಂಥ ಶಾಸನ ಸಭೆಯಲ್ಲಿ ಇಂಥ ಕಾನೂನನ್ನು ಮಾಡುತ್ತಾರೆ ಅಂದರೆ ಅರ್ಥವಿಲ್ಲದ ಮಾತಾಗುತ್ತದೆ. ಆದುದರಿಂದ The word 'occupancy' is fraught with danger. You have put 'original owner' 'or other person' who is that other person?

ಅದರ ಬದಲು or dash dash any person. ಎಂದು ಹಾಕಿದರೆ it is blanket ಯಾರು ಇವೊತ್ತು ನಿಮ್ಮ ನೋಟಿಫಿಕೇಷನ್ ಆದ ಕೂಡಲೆ ಜಾಗದಲ್ಲಿ ಕಾಣುತ್ತಾನೆ. ಅವನೇ none other than that person. ದಯಮಾಡಿ ಪರಿಶೀಲಿಸಿ. ಇದರಲ್ಲಿ ಬಹಳ ತೊಡಕು ಆಗಿದೆ. I dont say ಇತರ ವ್ಯಕ್ತಿ ಯಾರು? ಅದು ಪ್ರಶ್ನಾರ್ಥಕ ಚಿಹ್ನೆಯಾಗುತ್ತದೆ. ಕಾನೂನಿನ ಪ್ರಕಾರ ನಾವು ಇತ್ತೀಚಿನ ದಿನಗಳಲ್ಲಿ ಮುಂದೆ ಮುಂದಕ್ಕೆ ಬರುತ್ತಾ ಇರುವಾಗ ನಾವು ನಮ್ಮ ಎಲ್ಲಾ ಆಡಳಿತ ಪ್ರವೃತ್ತಿ ಮತ್ತು ಪ್ರಕ್ರಿಯೆಗಳಲ್ಲಿ ಆದಷ್ಟು ಪಾರದರ್ಶಕತೆಯನ್ನು ಇಟ್ಟುಕೊಳ್ಳಬೇಕಾಗುತ್ತದೆ. ಇಲ್ಲಿ ಪಾರದರ್ಶಕತೆಯು ಎಲ್ಲಿ ಉಳಿಯುತ್ತದೆ? ಇದರಲ್ಲಿ ಎಲ್ಲವೂ ನೋಟಕ್ಕೊಂದು ಒಳಗೊಂದು ಎಂಬ ಹಾಗೆ ಇದೆ. ನೂರಕ್ಕೆ ನೂರು ಪಾರದರ್ಶಕತೆ ಇದರಲ್ಲಿಲ್ಲ. Something will always be hidden that what is found in the surface of the law. We have very deceptive law, dishonest law. Don't bring them ಗೊತ್ತಿದ್ದೂ ಗೊತ್ತಿದ್ದೂ ನಾವು ಹೀಗೆ ಮಾಡಬಾರದು. ಅಕ್ಷರ ಅಕ್ಷರ ಸಹ ಇದು ಡಿಸ್ ಆನೆಸ್ಟ್ ಎಂದು ಹೇಳುತ್ತಿದೆ. ಅಕ್ಷರ ಅಕ್ಷರ ಹೇಳುತ್ತದೆ it is fraught with deception. ಅಂಥ ಒಂದು ಕಾನೂನನ್ನು ತಂದು ದಯಮಾಡಿ ಬೆಂಗಳೂರನ್ನು ಹಾಳು ಮಾಡಬೇಡಿ. ನಾವು ಈಗಾಗಲೇ ಬೆಂಗಳೂರನ್ನು ಹಾಳು ಮಾಡಿದ್ದೇವೆ. ಅದಕ್ಕೆ ನಾವೆಲ್ಲರೂ ಜವಾಬ್ದಾರರು. ಅದರ ಬಗ್ಗೆ ನಾವು ಪಶ್ಚಾತ್ತಾಪ ಮಾಡಬೇಕಾಗಿದೆ. ಆದರೆ ಇನ್ನೂ ಕೂಡ ಕಿಂಚಿತ್ ಕೂಡ ಯೋಚನೆ ಮಾಡದೆ ಸರಿಯಾದ ಹೆಜ್ಜೆ ಇಡದೇ ಇದ್ದರೆ, ಧೈರ್ಯವಾಗಿ ಮುನ್ನುಗ್ಗುವುದಿದ್ದರೆ ನಮ್ಮನ್ನು ಹೇಳುವವರು ಕೇಳುವವರು ಯಾರೂ ಇಲ್ಲವೇ? ಅಕೌಂಟೆಬಿಲಿಟಿ ಎನ್ನುವುದು ಕೇವಲ ಜನರಿಗೆ ಮಾತ್ರವಲ್ಲ. We must be accountable to the generation, all ages to come, all people to come.

ಇವೊತ್ತಿನ ಜನರಿಗೆ ಬರೇ ಓಟಿಗಾಗಿ ಮಾತ್ರ ಅಕೌಂಟೆಬಲ್ ನಾವು. ಈಗೀಗ ಅಕೌಂಟಿಬಿಲಿಟಿಯು ನಮ್ಮ ಸುತ್ತ ಮಾತ್ರ ಕಂಡಿಷನಲ್ ಆಗಿ ಇದೆ. ಆದರೆ ನಾವು accountable to the civilisation, accountable to the people to come in future, born or not born ಇದೆಲ್ಲಾ ಇದೆ. ಈ ದೃಷ್ಟಿಕೋನ, ಮತ್ತು ದೂರದೃಷ್ಟಿತ್ವವನ್ನು ದಯಮಾಡಿ ತಾವುಗಳು ಮರೆಯಬಾರದು. ಯಾಕೆಂದರೆ ಇದು so blatantly, with so much of dishonest, so much of insincerety, do much of deception. ಮತ್ತೆ ಇಲ್ಲಿ ನಾವು ಯಾವುದೇ ಒಂದು ನಿಶ್ಚಿತವಾದ ಕಾನೂನನ್ನು ಮಾಡಿದರೂ ಅದಕ್ಕೆ ಒಂದು ಸ್ಕೀಮ್ ಇರಬೇಕಾಗುತ್ತದೆ. ಯೋಜನೆ ಇರಬೇಕಾಗುತ್ತದೆ. ಈ ದಿಕ್ಕು; ಈ ಗುರಿಗೆ ನಮ್ಮನ್ನು ಕೊಂಡೊಯ್ಯ ಬೇಕಾಗುತ್ತದೆ. ಇವೊತ್ತು ತಾವು ಏನು ಪ್ರಸ್ತಾಪ ಮಾಡುತ್ತಿದ್ದೀರಿ ಆ ದಿಕ್ಕಿಗೆ ಇದನ್ನು ಕೊಂಡೊಯ್ಯಲು ಸಾಧ್ಯವಿದೆಯೇ? ಯಾಕೆ ಮಾಡುತ್ತೀರಿ ಇದನ್ನು?

ಶ್ರೀ ವಿ. ಸೋಮಣ್ಣ (ಬೆಂಗಳೂರು ನಗರ ಅಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ಕಾನೂನನ್ನು ತಂದ ಸಂದರ್ಭದಲ್ಲಿ ರಾಜಾಜಿನಗರ ಸೆಕೆಂಟ್ ಸ್ಟೇಜ್, 8206 ಸೈಟ್‌ಗಳಲ್ಲಿ 5250 ಸೈಟ್‌ಗಳನ್ನು ನೀವು ರೀ-ಕನ್ವೇ ಮಾಡಿದ್ದೀರಿ. ರಾಜಾಜಿನಗರ ಥರ್ಡ್ ಸ್ಟೇಜ್ 2178 ಸೈಟ್ ಇದ್ದುದರಲ್ಲಿ 15225 ಸೈಟ್ ಬಿಡಿಎ ಅಕ್ವೈರ್ ಆಗಿರತಕ್ಕಂಥಾದ್ದು. ಗೋಕುಲ ಫಸ್ಟ್ ಸ್ಟೇಜ್.....

ಶ್ರೀ ಎಂ. ವೀರಪ್ಪ ಮೊಯ್ಲಿ : ಮಾನ್ಯ ಅಧ್ಯಕ್ಷರೇ, ಇದಕ್ಕೆ ಮಾನ್ಯ ಸಚಿವರು ಕೊಡುವ ಉತ್ತರವಲ್ಲ...

(ಗೊಂದಲ)

ಛೇರ್ಮನ್ (ಶ್ರೀ ಬಿ.ಬಿ. ಶಿವಪ್ಪನವರು) ಅಧ್ಯಕ್ಷ ಪೀಠವನ್ನಲಂಕರಿಸಿದರು.

ಶ್ರೀ ವಿ. ಸೋಮಣ್ಣ : ಯಾರು ಇಂಡಿವಿಜ್ಯುವಲ್ ಆಗಿ 20-30, 30-40, 40-60 ಸೈಟ್‌ಗಳಲ್ಲಿ ಕಟ್ಟಿಕೊಂಡಿದ್ದಾರೋ ಅಂಥಾದ್ದು ಮಾತ್ರ. ದೊಡ್ಡ ದೊಡ್ಡದು ಎಲ್ಲಾ ಹೊರಟು ಹೋಗಿದೆ. ಯಾವುದೂ ದೊಡ್ಡದು ಉಳಿದಿಲ್ಲ ಇಲ್ಲಿ...

ಶ್ರೀ ಎಂ. ವೀರಪ್ಪಮೊಯ್ಲಿ : ಮಂತ್ರಿಗಳು ನಾವು ಹೇಳಿದ್ದನ್ನು ಅರ್ಥ ಮಾಡಿಕೊಳ್ಳಲು ಸಿದ್ಧರಿಲ್ಲ. ನಾವು ಮಾತನಾಡಿ ಏನು ಪ್ರಯೋಜನ? ನಾವು ಮೂಲಭೂತವಾದಂಥ ಪರಿಸ್ಥಿತಿಯನ್ನು ಹೇಳಿದ್ದೇನೆ. I am sorry whatever I have made I must withdraw now.

ಶ್ರೀ ಎಲ್. ಆರ್. ಶಿವರಾಮೇಗೌಡ : ನೀವು 38- ಸಿ ತಂದಿದ್ದೀರಲ್ಲಾ, ಅದನ್ನು ತಂದಾಗ ಎಂಥೆಂಥವರಿಗೆ ಸಹಾಯವಾಗಿದೆ, ಬಡವರ ಬಗ್ಗೆ ನಿಮ್ಮ ಕಾಳಜಿ ಎಷ್ಟು ಕೆಲಸ ಮಾಡಿದೆ ಎಂಬುದು ಗೊತ್ತಾಗಿತ್ತು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನನ್ನದು ಕ್ರಿಯಾಲೋಪ ಇದೆ. ನಾನು ಬಿಡಿಎ ಅಧ್ಯಕ್ಷರ ಬಗ್ಗೆ ಆಗಲೇ ಮಾತನಾಡಿದ್ದೇನೆ. ಈಗ ಉತ್ತರ ಕೊಡತಕ್ಕಂಥವರು ಇಬ್ಬರೋ, ಒಬ್ಬರೋ ಎಂದು ತೀರ್ಮಾನವಾಗಬೇಕು. ಈ ಕಡೆಯಿಂದ ಶಿವರಾಮೇಗೌಡರು ಆ ಕಡೆಯಿಂದ ಮಾನ್ಯ ಸಚಿವರು ಉತ್ತರಿಸುತ್ತಿದ್ದಾರೆ. ಇದು ಸರಿಯೇ?

ಇಲ್ಲಿ ಅವರು ಸದಸ್ಯರಾಗಿದ್ದಾರೆಯೇ ಹೊರತು ಪ್ರಾಧಿಕಾರದ ಅಧ್ಯಕ್ಷರಾಗಿ ಇಲ್ಲ. ಆದ್ದರಿಂದ ಸ್ವಲ್ಪ ಗಂಭೀರವಾಗಿ ಅವರು ಕುಳಿತುಕೊಂಡು ಆಗುತ್ತಿರುವುದನ್ನು ಕೇಳಲಿ. ನಾವು ಅವರ ಬಗ್ಗೆ ಗೌರವ ಇಟ್ಟುಕೊಂಡಿದ್ದೇವೆ. ಅವರು ಕೆಲಸ ಮಾಡುವ ಅಧ್ಯಕ್ಷರು ಎಂದೂ ನಾವು ಹೇಳಿದ್ದೇವೆ. ಅಷ್ಟಕ್ಕೆ ಅವರು ಗಂಭೀರವಾಗಿರಬೇಕೇ ಹೊರತು ಮುಂದಕ್ಕೆ ಹೋಗಬಾರದು. ಸಚಿವರಿಗೆ ಇದು ಅತ್ಯಂತ ಗಂಭೀರವಾದ ವಿಚಾರ. ಮೊಯ್ಲಿಯವರು ಏನು ಹೇಳಿದ್ದಾರೆ ಅದೇ ನಮ್ಮದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ***

ಶ್ರೀ ಎಲ್.ಆರ್. ಶಿವರಾಮೇಗೌಡ : ಅವಸ್ಥೆ ಏನು ಬಂತು. ಬೆಂಗಳೂರಿನ ಕಾರ್ಪೋರೇಟರಾಗಿ ಎಲ್ಲಾ ಅನುಭವವೂ ಇದೆ ಅವರಿಗೆ. ಅಧಿಕಾರಿಗಳಿಂದ ಅಂಕಿಅಂಶ ತೆಗೆದುಕೊಳ್ಳುತ್ತಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇವರು ಅಧ್ಯಕ್ಷರಾಗಿ ಮಾತನಾಡುವುದನ್ನು ನಿಲ್ಲಿಸಲಿಲ್ಲ ಅಂದರೆ ಸತ್ಸಂಪ್ರದಾಯಕ್ಕೆ ಕೆಟ್ಟ ಅಪಚಾರ ಆದಂತೆ ಆಗುತ್ತದೆ. ಇಲ್ಲಿ ಒಂದು ಕಡೆ ಪ್ರಾಧಿಕಾರದ ಅಧ್ಯಕ್ಷರು ಉತ್ತರ ಕೊಡುವುದು. ಮತ್ತೊಂದು ಕಡೆ ಸಚಿವರು ಉತ್ತರ ಕೊಡುವುದು.

* * * ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಛೇರ್ಮನ್ : ತಾವು ಕ್ರಿಯಾಲೋಪ ಎತ್ತಿದಿರಿ. ಯಾವುದರ ಬಗ್ಗೆ ಎಂಬುದು ಗೊತ್ತಾಗಲಿಲ್ಲ ಈಗ ತಾವು ಒಂದು ಮಾತು ಹೇಳಿದಿರಿ, * * *

ಶ್ರೀ ವಾಟಾಳ್ ನಾಗರಾಜ್ : ಆ ಮಾತು ನಾನು ಹೇಳಲಿಲ್ಲ ರೆಡ್ಡಿಯವರು ಹೇಳಿದ್ದು.

ಛೇರ್ಮನ್ : ಒಮ್ಮೆಗೇ ನಾಲ್ಕು ಜನ ಮಾತನಾಡಿದ್ದರೆ ಯಾರ ಮಾತು ಎಂದು ಕೇಳುತ್ತದೆ. ಆದ್ದರಿಂದ ತಮ್ಮ ಆ ಮಾತು ಸರಿಯಲ್ಲ. ಯಾಕೆ ನಾನು ಹೇಳುತ್ತೇನೆ ಅಂದರೆ ಸಚಿವರು ಅಧಿಕಾರಿಗಳನ್ನು ಕೇಳೇ ಉತ್ತರ ಕೊಡುತ್ತಾರೆ. ಎಷ್ಟೋ ಸೀನಿಯರ್ ಮಿನಿಸ್ಟರ್ಸ್ ಅಲ್ಲಿ ಹೋಗಿ ಕೇಳಿಬರುವುದನ್ನು ನೋಡಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನನ್ನ ಆ ಮಾತನ್ನು ಹಿಂದಕ್ಕೆ ತೆಗೆದುಕೊಂಡಿದ್ದೇನೆ.

ಛೇರ್ಮನ್ : ನಾನು ನಂಜೇಗೌಡರನ್ನು ಕೇಳುತ್ತೇನೆ, ಅವಸ್ಥೆನೋಡಿ ಮಂತ್ರಿಗಳದ್ದು ಎಂದು ಹೇಳಿದರೆ ಅರ್ಥವೇನು?

ಶ್ರೀ ಹೆಚ್. ಎನ್. ನಂಜೇಗೌಡ : ಅವರು ವಾಪಸ್ ತೆಗೆದುಕೊಂಡಿದ್ದಾರಲ್ಲಾ

ಛೇರ್ಮನ್ : ಸರಿ, ಮುಂದುವರಿಸಿ,

ಶ್ರೀ ವಾಟಾಳ್ ನಾಗರಾಜ್ : ಅಲ್ಲಿ ಮಂತ್ರಿಗಳ ಸುತ್ತ ನಾಲ್ಕು ಜನ ಅಧಿಕಾರಿಗಳು ಮತ್ತೊಬ್ಬ ಮಂತ್ರಿ ಸೇರಿದ್ದಾರಲ್ಲ, ಅದಕ್ಕೆ ಅವಸ್ಥೆ ಎಂದು ಹೇಳದ್ದೇವೆ ಹೊರತು ಇನ್ನೇನೂ ಅವಹೇಳನ ಮಾಡಬೇಕೆಂದಲ್ಲ.

ಛೇರ್ಮನ್ : ಅವಸ್ಥೆ ಅನ್ನುವ ಬದಲು ವ್ಯವಸ್ಥೆ ಎಂದು ಹೇಳಬಹುದಲ್ಲಾ.

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ಏನಿದೆ ಅಂದರೆ ಗೊತ್ತು ಪಡಿಸಬಹುದಾದ ಅಂತಹ ದಿನಾಂಕಕ್ಕೆ ಪೂರ್ವದಲ್ಲಿ ಅಂತಹ ಭೂಮಿಯ ಮೇಲೆ ರಚನೆ ಅಥವಾ ಕಟ್ಟಡವು ಅಸ್ತಿತ್ವದ ಮೇಲಿರಬೇಕು. ಅಥವಾ ಅಂತಹ ಮೂಲ ಮಾಲೀಕ ಅಥವಾ ಇತರ ನೇಮಿಸಿದ ವ್ಯಕ್ತಿಯು ಅಂದರೆ ಇದು ಸ್ಪಷ್ಟವಾಗಿಲ್ಲವೆಂಬುದು ಒಂದು. ನನ್ನ ಕ್ರಿಯಾಲೋಪ ಏನೆಂದರೆ ಈ ವಿಚಾರದ ಬಗ್ಗೆ ಉತ್ತರ ಕೊಡಬೇಕಾದವರು ಯಾರು ಎಂಬ ಪ್ರಶ್ನೆ ನನ್ನ ಮುಂದೆ ಗಾಢವಾಗಿರುವಾಗ ಒಂದು ಕಡೆ ನನ್ನ ಹಿಂದೆ ಪ್ರಾಧಿಕಾರದ ಅಧ್ಯಕ್ಷರೂ ಈ ಸದನದ ಸದಸ್ಯರೂ ಆದವರಿದ್ದಾರೆ ಅವರು ಉತ್ತರ ಕೊಡುತ್ತಾರೆ. ಮತ್ತೊಂದು ಕಡೆ ಬೆಂಗಳೂರು ನಗರ ಸಚಿವರು ಉತ್ತರ ಕೊಡುತ್ತಾರೆ. ಇಬ್ಬರು ಉತ್ತರ ಕೊಡಬಹುದೇ ಅಥವಾ ಯಾರೂ ಉತ್ತರ ಕೊಡಬೇಕೆಂಬ ಬಗ್ಗೆ ತಾವು ತೀರ್ಪು ಕೊಡಬೇಕು. ಇಲ್ಲಾಂದರೆ ಅವರಿಗೆ ಬಾಯಿಮುಚ್ಚಿಕೊಂಡು ಗಂಭೀರವಾಗಿ ಕುಳಿತಕೊಳ್ಳಿ ಅನ್ನಿ.

ಶ್ರೀ ಎಲ್. ಆರ್. ಶಿವರಾಮೇಗೌಡ : ಉತ್ತರ ಕೊಡುವರು ಮಂತ್ರಿಗಳೇ, ಆದರೆ ಈ ಸದನದ ಸದಸ್ಯನಾಗಿ ಮಾತನಾಡಲು ನನಗೂ ಹಕ್ಕಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಉತ್ತರ ಕೊಡಲು ಇವರು ಯಾರು? ಅವರು ಏನು ಬೇಕಾದರೂ ಮಾತನಾಡಲಿ

---

* * * ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗಗೆ ಕಡತದಿಂದ ತೆಗೆದುಹಾಕಲಾಗಿದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅವರನ್ನು ಗೌರವಾನ್ವಿತ ಸದಸ್ಯರು ಅನ್ನುವುದರಲ್ಲಿ ಅಭಿಪ್ರಾಯಭೇದ ಇಲ್ಲವೇ ಇಲ್ಲ. ಆದರೆ ಅವರು ಗೌರವವಾಗಿರುವದನ್ನು ಬಿಟ್ಟು ಬೇರೆ ದಿಕ್ಕಿಗೆ ಹೋಗಬಾರದು. ಅವರು ಅಲ್ಲಿ ಅಧ್ಯಕ್ಷರು ಆದರೆ ಇಲ್ಲಿ ಸದಸ್ಯರು ಅಷ್ಟೆ. ಉತ್ತರ ಕೊಡಲು ಖಂಡಿತ ಬರುವುದಿಲ್ಲ. ಆದ್ದರಿಂದ ನೇರವಾಗಿ ತಮಗೆ ಉತ್ತರಿಸಲು ಬರುವುದಿಲ್ಲ ಅಂತ ತಾವು ಹೇಳಬೇಕೆಂದು ಮನವಿ ಮಾಡುತ್ತಿದ್ದೇನೆ.

ಶ್ರೀ ಎಸ್. ರಾಜೇಂದ್ರನ್ : ಶಿವರಾಮೇಗೌಡರು ಉತ್ತರ ಕೊಟ್ಟಿಲ್ಲ. ಅವರು ಮಾತನಾಡುವುದನ್ನೇ ಉತ್ತರ ಎಂದು ಇವರು ತೆಗೆದುಕೊಳ್ಳುತ್ತಿದ್ದಾರೆ.

ಛೇರ್ಮನ್ : ಆಯಿತು ಸದನದಲ್ಲಿ ಮಾತನಾಡುವ ಹಕ್ಕು ಎಲ್ಲರಿಗೂ ಇದೆ. ಆದರೆ ಅವರು ಕೊಡುವ ಸಲಹೆಯನ್ನು ಉತ್ತರ ಅಂತಲೇ ನೀವ್ಯಾರೂ ತಿಳಿದುಕೊಳ್ಳಬಾರದು. ಮತ್ತು ಸದಸ್ಯರಾಗಿದ್ದವರು ಸನ್ಮಾನ್ಯ ಶಿವರಾಮೇಗೌಡರಿಗೆ ನಾನು ಹೇಳುವುದಾದರೂ ಕೂಡ ಉತ್ತರ ಕೊಡಲು ಸಚಿವರು ಸಮರ್ಥರಿದ್ದಾರೆ. ಅವರನ್ನು ನೀವು ಸಮರ್ಥಿಸಿ ಕೊಳ್ಳಬೇಕಾದ ಅವಶ್ಯಕತೆ ಇಲ್ಲ ನಿಮ್ಮ ಅನಿಸಿಕೆ ಇದ್ದರೆ ನೀವು ಹೇಳಿ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ತೀರ್ಪನ್ನು ನಾನು ಪ್ರಶ್ನೆ ಮಾಡುವುದಿಲ್ಲ. ಮತ್ತೊಂದು ಸಲ ಪರಿಶೀಲನೆ ಮಾಡುವುದು ಒಳ್ಳೆಯದು, ಇಲ್ಲದಿದ್ದರೆ ಇಂಥವರೆಲ್ಲ ಬಹಳ ಹೆಚ್ಚಿಕೊಂಡು ಬಿಡುತ್ತಾರೆ.

ಶ್ರೀ ಟಿ. ಬಿ. ಜಯಚಂದ್ರ : ಅಧ್ಯಕ್ಷರೇ ವೀರಪ್ಪ ಮೊಯ್ಲಿಯವರು ಮಾತನಾಡಬೇಕಾದರೆ ಹಿಂದೆ ಅವರು ಕಾನೂನು ತಂದು ಅದರ ಸಾಧಕಬಾಧಕಗಳ ಅರಿವಿಟ್ಟುಕೊಂಡು ನೀವು ತಂದಿರುವ ಕಾನೂನಿನಲ್ಲಿ ಬ್ಲಾಂಕೆಟ್ ಆರ್ಡರ್ ಆಗಬಾರದು ರಿಸ್ಟ್ರಿಕ್ಷನ್ಸ್ ಹಾಕಿರಿ ಎಂದು ಅವರು ಹೇಳುವ ಸಂದರ್ಭದಲ್ಲಿ ನಿಮ್ಮ ಕಾಲದಲ್ಲಿ ಇಷ್ಟಾಯಿತು ಎಂದು ಹೇಳುವುದಕ್ಕೆ ನೀವು ಹೊರಟರೆ ಇದರಲ್ಲಿ ನಾವು ರಾಜಕೀಯ ಮಾಡಬೇಕು ಎಂಬ ಅಭಿಪ್ರಾಯ ನಮಗಿಲ್ಲ. ಆ ತರಹ ಮಾತನಾಡಬೇಕು ಅನ್ನುವುದಾದರೆ ನಮಗೂ ಬರುತ್ತದೆ. ತಾವು ಬಂದು ನಾಲ್ಕೂವರೆ ವರ್ಷವಾಯಿತು ಚುನಾವಣೆ ಇನ್ನು 6 ತಿಂಗಳಿದೆ ಆರು ತಿಂಗಳಿಗೆ ಮಂಚೇನೆ ಕಾನೂನು ಯಾಕೆ ತಂದಿರಿ ಎಂದು ನಾನು ಕೇಳಬಹುದಾ? ನಾವು ಅಂತಹ ರಾಜಕೀಯ ಮಾಡುವುದಕ್ಕೆ ಹೋಗುತ್ತಿಲ್ಲ. ನೀವು ತಂದಿರುವುದರಲ್ಲಿ ಒಂದೊಂದು ಶಬ್ಧಕ್ಕೂ ಡಿಸ್ಕ್ರಿಪ್‌ಷನ್ ಡೆಫಿನಿಷನ್ ಇಲ್ಲದಿರುವ ಸಂದರ್ಭದಲ್ಲಿ ಅಧಿಕಾರಿಗಳನ್ನು ನೀವು ರಿಸ್ಟ್ರಿಕ್ಟ್ ಮಾಡಲು ಆಗುವುದಿಲ್ಲ.

ಅದರ ಪರಿಣಾಮ ಏನು ಎಂಬುದು ತಮಗೆ ಗೊತ್ತಿದೆ.

I can also attribute motives against you, against the Government. That we are not doing it. We give prompt suggestions in the interest of Bangalore city.

ಶ್ರೀ ಸೋಮಣ್ಣ : ತಾವು ಮಾಡಿದ್ದು ಕೆಟ್ಟದ್ದು ಎಂದು ಹೇಳಲಿಲ್ಲ. ಇಂಡಿವಿಜುವಲ್ ಮಾಡಿದ್ದೀರಿ, ಹಾಗೇ ನಾವು ಇಂಡಿವಿಜ್ಯುಯಲ್ ಮಾಡುವುದು ಎಂದು ಹೇಳಿದೆ ಅಷ್ಟೇ ಸಾರ್ ನೀವು ಆ ತರಹ

ತಿಳಿದುಕೊಂಡರೆ ನಾನು ಏನೂ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ : ಇಂಗ್ಲೀಷಿನಲ್ಲಿ ಒಂದು ಶಬ್ಧ ಇದೆ ಯುನೆಂಡೊ ಎಂದು ಹಾಗೆಂದರೆ ಅವಮಾನ ಮಾಡುವುದಕ್ಕೇ ಉಪಯೋಗಿಸುವ ಪದ. ಧೈರ್ಯವಿದ್ದರೆ ನಿಮಗೆ ನಿಜವಾದ ಚಾನ್ಸ್ ಇದ್ದರೆ ನಾನು ಎತ್ತಿದ ಪ್ರಶ್ನೆಗಳಿಗೆ ಉತ್ತರಿಸಲು ಪ್ರಯತ್ನ ಮಾಡಿ. ಅದಕ್ಕೆ ದಾರಿ ತಪ್ಪಿಸಿ ಏನೇನೋ ಕತೆಗಳನ್ನು ಉಪಕತೆಗಳನ್ನು ಹೇಳಲು ದಯಮಾಡಿ ಹೋಗಬೇಡಿ. ಪ್ರಶ್ನೆ ಏನೆಂದರೆ ತಾವು ಹೇಳಿದಿರಿ 38 ಸಿ ಬಗ್ಗೆ. ಈಗ ಸದನದ ನಡವಳಿಕೆಗಳನ್ನು ತೆಗೆದುಕೊಳ್ಳಿ. 38 ಸಿ ತಿದ್ದುಪಡಿ ತಂದಾಗ ಎಲ್ಲರೂ ಸ್ವಾಗತ ಮಾಡಿದ್ದಾರೆ. ಯಾರು ಆರೋಪ ಮಾಡಲಿಲ್ಲ. ದುರುದ್ದೇಶದಿಂದ ತಂದಿದ್ದಾರೆ ಎಂದು ಹೇಳಲಿಲ್ಲ. ತಮಗೆ ಗೊತ್ತಿದೆ, ನಾನು ಮುಖ್ಯಮಂತ್ರಿಯಾಗಿದ್ದೆ. ಆಗ ಯಾವುದೇ ಅಪಸ್ವರ ಅಥವಾ ಚಾರ್ಜಸ್ ಕೇಳದೆ ಇದ್ದ ಮುಖ್ಯಮಂತ್ರಿ ಅಂದರೆ ನಾನೇ, ಬೇರೆ ಯಾರು ಅಲ್ಲ. ಆಮೇಲೆ ಕೂಡ ಈ ಕಾನೂನು ಮಾಡಿದ ಮೇಲೆ ದುರುಪಯೋಗ ಮಾಡುತ್ತಿದ್ದೀರಿ ಎಂಬ ಆರೋಪ ಬರಲಿಲ್ಲ.

4.20 ಪಿ.ಎಂ.

ಒಂದು ಅಪಸ್ವರ ಇವತ್ತು ಆರುವರ್ಷದ ಮೇಲೆ ಈ ಕೆಲವು ಹೇಳಿಕೆಗಳನ್ನು ಹೇಳುತ್ತಿದ್ದೀರೋ ಅದು ನಿಮಗೆ ಬಿಟ್ಟಿದ್ದು. ನಿಮ್ಮ ಆತ್ಮಕ್ಕೆ ಬಿಟ್ಟಿದ್ದು, ನಿಮ್ಮ ಆತ್ಮಸಾಕ್ಷಿಗೆ ಬಿಟ್ಟಿದ್ದು. ನಾನು ಅದರ ಮೇಲೆ ಹೆಚ್ಚು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಇದು ಹೆಚ್ಚಾಗಿ ಆ ಕಾನೂನು ಮಾಡಿದಾಗ ಇಂಪ್ಲಿಮೆಂಟ್ ಮಾಡಿದ್ದು ಯಾವುದು ? 86 ರಲ್ಲಿ ಇದೆಲ್ಲಾ ರೆಸ್‌ಲ್ಯೂಷನನ್ನು ನೀವು ಯಾವುದೋ ಒಂದು ದುರದ್ದೇಶದಿಂದ ಮಾಡಿದಿರಿ ಎಂದು ನಾನು ಹೇಳಿದೆನಾ? ಇವರು ಹೇಳಿಕೆ ಕೊಡುವ ಧಾಟಿ ನೋಡಿದರೆ ಸ್ವಲ್ಪ ಜವಾಬ್ದಾರಿಯಿಂದ ದಯಮಾಡಿ ನಿಮ್ಮ ಕ್ಯಾಬಿನೆಟ್ ಕಲೀಗ್ಸ್‌ಗೆ ಹೇಳಬೇಕು. ಅದು ಕೂಡ ನಮ್ಮಂಥವರಿಗೇ. ನಾವು ಆ ರೀತಿ ಏನಾದರೂ ಇದ್ದರೆ ಆ ಕಾಲದಲ್ಲಿ ನಮ್ಮ ಮೇಲೆ ಆಪಾದನೆ ಇದ್ದರೆ ಮತ್ತೊಂದು ಇದ್ದರೆ ಸರಿ. ಎರಡು ವರ್ಷಗಳ ಕಾಲ ಒಂದು ಶಬ್ದದ ಆಪಾದನೆ ಇಲ್ಲದೆ ನಾನು ಅಧಿಕಾರವನ್ನು ನಡೆಸಿ ಬಿಟ್ಟು ಬಂದಿದ್ದೇನೆ. ಯಾರು ಆಪಾದನೆ ಮಾಡಲಿಲ್ಲ. ಇವತ್ತು ಸೋಮಣ್ಣನವರು ಕುಳಿತುಕೊಂಡು ಕೆಲವು ಹೇಳಿಕೆಗಳನ್ನೆಲ್ಲಾ ಕೊಡುತ್ತಿದ್ದಾರೆ ಯಾವ ಅಧಿಕಾರಿಗಳು ಇದನ್ನು ಒದಗಿಸಿದರೋ ಗೊತ್ತಿಲ್ಲ. ಪಾಪ ಅಧಿಕಾರಿಗಳು ಸ್ವಲ್ಪ ಸ್ಟಡಿ ಮಾಡಿ ಒಪ್ಪಿಸಲಿ. ನನ್ನ ಮೇಲೆ ಆಗ ಯಾರು ಒಂದು ಶಬ್ದವನ್ನು ಹೇಳಲಿಲ್ಲ. ಆಮೇಲೆ ನಾವು ಕಾನೂನು ಮಾಡಿದ ಮೇಲೂ ಕೂಡ ಹೇಳಲಿಲ್ಲ. ಐದಾರು ವರ್ಷಗಳಾದ ಮೇಲೆ ಏನೋ ಒಂದು ಇದೆ ಎಂದು ಹೇಳಿ ಇವತ್ತು ನೀವೇ ಹುತ್ತಕ್ಕೆ ಕೈಹಾಕಿ ಹಾವಿನಿಂದ ಕಚ್ಚಿಸಿಕೊಳ್ಳಬೇಡಿ ಸೋಮಣ್ಣನವರೇ. ನೀವೇ ಹುತ್ತಕ್ಕೆ ಕೈಹಾಕಿ ನೀವು ಕಟ್ಟಿರುವ ಹುತ್ತದಲ್ಲಿ ಹಾವು ಇದ್ದರೆ ನೀವು ಕಡಿಸಿಕೊಳ್ಳುತ್ತೀರೇ ಹೊರತು ನಮಗೆ ಕಡಿಯುವುದಕ್ಕಾಗುವುದಿಲ್ಲ. ಏಕೆಂದರೆ 86 ರ ರೆಸಲ್ಯೂಷನ್ ಇದೆಯಲ್ಲಾ ಅದನ್ನು ಜಾರಿ ಮಾಡಲಿಕ್ಕೆ ತಂದದ್ದು. ದಯಮಾಡಿ ಯಾವಾಗಲೂ ಮಾತನಾಡುವಾಗ ಪೂರ್ವಾಪರ ಆಲೋಚನೆ ಮಾಡಿಕೊಂಡು ಮಾಡಬೇಕಾಗುತ್ತದೆ. ಆಗಲೂ ಕೂಡ ಪ್ರಕಾಶ್‌ರವರು ಮಂತ್ರಿಗಳಾಗಿದ್ದರು. ಬಿ ಡಿ ಎ ಗೆ ಮೊನ್ನೆ ಮಂತ್ರಿಗಳಾಗಿದ್ದೀರಿ ಬಹಳ ಸಮಯವಾಗಿಲ್ಲ. ಎಷ್ಟಿದ್ದರೂ ಕೂಡ ನಾನು ಒಂದು ಶಬ್ದ ಹೇಳಬೇಕಾದರೂ ನೂರು ವಿಚಾರ ಕುರಿತು ಓದಿ ಬಂದು ಇಲ್ಲಿ ಮಾತನಾಡುತ್ತೇನೆ. ಅದನ್ನು ನಾವು ಕಲಿತಿದ್ದೇವೆ. ಒಮ್ಮಲೇ ಬಂದು ಪಟ್ ಎಂದು ಹೇಳಿ ಉತ್ತರ ಕೊಡುವುದಕ್ಕಾಗುವುದಿಲ್ಲ. ನಾನು

ಮನೆಗೆ ಹೋದೆ. ನಾನು ಹಿಂದಿನ ಛೇರ್ಮನ್ ಮುದ್ದಪ್ಪನವರ ಹತ್ತಿರ ಮಾತನಾಡಿದೆ. ಏಕೆ? ಏನು ಬೇಕಾಗಿತ್ತು. ನಾನು ರಾಜಕೀಯ ಭಾಷಣ ಹೊಡೆದುಹೋಗಬಹುದು. I want to make it more authentic, so that

ಕ್ರೆಡಿಬಿಲಿಟಿ ಬಗ್ಗೆ ಯಾರೂ ಪ್ರಶ್ನೆ ಹಾಕಬಾರದು. ನಾನು ಒಂದು ಮಾತು ಹೇಳುತ್ತೇನೆ ಎಂತಲ್ಲ. ಆದರೆ ನಾವು ಸ್ವಲ್ಪ ಅಧ್ಯಯನ ಮಾಡಬೇಕು. ಕೂಲಂಕುಷವಾಗಿ ಆಲೋಚನೆ ಮಾಡಬೇಕು.

ಬಿಡಿಎ ಬಹಳ ಅಗಾಧವಾಗಿದೆ. ಅದೇನೂ ಸಣ್ಣದಲ್ಲ. ಬಹಳ ಆಳವಾದ ಒಂದು ಬಾವಿ. ಅದರಲ್ಲಿ ಏನು ಇದೆ ಎಂದು ಹುಡುಕುವುದಕ್ಕೆ ಬಹಳ ಕಾಲ ಬೇಕು ಸೋಮಣ್ಣನವರೇ. It is only a word of caution. ಇದರಲ್ಲಿ ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಏಕೆಂದರೆ ಇವತ್ತು ನಿಮ್ಮ ಆತ್ಮಸಾಕ್ಷಿ ಪ್ರಕಾರ, ನಿಮ್ಮ ಆತ್ಮ ಮುಟ್ಟಿ ಹೇಳಿ. ಈ ಕಾನೂನಿಂದ ಏನಾದರೂ ನೀವು ಸಾಧನೆ ಮಾಡುವುದು ಇದೆಯೇ? ಎಲ್ಲಿ ಹೋಗುತ್ತೀರಿ? ನಿಮ್ಮ ಮೇಲೆಯೇ ಆಪಾದನೆ ಬರುವುದು. ನಮ್ಮ ಮೇಲೆ ಅಲ್ಲ. ನಾಳೆ ಈ ಕಾನೂನನ್ನು ಅನುಷ್ಠಾನ ಮಾಡಿದಾಗ ಏನೇನು ಗೊಂದಲ ಆಗುತ್ತದೆ. ಅದಕ್ಕೆ ನೀವೇ ಜವಾಬ್ದಾರರಾಗುತ್ತೀರಿ. ದಯಮಾಡಿ ಅದಕ್ಕೆ ನಾನು ಹೇಳಿದೆ. ಉದ್ದೇಶ ಅಬ್ಜೆಕ್ಷನ್ಸ್ ಅಂಡ್ ರೀಸನ್ಸ್‌ನಲ್ಲಿ ಬಹಳ ಸ್ಪಷ್ಟ ಇದೆ. ಅದನ್ನು ಓದಿ. ಅಬ್ಜೆಕ್ಷನ್ಸ್ ಅಂಡ್ ರೀಸನ್ಸ್ ಕಾನೂನಿನ ಪ್ರಕಾರ that forms the part and parcel of law in letter and spirit. ಒಂದು ವೇಳೆ ಕಾನೂನಿನಲ್ಲಿ ಏನಾದರೂ ಗೊಂದಲ ಆಂಬಿಗ್ಯುಟಿ ಕಂಡರೆ ಅಬ್ಜೆಕ್ಷನ್ಸ್‌ನ್ನು ಓದುತ್ತಾರೆ. ಕೋರ್ಟಿನಲ್ಲಿ ಕೂಡ ನಾನು I won a case by reading only the objections.

ಅಬ್ಜಕ್ಷನ್ಸ್ ಅಂಡ್ ರೀಸನ್ಸ್ ಓದಿಯೇ ನಾನು I won a case. ಏಕೆಂದರೆ ಅದು ಬಹಳ ಮುಖ್ಯವಾಗಿರುತ್ತದೆ. ಅದರಲ್ಲಿ ಬಹಳ ಸ್ಪಷ್ಟವಾಗಿದೆ. ಏನೆಂದರೆ "or acquired by it to the original owner or any other person who is in occupation of the land. or has put up structure. " It says "any person"- it can be a stranger, who has put up the structure,who has occupied the land-he is regularised. Not only occupation ಅದು ಬೇಕಾಗಿಲ್ಲ. ಜನರಲ್ ಡೆಫನಿಷನ್‌ನಲ್ಲಿ ಆಕ್ಯುಪೆಂಟ್ಸ್ ಎಂದರೆ there may be a conditon. ಎಂದು ಒಂದು ಕಂಡೀಷನ್ ಇರಬಹುದು. ಆದರೆ ಅದಕ್ಕಿಂತಲೂ ಸ್ವಲ್ಪ ಮುಂದೆ ನೀವು ಹೋಗಿದ್ದೀರಿ. ಆಕ್ಯುಪೇಷನ್‌ಗಿಂತಲೂ ಪ್ರಕಾಶ್‌ರವರೇ, ಒಂದು ಹೆಜ್ಜೆ ಮುಂದೆ ಹೋಗಿದ್ದೀರಿ. Anybody who has put the structure. ಅಲ್ಲಿಗೂ ನಿಲ್ಲಲಿಲ್ಲ ನೀವು. That means anybody, ಈಗ ಒಂದು ಗೂಟ ನೆಟ್ಟುಬಿಟ್ಟರೆ ಆಯಿತು, You get the right. Is it your intention to have a law like this?

ನೀವು ಹೇಳಬಹುದು ಕಾನೂನಿನಲ್ಲಿ ಬಹಳ ಸ್ಪಷ್ಟವಾಗಿಲ್ಲ ಎಂದು. ಆದರೆ ಅಬ್ಜಕ್ಷನ್ಸ್ ಅಂಡ್ ರೀಸನ್ಸ್‌ನಲ್ಲಿ ಬಹಳ ಸ್ಪಷ್ಟವಾಗಿದೆ. It forms the part and parcel of the legislation which we are passing. ದಯಮಾಡಿ ಬಹಳ ವಿಚಾರ ಮಾಡಿ. ಸೂಕ್ಷ್ಮ ವಿಚಾರಗಳಿವೆ. ಗಂಭೀರವಾದ ವಿಚಾರಗಳಿವೆ. ದೊಡ್ಡ ಅನಾಹುತಗಳಾಗುತ್ತಿದೆ. ಇಂಥ ಕಾನೂನುಗಳನ್ನು ದಯಮಾಡಿ ಮಾಡಬೇಡಿ. Don't stand on prestige ಇದರಲ್ಲೇನು ನಿಮಗೆ ಪ್ರೆಸ್ಟೀಜ್ ಇದೆ? ಏನು: ನಿಮ್ಮ ಉದ್ದೇಶ ಇರಬಹುದು, ಬಹಳ ವರ್ಷಗಳ ಕಾಲದಿಂದ ಆಕ್ಯುಪೈ ಮಾಡಿ ಅವರು ಹಣವನ್ನು ಕೊಟ್ಟು

ಮಾಡಿಕೊಂಡು ಮಾನ್ಯ ನಂಜೇಗೌಡರು ಹೇಳಿದ ವರ್ಗಗಳು ಇದ್ದರೆ ಅವರಿಗೆ ಸಹಾಯ ಮಾಡುವ ಕಾನೂನುಗಳು ಬರಲಿ. ಅದನ್ನು ನಾವು ಸ್ವಾಗತಿಸೋಣ. ಆದರೆ ಅವರಿಗೆ ಯಾವುದೇ ಸಹಾಯವಾಗುವುದಿಲ್ಲ. ಅದಕ್ಕೆ ವಿರುದ್ಧ ದಿಕ್ಕಿನಿಂದ ಹೋಗುತ್ತದೆ. ಬಹಳ ಅನಾಹುತ, ಗೊಂದಲವಾಗುತ್ತದೆ. ಕಾನೂನನ್ನು ಹಿಂದಕ್ಕೆ ತೆಗೆದುಕೊಳ್ಳಿ. ಪುನಃ ಕ್ಯಾಬಿನೆಟ್‌ನಲ್ಲಿ ಇದನ್ನು ಬೇಕಾದರೆ ಚರ್ಚೆ ಮಾಡಿ. ಜಂಟಿ ಸಲಹಾ ಸಮಿತಿ ಮಾಡಬೇಡಿ. What you loose by it ? I am telling you with all seriousness at my command.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮೊಯಿಲಿಯವರು ಹೇಳಿರುವುದರಲ್ಲಿ ಸತ್ಯ ಇದೆ. ಇಲ್ಲಿ ಬಿ. ನಲ್ಲಿ ಏನು ಹೇಳುತ್ತಾರೆ. ಅಲ್ಲ ಒಂದು ಅಮೆಂಡ್‌ಮೆಂಟ್ ಮಾಡಿದರೆ ಸರಿಹೋಗಬಹುದು ಎಂದು ನನ್ನ ಅಭಿಪ್ರಾಯ.

"The original owner of the land means a person who was coccupant of the land immediately before the publication of the development scheme which contained proposal for acquisition of such land ಎಂದು ಏನು ಇದೆ. ಅಲ್ಲಿ ಒಂದನ್ನು ಇನ್‌ಕ್ಲೂಡ್ ಮಾಡಿ ಏನೆಂದರೆ "Excluding Housing Corporations and companies. ಎಂದು ಮಾಡಿದರೆ ಆಗ ಸರಿಯಾಗಬಹುದು ಎಂದು ನನ್ನ ಅಭಿಪ್ರಾಯ. ಏಕೆಂದರೆ ಹೌಸಿಂಗ್ ಕಾರ್ಪೋರೇಷನ್‌ನವರು, ಹೌಸಿಂಗ್ ಸೊಸೈಟಿಯವರೇ ಗ್ರಾಬ್ ಮಾಡುವುದು. Taking shelter under this law, they are going to grab the whole land. This is the doubt expressed by Hon'ble Members. So, my opinion is why can't you insert a word "Excluding Housing Corporations Housing Societies and Comapnies." ಆ ರೀತಿ ಮಾಡಿ ಆಗ ಇದನ್ನು ಅವಾಯ್ಡ್ ಮಾಡಬಹುದು. ಲ್ಯಾಂಡ್ ಗ್ರಾಬರ್ಸ್‌ನ್ನು ಇನ್ ದಿ ನೇಮ್ ಆಫ್ ಸೊಸೈಟಿ ಅವಾಯ್ಡ್ ಮಾಡಬಹುದಲ್ಲಾ. ಅದನ್ನು ನೀವು ಮಾಡಿದರೆ ಆಗ ಸರಿಹೋಗುತ್ತದೆ ಎಂಬುದು ನನ್ನ ಅಭಿಪ್ರಾಯ. ಅದನ್ನು ಮಾಡಿದರೆ you can avoid to the maximum extent ಈ ದೇಶದಲ್ಲಿ ಕಾನೂನು ಮಾಡಿದರೆ ಅದನ್ನು ದುರುಪಯೋಗ ಮಾಡಿಕೊಳ್ಳುವುದು ಹೇಗೆ ಎಂದು ಮೊದಲೇ ಆಲೋಚನೆ ಮಾಡಿರುತ್ತಾರೆ. ಹಂಡ್ರೆಡ್ ಪರಸೆಂಟ್ ಪರಫೆಕ್ಷನ್ ಎಲ್ಲೂ ಕೂಡ ನೋಡಲಿಕ್ಕೆ ಆಗುವುದಿಲ್ಲ. ಮೊಯಿಲಿಯವರು ಹೇಳಿದ್ದು ಒಂದು ಸೀರಿಯಸ್ ಪಾಯಿಂಟ್, ಅದು ಕರೆಕ್ಟ್ ಪಾಯಿಂಟ್. ಎಲ್ಲರೂ ಅದನ್ನು ಒಪ್ಪಲೇಬೇಕು. ಏಕೆಂದರೆ taking shelter under this law, anybody can grab the land., in the name of Housing societies, firms companies. Trusts. Everybody can grab the land. So, you can insert the words "excluding Housing societies, trust, companies, limited companies..." ಎಂದು ಹೇಳಿ ಅದನ್ನು ಸೇರಿಸಿದರೆ ಆಗ you can do justice for the poor people. ಎಂದು ಹೇಳಿ ನನಗನಿಸುತ್ತದೆ. ಎಕ್ಸ್‌ಕ್ಲೂಡಿಂಗ್ ಎಂದು ಹೇಳಿ ಇದನ್ನು ಏಕೆ ಮಾಡಬಾರದು? Government can consider this point.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಉಪಾಧ್ಯಕ್ಷರೇ, ಇದು ಸಣ್ಣ ವಿಧೇಯಕ. ಮಾನ್ಯ ಸಚಿವರು ಇದ್ದಾರೆ. ಒಂದು ಮೂಲಭೂತ ಪ್ರಶ್ನೆ ಸರ್ಕಾರದ ಮುಂದಿದೆ. ಇಲ್ಲೇನೊ ಬೆಂಗಳೂರು

ಡೆವಲಪ್‌ಮೆಂಟ್ ಅಥಾರಿಟಿ, ಇದರ ಹತ್ತಿರದಲ್ಲೆ ಸರ್ಕಾರ ಇರುತ್ತದೆ. ಮಂತ್ರಿಗಳು ಇರುತ್ತಾರೆ. ಜನರು ಇರುತ್ತಾರೆ. ಪ್ರಭಾವಿ ವರ್ಗದವರು ಇದ್ದಾರೆ. ನೀವು ಅದಕ್ಕೆ ನಮ್ಮ ಲ್ಯಾಂಡ್ ಅಕ್ವಿಜಿಷನ್ ಆಕ್ಟ್ ಪ್ರಕಾರ ಅಕ್ವೈರ್ ಮಾಡಿರುವ ಭೂಮಿಯನ್ನು ಪರಂತು ಅದೇ ಮಾಲೀಕನಿಗೆ ಅಥವಾ ಸ್ವಾಧೀನದಾರನಿಗೆ ವಹಿಸಿಕೊಡುವುದಕ್ಕೆ ಇಂಥ ಕಾನೂನನ್ನು ತಂದು ಬಿಟ್ಟಿರಿ. ಇದರ ಹಿಂದೆ ಒಂದು ಸಿದ್ಧಾಂತ ಅಡಗಿದೆ. ಸಿದ್ಧಾಂತವೆಂದರೆ ಲ್ಯಾಂಡ್ ಅಕ್ವಿಜಿಷನ್ ಆಕ್ಟ್ ಪ್ರಕಾರ ಎಲ್ಲೆಲ್ಲಿ ನೀವು ಭೂಮಿಯನ್ನು ಅಕ್ವೈರ್ ಮಾಡಿದ್ದೀರಿ, ಅಂಥ ಭೂಮಿಯ ಅವಶ್ಯಕತೆ ಸರ್ಕಾರಕ್ಕೆ ಇಲ್ಲದೇ ಹೋದರೆ ಅಥವಾ ಸಂಸ್ಥೆಗೆ ಭೂಮಿಯನ್ನೂ ಕೂಡ ಪರಂತು ಆಯಾ ಮಾಲೀಕರಿಗೆ ವರ್ಗಾವಣೆ ಮಾಡುವ ಸಿದ್ಧಾಂತಕ್ಕೆ ಸರ್ಕಾರ ಕಟ್ಟುಬೀಳಬೇಕಾಗುತ್ತದೆ. ಯಾರ್‍ಯಾರಿಗೆ ಅನುಕೂಲ ಹೇಗೇಗೆ ಬೇಕೋ ಹಾಗೆ ಮಾಡುವುದಿಲ್ಲ ಈಗ ಶರಾವತಿ ಯೋಜನೆಯಲ್ಲಿ ಮುಳುಗಡೆ ಮಾಡಿರುವ ಭೂಮಿ ಇದೆ. ಕೆಲವು ಭಾಗ ಭೂಮಿ ಅಗತ್ಯವಿಲ್ಲ. ಅದನ್ನು ಕೊಡಬೇಕಾಗುತ್ತದೆ. ಈ ಸಿದ್ಧಾಂತ ನೀವು ಒಪ್ಪಿಕೊಂಡರೆ. ಸರ್ಕಾರಕ್ಕೆ ಒಂದು ಗೊತ್ತುಗುರಿ ಇರಬೇಕಾಗುತ್ತದೆ. ಏಕೆಂದರೆ ನಿನ್ನೆ ಹೇಳಿದಾಗ ಗೊತ್ತು ಇದೆ. ಗುರಿಯೂ ಇದೆ. ಸರ್ಕಾರಕ್ಕೆ. ಆದ್ದರಿಂದ ಆಯವ್ಯಯವನ್ನು ಪಾಸುಮಾಡಿಕೊಡಿ ಎಂದು ಅರ್ಥಸಚಿವರು ಹೇಳಿದರು. ನಿಮಗೆ ಗೊತ್ತುಗುರಿ ಇಲ್ಲದೆಯೇ ದಿಕ್ಕುತಪ್ಪಿದ ಮಗನ ರೀತಿಯಲ್ಲಿ ಒಂದೊಂದು ಮನಸ್ಸಿಗೆ ಬಂದಂತೆ ಕಾನೂನು ತರುವ ಸ್ಥಿತಿಗೆ ಬಂದಿದ್ದೀರಿ.

ಸಚಿವರಾದ ಗೋವಿಂದೇಗೌಡರಿದ್ದಾರೆ, ನರಸಿಂಹರಾಜಪುರ ತಾಲ್ಲೂಕಿನಲ್ಲಿ ಭೂಮಿ ಮುಳುಗಡೆಯಾಗಲಿಲ್ಲವೇ? ಈಗ ಕೆಲವು ಭಾಗದ ಭೂಮಿ ಇನ್ನೂ ಉಳಿದಿದೆ, ಅದು ಅನಾವಶ್ಯಕವಾಗಿದೆ. ಅದನ್ನೆಲ್ಲ ಈಗ ವಾಪಸ್ಸು ಕೊಡಬೇಕಲ್ಲಾ? ಮೂಲಭೂತವಾಗಿ ಇದೊಂದು ಕಲ್ಪನೆಗೆ ಸಂಬಂಧಪಟ್ಟ ವಿಷಯ. ಏಕೆಂದರೆ, ಈಗ ಬಿ.ಡಿ.ಎ. ಗೆ ನೀವು ಈ ಭೂಮಿಯನ್ನು ವಾಪಸ್ಸು...

ಶ್ರೀ ಹೆಚ್. ಎನ್. ನಂಜೇಗೌಡ : ಇಂತಹ ಕಾನೂನಿನ ವಿಚಾರದಲ್ಲಿ ಸಿದ್ಧಾಂತ ಹೇಳುವುದಕ್ಕೆ ಹೋದರೆ ಇಂಟರ್‌ಪ್ರಿಟೇಷನ್‌ನಲ್ಲಿ ಹೋಗುತ್ತದೆ. ಉದಾಹರಣೆಗೆ, ಸದಾಶಿವನಗರದಲ್ಲಿ ಜಮೀನು ಕಳೆದುಕೊಂಡಿರುವವ ಸ್ಥಳೀಯ ವ್ಯಕ್ತಿಯಾಗಿದ್ದು, ನಾವೆಲ್ಲಾ ಬೇರೆಯವರಿಗೆ ಸೈಟು ಕೊಟ್ಟಿದ್ದೇವೆ. ಅದೇ ರೀತಿ ಇಂದಿರಾನಗರದಲ್ಲಿ ಜಮೀನು ಕಳೆದುಕೊಂಡಿರುವ ಸ್ಥಳೀಯ ಮನುಷ್ಯನಾಗಿದ್ದು ಅಲ್ಲಿ ಸುಖವಾಗಿರುವವರು ಬೇರೆಯವರು, ಹೊರಗಿನವರೇ ಅಲ್ಲಿ ಜಾಸ್ತಿ ಸಂಖ್ಯೆಯಲ್ಲಿದ್ದಾರೆ. ಬಿ.ಡಿ.ಎ. ಲೇಔಟ್‌ನಲ್ಲಿ ಜಮೀನು ಕಳೆದುಕೊಂಡಿರುವವನು ಸ್ಥಳೀಯ ಮನುಷ್ಯನಾಗಿದ್ದು ಇವೊತ್ತು ಆತ ಭಿಕಾರಿಯಾಗಿ ಎಲ್ಲಿಯೋ ಇದ್ದಾನೆ. ಆದರೆ ಶ್ರೀಮಂತರು ಅಲ್ಲಿ ಸೈಟುಗಳನ್ನು ತೆಗೆದುಕೊಂಡು ಮನೆ ಕಟ್ಟಿ ಬೇರೆಯವರಿಗೆ ಮಾರಿ ಹೋಗಿದ್ದಾರೆ. ಒಬ್ಬ ಅಧಿಕಾರಿಯಂತೂ ಇಲ್ಲಿ ಒಂದು ಸೈಟು ತೆಗೆದುಕೊಂಡು ಅದನ್ನು ಮಾರಿ ದೆಹಲಿಯಲ್ಲೊಂದು ಮನೆ ಕಟ್ಟಿಸಿ ಅದನ್ನು ಬಾಡಿಗೆಗೆ ಕೊಟ್ಟಿದ್ದಾರೆ. ಈ ರೀತಿ ನಮ್ಮ ಸಿದ್ಧಾಂತಗಳೆಲ್ಲವೂ ಹಳಿ ತಪ್ಪಿಹೋಗುತ್ತಿವೆ. ನಿಜವಾಗಿಯೂ ತೊಂದರೆಯಲ್ಲಿರುವವರಿಗೆ ರಿಲೀಫ್ ಸಿಕ್ಕಬೇಕೆಂದು ನಾವು ಹೇಳಿರುವುದರಿಂದ, ಅದರ ಬಗ್ಗೆ ಏನಾದರೂ ಸಲಹೆ ಕೊಡುವುದಿದ್ದರೆ ಹೇಳಿ. ಅದು ಬಿಟ್ಟು ಗಂಟೆಗಟ್ಟಲೆ ಸಿದ್ಧಾಂತ ಹೇಳಿಕೊಂಡು ಒಂದು ಬಿಲ್ ವಿಚಾರದಲ್ಲಿ ಭಾಷಣ ಮಾಡಿಕೊಂಡು ಕುಳಿತುಕೊಂಡರೆ ಹೇಗೆ?

ಶ್ರೀ ಕಾಗೋಡು ತಿಮ್ಮಪ್ಪ: ನಿಮ್ಮಂಥವರು ಹೇಳುವವರಿರುತ್ತಾರೆ, ಇಲ್ಲಿರುವ ಜನರಿಗೆ ರಿಲೀಫ್ ಸಿಗುತ್ತದೆ. ಆದರೆ, ಇದೇ ಸಿದ್ಧಾಂತವನ್ನು ಬೇರೆಯವರಿಗೆ ಹಂಚಬೇಕಲ್ಲಾ. ಈ ಕ್ವಾಲಿಟಿ ಬಿಫೋರ್ ಲಾ. ಕರ್ನಾಟಕದ ಜನರೂ ಸಹ ಇದೇ ತರಹದ ಸಿದ್ಧಾಂತದ ಮೇಲೆ ದೇ ಆರ್ ಆಲ್ ಈಕ್ವಲ್ ಬಿಫೋರ್ ದಿ ಲಾ. ಈ ಕಾನೂನು ತರಲು ಹೊರಟಿರುವ ಸರ್ಕಾರಕ್ಕೆ ಹೇಳುತ್ತಿದ್ದೇನೆ: ಇದೊಂದಕ್ಕೆ ತಂದಿದ್ದೀರಲ್ಲಾ, ಇದೇ ಸಿದ್ಧಾಂತವನ್ನು ಇನ್ನಿತರ ಕೇಸುಗಳಿಗೂ ಆಳವಡಿಸಬೇಕೆನ್ನುವುದಕ್ಕೆ ಪೂರ್ವಭಾವಿಯಾಗಿ ತಮಗೊಂದು ಎಚ್ಚರಿಕೆಯಾಗಿ ಇದನ್ನು ಹೇಳುತ್ತಿದ್ದೇನೆ. ಮಾನ್ಯ ವೀರಪ್ಪಮೊಯ್ಲಿಯವರು ಆಗಲೇ ಹೇಳಿರುವಂತೆ ಈ ವಿಧೇಯಕಕ್ಕೆ ತಿದ್ದುಪಡಿ ತರಲು ಏನು ಉದ್ದೇಶಿಸಿದ್ದೀರಿ, ಇದನ್ನು ದುರ್ಬಳಕೆ ಮಾಡುವುದಕ್ಕೆ ಸಾಕಷ್ಟು ಅವಕಾಶಗಳಿವೆ. ನಿಮ್ಮ ಉದ್ದೇಶವಾದರೂ ಏನು? ನ್ಯಾಯಯುತವಾಗಿರುವ ಜನರಿಗೆ ಇದನ್ನು ಕೊಡಬೇಕೆನ್ನುವುದು. ಈಗ ನಾವು ಭೂ ಸುಧಾರಣೆ ಕಾನೂನನ್ನು ತಂದಿದ್ದು, ಅದರಲ್ಲಿ ಯಾರ್‍ಯಾರಿಗೆ ಎಷ್ಟೆಷ್ಟು ಭೂಮಿಯನ್ನು ಕೊಡಬೇಕೆಂದು ಹೇಳಲಾಗಿದೆ ತಾನೇ? ಬಗರ್‌ಹುಕುಂ ಸಾಗುವಳಿಯನ್ನು ಮಂಜೂರು ಮಾಡುವುದಕ್ಕೆ ಆ ಕಾನೂನು ತಂದಿದ್ದು ತಾನೇ? ಆ ಕಾನೂನನ್ನು ಈ ಸದನದಲ್ಲಿಯೇ ಮಾಡಿದ್ದೇವೆ. ನೀನು ಇರುವ ಭೂಮಿ ಮತ್ತು ನಾವು ಕೊಡುವುದು, ಎರಡೂ ಸೇರಿದರೆ ಎರಡು ಹೆಕ್ಟೇರ್‌ಗಿಂತ ಜಾಸ್ತಿಯಾಗಬಾರದೆಂದು ಅದರಲ್ಲಿ ಹೇಳಿದ್ದೇವೋ ಅಥವಾ ಇಲ್ಲವೋ? ಅದಕ್ಕೋಸ್ಕರ ಒಂದು ಕಾನೂನು ಮಾಡಿದ್ದೇವೆ. ನಮ್ಮ ಸ್ನೇಹಿತರು ಹೇಳುತ್ತಾರೆ. ಅವರು ಶಾಸಕರಾಗಿದ್ದಾರೆ, ಹೇಳುತ್ತಿದ್ದಾರೆ. ಇದರಲ್ಲಿ ಏನು ಹೇಳಿದ್ದೀರೆಂದರೆ, ಎಷ್ಟು ಸುಲಭವಾಗಿ ದುರುಪಯೋಗಪಡಿಸಿಕೊಳ್ಳುವುದಕ್ಕೆ ವೈಡ್ ಓಪನ್ ಎಂದು ಹೇಳುತ್ತಾರಲ್ಲಾ, ಅಷ್ಟಿದೆ. ಅದು ಹೇಗೆಂದರೆ in sub clause (1)

(i) The structure or building was in existence on such land prior to such date as may be prescribed. 'on such date'

ಎಂದು ಹೇಳಿದರೆ ಇದರಲ್ಲಿ ಬಾರ್ಗೈನ್ ನಡೆಯುವುದಿಲ್ಲವೇ? ಬಾರ್ಗೈನ್ ನಡೆಯುವುದಕ್ಕೆ ಅವಕಾಶವಿಲ್ಲವೇ? ವ್ಯವಹಾರ ಮಾಡುವುದಕ್ಕೆ ಅವಕಾಶವಿಲ್ಲವೇ? ನೀವು ಮಾಡುವುದಕ್ಕಾಗುತ್ತದೆಯೇ? ನೀವು ಹೋಗಿ ಎಲ್ಲವನ್ನೂ ನೋಡಿಕೊಂಡು ಬರುತ್ತೀರಾ? ಎಷ್ಟು ಈ ತರಹವಿದೆ, ಯಾವ ತಾರೀಖಿನಿಂದ ಅನ್ವಯಿಸಿದರೆ ಯಾರಿಗೆ ಅನುಕೂಲವಾಗುತ್ತದೆಂಬುದನ್ನೆಲ್ಲಾ ನೀವು ನೋಡುವುದಕ್ಕಾಗುತ್ತದೆಯೇ? ಏನೋ ಬಂದು ಹೇಳುತ್ತಾರೆ, ಜನವರಿ ಒಂದನೇ ತಾರೀಖು ಎಂದು ಒಬ್ಬ ಹೇಳುತ್ತಾನೆ, ಇನ್ನೊಬ್ಬರು ಅಕ್ಟೋಬರ್ ಎರಡನೇ ತಾರೀಖು ಎಂದು ಹೇಳುತ್ತಾರೆ, ಏನಾದರೂ ಇರುತ್ತದಲ್ಲಾ. ನೀವು ಮಾಡಿರುವ ಸರ್ವೆ ಪ್ರಕಾರ ಈಕ್ವಿಟಬಲ್ ಜಸ್ಟೀಸ್ ಅನ್ನು ಜನರಿಗೆ ಕೊಡಬೇಕೆನ್ನುವ ಬದ್ಧತೆ ನಿಮ್ಮದಾಗಿದ್ದರೆ Come out, spell out ಈ ತಾರೀಖಿನವರೆಗೆ ಯಾರ್‍ಯಾರು ಮಾಡಿಕೊಂಡಿದ್ದಾರೋ ಅವರಿಗೆ ಇಷ್ಟಿಷ್ಟು ಜಾಗ ಕೊಡುತ್ತೇವೆಂದು ಹೇಳಲಿ.

ಶ್ರೀ ಜೆ. ಸಿ. ಮಾಧುಸ್ವಾಮಿ: 'ದಿ ಇನ್‌ಸೈಡರ್' ಎನ್ನುವ ಪುಸ್ತಕದಲ್ಲಿ ಪಿ.ವಿ. ನರಸಿಂಹರಾವ್‌ರವರು ಬಹಳ ಚೆನ್ನಾಗಿ ಬರೆದಿದ್ದಾರೆ. ಲ್ಯಾಂಡ್ ಸೀಲಿಂಗ್ ಅನ್ನು ನಾಳೆಯಿಂದಲೇ ಫೋರ್ಸ್‌ಗೆ ತರುತ್ತೇವೆಂದಾಗ ಆಂಧ್ರಪ್ರದೇಶದ ಕೋರ್ಟುಗಳಲ್ಲಿ ಡೈವೋರ್ಸ್ ಕೇಸುಗಳು ಮೌಂಟ್ ಆದುವಂತೆ, ಗಂಡ-ಹೆಂಡತಿಯರಿಗೆ

ರೆಟ್ರಾಸ್ಪೆಕ್ಟೀವ್ ಆಗಿ ಜಾರಿಗೆ ಕೊಡುತ್ತೇವೆಂದು ಅವರು ಹೇಳಿದರು. ನಿಮಗೆ ಈ ಕನಸರ್ನ್ ಆದರೂ ಇದೆಯೇ? ತಾತ್ಕಾಲಿಕ ಶೆಡ್ ಹಾಕಿಕೊಂಡರೆ ಅದನ್ನು ಆತನ ಸ್ವಂತಕ್ಕೆ ವಾಪಸ್ಸು ಕೊಡುತ್ತೇವೆನ್ನುವ ಸ್ಥಿತಿಗೆ ಕಾನೂನು ಮಾಡುವುದಕ್ಕಾಗುತ್ತದೆಯೇ? ಅಕ್ವಿಜಿಷನ್ ಪ್ರಾರಂಭವಾಗಿದ್ದು, ನಾಳೆ ಜನರು ಪ್ರಾರಂಭಿಸುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಇದರಲ್ಲಿ ವ್ಯವಹಾರ ಮಾಡುವುದಕ್ಕೆ ವೈಡ್ ಸ್ಕೋಪ್ ಇದೆ. ಸ್ವಾಭಾವಿಕವಾಗಿ ಆರುತಿಂಗಳು ಕಳೆದರೆ ಚುನಾವಣೆ ಬರುತ್ತದೆ. ಚುನಾವಣೆ ಬರುತ್ತಿರುವ ಹಿನ್ನಲೆಯಲ್ಲಿ ಈ ಕಾನೂನನ್ನು ತರುತ್ತಿರುವ ಉದ್ದೇಶವಾದರೂ ಏನು? ಇಂತಹ ಒಂದು ವೈಡ್ ಸ್ಕೋಪ್ ಇಟ್ಟುಕೊಂಡಿರುವಾಗ ಇಂಟರ್‌ಪ್ರಿಟ್ ಮಾಡುವುದಕ್ಕಾಗುತ್ತದೆಯೇ? ಇದು ತುಂಬ ಸುಲಭ. ಇವೊತ್ತು ಬಗರ್‌ಹುಕುಂ ಸಾಗುವಳಿಯನ್ನು ಲ್ಯಾಂಡ್ ರೆವಿನ್ಯೂ ಆಕ್ಟ್‌ನಲ್ಲಿ ಮಂಜೂರು ಮಾಡುತ್ತಿರುವಾಗ ಕಟ್ ಆಫ್ ಡೇಟನ್ನು ಫಿಕ್ಸ್ ಮಾಡಲಾಗಿದೆ. prior to that ಯಾವುದೇ ಒಂದು ತಾರೀಖು ಇತ್ತೆಂದು ಹೇಳಲಾಗಿದೆ. ಅದು ಈ ಲೆಜಿಸ್ಲೇಚರ್ಸ್‌ಗೆ ಗೊತ್ತಾಗಬೇಕಲ್ಲಾ. ಈ ರಾಜೀಸೂತ್ರದಲ್ಲಿ ಯಾರ್‍ಯಾರ ಮಾತು ನಡೆಯುತ್ತದೆ? ನೀವು ಇರುತ್ತೀರಾ? ನೀವು ಹೇಳುವುದಿಲ್ಲ. ಯಾರು ಇದನ್ನು ಬಳಸಿಕೊಳ್ಳಬೇಕೋ ಬಳಸಿಕೊಳ್ಳುತ್ತಾರೆ, ಅನುಕೂಲವಾಗುವ ರೀತಿಯಲ್ಲಿ ಲಾಭ ಮಾಡಿಕೊಳ್ಳುತ್ತಾರೆ. ಅವರಿಗೆ ಅನುಕೂಲವಾದ ದಿನಾಂಕವನ್ನು ನಿಗದಿಪಡಿಸಿ ನೀವು ಇಲ್ಲಿ ಏಕೆ ತರಲಿಲ್ಲ? ಬಿ.ಡಿ.ಎ. ನಲ್ಲಿ ಬೇರೆ ಸಂಸ್ಥೆಯಲ್ಲಿ ಎಲ್ಲಿಯೋ ನಡೆದಿತ್ತಲ್ಲಾ ಯಾವುದೋ ಐದು ವರ್ಷದ್ದು, ನಿನ್ನೆಯಿಂದಲೋ, ಮೊನ್ನೆಯಿಂದಲೋ ಯಾವುದೋ ಒಂದು ನಿರ್ದಿಷ್ಟ ದಿನಾಂಕ ತಂದಿದ್ದರೆ ಆಗ ನಿಮ್ಮ ಉದ್ದೇಶದಲ್ಲಿನ ಪ್ರಾಮಾಣಿಕತನವನ್ನು ನಾವು ಮೆಚ್ಚಿಕೊಳ್ಳುತ್ತಿದ್ದೆವು. ಇಂತಹ ಕೆಲವು ಇವೆ. ಮಾನ್ಯ ಹಿರಿಯ ಸದಸ್ಯರಾದ ನಂಜೇಗೌಡರು ಹೇಳಿರುವ ರೀತಿಯಲ್ಲಿ ಬಡವರಿಗೆ ಅನ್ಯಾಯವಾಗಿರುವುದರಿಂದ ಮಾಡಬೇಕೆಂಬ ಉದ್ದೇಶವಿದೆಯೆಂಬುದು. ಆದರೆ, ಅವರು ಹೇಳುವುದೇನೆಂದರೆ, ನಿರ್ದಿಷ್ಟವಾದ ವ್ಯಕ್ತಿಗಳಿರುವುದರಿಂದ ನ್ಯಾಯ ಯಾವ ರೀತಿ ಕೊಡಬೇಕೆಂಬುದು. ಅವರಿಂದ ಎಷ್ಟು ಭೂಮಿ ತೆಗೆದುಕೊಳ್ಳಲಾಗಿದೆಯೋ ಅದನ್ನೆಲ್ಲವನ್ನೂ ಕೊಡಬೇಕೆಂದು ಈಗ ಅವರು ಹೇಳುತ್ತಾರೆಯೇ? ಅವರು ಮನೆ ಕಟ್ಟಿಕೊಂಡು ವಾಸಿಸುವುದಕ್ಕೆ ಅಷ್ಟಾದರೂ ಉಳಿಯಬೇಕೆಂದು ಹೇಳುತ್ತೇವೆ. ಆದರೆ, ಉಳಿಸುವುದಕ್ಕೆ ಇಲ್ಲಿ ಏನಾದರೂ ಇದೆಯೇ? ನಾವೇನು ತಿಳಿದುಕೊಳ್ಳಬೇಕು? ನಮ್ಮನ್ನೇಕೆ ಗೊಂದಲಕ್ಕೆ ಸಿಲುಕಿಸುತ್ತೀರಿ? ಕತ್ತಲಿಗೇಕೆ ತಳ್ಳುತ್ತೀರಿ? ಶಾಸಕರನ್ನು ಶಾಸನಸಭೆಯನ್ನು ಕತ್ತಲಿಗೆ ತಳ್ಳಿ ನಿಮಗೆ ಬೇಕಾದ ರೀತಿಯಲ್ಲಿ ಕಾರ್ಯರೂಪಕ್ಕೆ ತರುವುದಾದರೆ ಅದನ್ನು ಇಲ್ಲಿಗೇಕೆ ತರಬೇಕಾಗಿತ್ತು? ನೀವು ನ್ಯಾಯ ಮಾಡುವುದಕ್ಕೆ ಹೊರಟಾಗ ಈ ಶಾಸನಸಭೆಯೂ ಕೂಡ ಆ ಜನರಿಗೆ ನ್ಯಾಯ ಮಾಡುತ್ತದೆನ್ನುವುದು ಗೊತ್ತಾಗಬೇಕಲ್ಲಾ. ಅದರಲ್ಲೇಕೆ ಮುಚ್ಚುಮರೆ ಮಾಡುತ್ತೀರಿ? ಮಾನ್ಯ ವೀರಪ್ಪ ಮೊಯ್ಲಿಯವರು ಈಗಾಗಲೇ ಹೇಳಿದ್ದಾರೆ. Statement of objections and reasons ಎಂದು ಹೇಳಿದ್ದೀರಲ್ಲಾ, ಇದರ ಪ್ರಕಾರ ಇವೊತ್ತು ಗುಡಿಸಲು ಹಾಕಿದವರಿಗೂ ಕೂಡ ನೀವು ಕೊಡಬೇಕಾಗುತ್ತದೆ. ಏಕೆಂದರೆ, ನಿಮ್ಮ ಬಳಿ ದಾಖಲೆಯೇ ಇಲ್ಲ, ಎಲ್ಲಿದೆ? ಈ ಕಾನೂನಿನಲ್ಲಿಯೂ ಇಲ್ಲ ಇದರಲ್ಲಿ ಏನು ಹೇಳುತ್ತಾರೆಂದರೆ.

"..the structure or building was in existence on such land prior to such date as may be prescribed or such original owner or other person has

been in occupation of the land since prior to prescribed date and has continued to be in occupation of the land as on the date of commencement of the Bangalore Development Authority (Amendment) Act, 1999.."

ಅಂದರೆ, ಈ ಆಕ್ಟ್ ಇವೊತ್ತಿನಿಂದಲೇ ಜಾರಿಗೆ ಬರುವುದಿಲ್ಲ. ಗವರ್ನರ್ ಹತ್ತಿರ ಹೋಗಿ ಅವರಿಂದ ನೋಟಿಫಿಕೇಷನ್ ಆಗಬೇಕು. ನೋಟಿಫಿಕೇಷನ್ ಆದನಂತರ ಅಂದಿನಿಂದ ಎಫೆಕ್ಟ್‌ಗೆ ಬರುತ್ತದೆ. ಅಲ್ಲದೆ ರೂಲ್ಸ್ ಬೇರೆ ಆಗಬೇಕು. ರೂಲ್ಸ್ ಮಾಡದೆ ಹಾಗೆಯೇ ಕಾನೂನನ್ನು ತರುವುದಕ್ಕಾಗುವುದಿಲ್ಲ. ಆದುದರಿಂದ, ಡ್ರಾಫ್ಟ್ ರೂಲ್ಸ್ ಅನ್ನು ಪಬ್ಲಿಷ್ ಮಾಡಬೇಕು. ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಷನ್ಸ್ ಕರೆಯಬೇಕು. ಆನಂತರ ಫೈನಲ್ ಆಗಿ ಅದನ್ನು ಪಬ್ಲಿಷ್ ಮಾಡಬೇಕು. That itself will take not less than six months.

ಮೂರು ತಿಂಗಳೊಳಗೆ ನಿಯಮಾವಳಿ ಮಾಡಿ ಫೈನಲ್ ನೋಟಿಫಿಕೇಷನ್ ಮಾಡಿರುವುದನ್ನು ನಾವು ಇವೊತ್ತಿನವರೆಗೂ ಈ ಸರ್ಕಾರದಲ್ಲಿ ನೋಡಿಲ್ಲ. ಏಕೆಂದರೆ ನಿಮ್ಮ ಇಲಾಖೆಯವರು ಮತ್ತು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಸಭೆ ಸೇರಿ ಇದರ ಬಗ್ಗೆ ತೀರ್ಮಾನ ಮಾಡುವುದಕ್ಕೆ ಮೂರು ತಿಂಗಳು ಕಾಲಾವಕಾಶ ಬೇಕಾಗುತ್ತದೆ. ಇದುವರೆವಿಗೂ ಡ್ರಾಫ್ಟ್ ರೂಲ್ಸ್ ಆಗಿಲ್ಲ. ಇದನ್ನು ಮಾಡುವುದಕ್ಕೆ ಕನಿಷ್ಠ ಆರು ತಿಂಗಳು ಬೇಕಾಗುತ್ತದೆ. ಆಗ ಕರಾರುವಕ್ಕಾಗಿ ನೀವು ಚುನಾವಣಾ ಸಮಯದ ಹತ್ತಿರಕ್ಕೆ ಬಂದಿರುತ್ತೀರಿ, ಅಷ್ಟೊತ್ತಿಗೆ ಗೈಡ್‌ಲೈನ್ಸ್ ಬಂದಿರುತ್ತದೆ. ಆದುದರಿಂದ ಇಂತಹ ಅನುಮಾನಕ್ಕೆ ಮತ್ತು ಅವಕಾಶ ಸಿಕ್ಕಿದರೆ ಇದರ ದುರುಪಯೋಗ ಮಾಡಿಕೊಳ್ಳುವುದಕ್ಕೆ ಇದು ಅನುಕೂಲವಾದ ಕಾನೂನಾಗಿದೆ.

ಬೆಂಗಳೂರನ್ನು ಪ್ರತಿನಿಧಿಸುವ ಅನೇಕ ಜನ ಮಾನ್ಯ ಹಿರಿಯ ಸದಸ್ಯ ಸ್ನೇಹಿತರು ಇರುವುದರಿಂದ ಇಂತಹ ವಿಚಾರ ಬಂದಾಗ ವಿರೋಧ ಪಕ್ಷದ ನಾಯಕರುಗಳೆಲ್ಲರನ್ನೂ ಕರೆದು ಸಮಾಲೋಚನೆ ಮಾಡಿದ ನಂತರವೇ ಸದನದಲ್ಲಿ ಇದನ್ನು ತರಬೇಕು. ಇದು ನಮ್ಮ ಶಾಸಕರ ಅಥವಾ ಯಾವುದೋ ಒಂದು ಹಳ್ಳಿಯ, ಊರಿನ ಪ್ರಶ್ನೆಯಲ್ಲ. ಇವೊತ್ತು ಬೆಂಗಳೂರಿನಲ್ಲಿ ಭೂಮಿಯ ಬೆಲೆ ಆಕಾಶಕ್ಕೇರಿದೆ. ಚಿನ್ನವಾದರೂ ಹಣವನ್ನು ಕೊಟ್ಟರೆ ಸಿಗುತ್ತದೆ, ಆದರೆ ಬೆಂಗಳೂರಿನಲ್ಲಿ ಹಣವನ್ನು ಕೊಡುತ್ತೇವೆಂದರೂ ಭೂಮಿ ಸಿಗುವುದಿಲ್ಲ. ಅಷ್ಟೊಂದು ಬೆಲೆ ಭೂಮಿಗೆ ಬಂದುಬಿಟ್ಟಿದೆ. ಅವತ್ತು ಚಿನ್ನಕೊಟ್ಟು ಭೂಮಿ ಕೊಂಡುಕೊಂಡಿದ್ದವನು ಇಂದು ಬೀದಿಗೆ ಬಂದಿದ್ದಾನೆ. ಏಕೆಂದರೆ ಅವನು ಕೋರ್ಟಿಗೆ ಹೋಗಲಿಲ್ಲ, ತಡೆಯಾಜ್ಞೆ ತರಲಿಲ್ಲ, ಒಂದಲ್ಲ ಒಂದು ರೀತಿ ಕಾನೂನಿನ ಕಗ್ಗಂಟನ್ನು ಉಂಟುಮಾಡಲಿಲ್ಲ. ಅವರನ್ನೆಲ್ಲಾ ಇವತ್ತು ಹೊತ್ತುಹಾಕಿದ್ದಾರೆ. ಜಯನಗರ ಮತ್ತು ಬೇರೆ ಬೇರೆ ಕಡೆ ನೂರು, ಇನ್ನೂರು ಎಕರೆ ಜಮೀನು ಇದ್ದವರು ಇದ್ದರು. ಆವಾಗ ಗಲಾಟೆ ಮಾಡಿ, ಹೆದರಿಸಿಕೊಂಡು ಏನೆಲ್ಲಾ ಮಾಡಿ ಟ್ರಸ್ಟಿನ ಹೆಸರಿನಲ್ಲಿ, ಚಾರಿಟಿಯ ಹೆಸರಿನಲ್ಲಿ, ಬೇರೆ ಬೇರೆಯ ಹೆಸರಿನಲ್ಲಿ ಅಷ್ಟು ಇಷ್ಟು ಭೂಮಿಯನ್ನು ಉಳಿಸಿಕೊಂಡು ಇವತ್ತು ಕೋಟ್ಯಾಧಿಪತಿಗಳಾಗಿದ್ದಾರೆ. ಏನೂ ಬಾರದ ಶಾನುಭೋಗರನ್ನು ಅವಲಂಬಿಸಿದ್ದರಲ್ಲಾ ಅಂಥ ದಡ್ಡರುಗಳೇನಿದ್ದರು ಅಂಥವರ ಭೂಮಿಯನ್ನೆಲ್ಲಾ ಇವರು ಸ್ವಾಧೀನ ಪಡಿಸಿಕೊಂಡು ಬಿಟ್ಟರು. ಅವರುಗಳು ತೆಗೆದುಕೊಂಡಿದ್ದ ಹತ್ತು, ಇಪ್ಪತ್ತು ಸಾವಿರ

ಹಣವನ್ನು ಕಳೆದುಕೊಂಡು ಭೂಮಿಯನ್ನೂ ಸಹ ಕಳೆದುಕೊಂಡು ಇವತ್ತು ಅವರುಗಳು ಮಂಗನಂತೆ ಕಿರಿಯುತ್ತಾ ಕುಳಿತಿದ್ದಾರೆ. ಆ ರೀತಿ ನಷ್ಟಹೊಂದಿರುವವರಿಗೆ ಇದರಿಂದ ಏನಾದರೂ ಪ್ರಯೋಜನವಾಗುತ್ತದೆಯೇ? ಅಲ್ಲಿ ಪಾಪ ಯಾರೋ ಬಡವರು ವಾಸವಾಗಿದ್ದಾರೆ, ಅದು ಮಾನ್ಯ ನಂಜೇಗೌಡರ ಕಣ್ಣಿಗೆ ಬಿದ್ದು ಅವರು ಇಲ್ಲಿ ಅದರ ಬಗ್ಗೆ ಪ್ರಸ್ತಾಪ ಮಾಡಲು ಸಂದರ್ಭ ಸಿಕ್ಕಿದೆ ಅವರು ಹೇಳಿದ್ದಾರೆ.

ಶ್ರೀ ಜಿ. ಸಿ. ಮಾಧುಸ್ವಾಮಿ : ಮಾನ್ಯ ನಂಜೇಗೌಡರು ಹೇಳಿದಂತೆ ಇವರು ನೇರವಾಗಿ ಭೂಮಿಯ ಮಾಲೀಕರಿಗೆ ಒಂದು, ಎರಡು ನಿವೇಶನವನ್ನು ಬಿಡುತ್ತೇವೆ ಆನಂತರ ಸ್ವಾಧೀನ ಮಾಡತ್ತೇವೆಂದು ತಿದ್ದುಪಡಿ ಮಾಡಿದರೆ ಒಪ್ಪಿಕೊಳ್ಳೋಣ. ಆದರೆ ಇವರೇನು ಕೆಟ್ಟ ಕಾನೂನನ್ನು ಮುಂದಿಟ್ಟು ಬೇರೆ ಏನೋ ಕಾರಣವನ್ನು ಕೊಡುವುದು ಸರಿಯಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ತಾವು ಭೂಮಿಯ ಮಾಲೀಕರು ಎಂದು ಹೇಳಿದ್ದೀರಿ 'Owner means one whose name has to find place in the preliminary notification.

ಸ್ವಾಧೀನಪಡಿಸಿಕೊಂಡಿರುವ ಜಮೀನು ಇದ್ದು. ಹಾಗೆಯೇ ತೆಗೆದುಕೊಂಡಿರುವುದಲ್ಲ. ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳಬೇಕಾದರೆ ಲ್ಯಾಂಡ್ ರಿಜಿಸ್ಟ್ರೇಷನ್ ಆಕ್ಟ್‌ನ ಪ್ರಕಾರ ಪ್ರಿಲಿಮಿನರಿ ನೋಟಿಫಿಕೇಷನ್ ಮಾಡಬೇಕಾಗುತ್ತದೆ. ಅದರಲ್ಲಿ occupantsನ ಪಟ್ಟಿ ಇರುತ್ತದೆ. ಅದನ್ನು ಖಾತೆದಾರರ ಹೆಸರಿಗೆ ಹಾಕಿರುತ್ತಾರೆ ಎಂದು ಅದರಲ್ಲಿ ಇದೆ. ಆ ನೋಟಿಫಿಕೇಷನ್‌ನಲ್ಲಿ ಯಾರು ಇರುತ್ತಾರೆ ಯಾರಿಗೆ ತಾವು ಅವಾರ್ಡ್‌ನ್ನುಕೊಟ್ಟಿರುತ್ತೀರಲ್ಲಾ in whose name award has been pased, and who has taken award money ಅವನನ್ನು ಓನರ್ ಎಂದು ಪರಿಗಣನೆ ಮಾಡಿ. ಅವನಿಗೆ ಕೊಡುವಾಗ ಒಂದು ಏರಿಯಾವನ್ನು ಹಾಕಿಸಿ including structure 60x40 ಕೊಡುತ್ತೀರೋ, 60x80 ಕೊಡುತ್ತೀರೋ it is the wisdom of the House ತಾವು ಹೇಗಾದರೂ ಹಾಕಿ. Owner means, he is a owner, his name should have found a place in preliminary notification and in whose name Award has been passed and money has been taken ಎಂದು you can prescribe it. ರೀಜನಬಲ್ ಆಗಿ ಮಾಡಿ. ಅದು ಯಾರು ಬೇಕಾದರೂ ಆಗಿರಬಹುದು. ಅವನಿಗೂ ಸಹ ಇಂಟ್ರೆಸ್ಟೆಡ್ ಪರ್ಸನ್ ಎಂದು ಆ ಅವಾರ್ಡ್‌ನಲ್ಲಿ ಹಣ ಕೊಡಲಾಗುತ್ತದೆ. Because even tenant also has got an interest in land and he is entitled to get compensation and such persons have been considered and award money has been given ಇದನ್ನು ತಾವು ಮಾಡಬೇಕು. ಈ ಇಲಾಖೆಗೆ ಹೊಸ ಸಚಿವರನ್ನು ಹಾಕಿದ್ದಾರೆ. ಏಕೆಂದರೆ ಮಾನ್ಯ ಜೆ. ಹೆಚ್. ಪಟೇಲರೇನು ಇದರ ಬಗ್ಗೆ ನೋಡಲು ಹೋಗುವುದಿಲ್ಲ. ಅವರು ಹುಲಿಯಂತೆ ಮಲಗಿ ಬಿಡುತ್ತಾರೆ. ಯಾವಾಗ ಏಳುತ್ತದೋ ಯಾವಾಗ ಹೊರಡುತ್ತದೋ ಗೊತ್ತಾಗುವುದಿಲ್ಲ. ಎದ್ದ ಕೂಡಲೇ ಇಲ್ಲಿಗೆ ಬರುವುದು ಒಂದು ಕತೆ ಹೇಳುವುದು ನಂತರ ಹೊರಟು ಹೋಗುವುದು. ಹಿಂದೆ ಇದ್ದ ಮಂತ್ರಿಗಳು ಯಾರಿದ್ದರು ಅವರು, ಇವರು ಎಲ್ಲಿಗೆ ಹೋಗಲಿ ಅಲ್ಲಿಗೆ ಕೆಲಸವಿಲ್ಲದಿದ್ದರೂ ಹೋಗುತ್ತಿದ್ದರು ಮಲಗಿದವರಿಗೆ ಮಿಯಾಂವ್

ಮಿಯಾಂವ್ ಎಂದೂ ಕೂಗಿ ಎಬ್ಬಿಸಲು ಅವರು ಹೋಗುತ್ತಿದ್ದರು. ಈಗ ಅವರನ್ನು ತೆಗೆದು ನಿಮಗೆ ಹಾಕಿದ್ದಾರೆ. ಜೈಲ್‌ನ ಸಚಿವರಾಗಿದ್ದ ಸೋಮಣ್ಣನವರನ್ನು ಬೆಂಗಳೂರು ಅಭಿವೃದ್ಧಿ ಸಚಿವರನ್ನಾಗಿ ಮಾಡಿದ್ದಾರೆ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ಅಂಥ ಹುಲಿಗಳ ಮಧ್ಯೆ ಇಂಥ ಗುಳ್ಳೆ ನರಿಗಳ ಕೆಲಸವಾಗಬಾರದು ಎಂದು ತಮ್ಮ ಅಭಿಪ್ರಾಯವೇ?

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಹಾಗೂ ಸಂಸಧೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ನಾನು ಈ ತಿದ್ದುಪಡಿಯನ್ನು ತರುತ್ತಿರುವ ಸಂದರ್ಭದಲ್ಲಿ, ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಇತ್ತೀಚೆಗೆ ನಾನ್ ಅಫಿಷಿಯಲ್ ಛೇರ್ಮನ್ ಒಬ್ಬರನ್ನು ಮಾಡಿದ್ದೇವೆ. ಅದಕ್ಕೂ ಮೊದಲು ನಮ್ಮ ಅಧಿಕಾರಿಗಳೇ ಛೇರ್ಮನ್ ಆಗಿದ್ದರು. ಅವರು ಸರ್ಕಾರಕ್ಕೆ ಎರಡು ಸಲ ಪತ್ರವನ್ನು ಬರೆದಿದ್ದರು. ಬೆಂಗಳೂರು ನಗರದ ಒಳಗಡೆ ಹಲವಾರು ಬಡಾವಣೆಗಳು ಇವೆ. ಈ ಹಿಂದೆ ಬಿ. ಡಿ. ಎ. ನವರು ಭೂಮಿಯನ್ನು ಸ್ವಾಧೀನ ಮಾಡಿಕೊಂಡು ಹತ್ತಾರು ವರ್ಷಗಳಿಂದ ಆ ಜಮೀನುಗಳಿಗೆ ನಾವು ಕಾಲು ಹಾಕಲು ಹೋಗಲಿಕ್ಕೆ ಆಗಲಿಲ್ಲ. ಹಲವಾರು ಕಡೆ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳುವಾಗಲೇ ಕಟ್ಟಡಗಳು ಇದ್ದು; ಭೂಸ್ವಾಧೀನ ಮಾಡಿಕೊಂಡ ಮೇಲೆ ಕೆಲವು ಜನರು ರಾಜ್ಯ ಉಚ್ಚ ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆಯನ್ನು ತಂದರು. ಕೆಲವು ಸಂದರ್ಭಗಳಲ್ಲಿ ಸಿವಿಲ್ ನ್ಯಾಯಾಲಯಕ್ಕೆ ಹೋಗಿ ಅಲ್ಲೂ ತಡೆಯಾಜ್ಞೆಯನ್ನು ತಂದರು. ಈ ರೀತಿ ತಡೆಯಾಜ್ಞೆ ತಂದಂಥ ಸಂದರ್ಭದಲ್ಲಿ ಸಹ ಅಲ್ಲಿ ಇಲ್ಲಿ ಕೆಲವು ಕಟ್ಟಡಗಳು ಬಂದವು. ಆದ್ದರಿಂದ ಬಿ. ಡಿ. ಎ. ನವರು ಯಾವ ಜಮೀನನ್ನು ಸ್ವಾಧೀನ ಮಾಡಿಕೊಂಡು ಅಲ್ಲಿ ಮನೆಗಳನ್ನು ಕಟ್ಟಿ ಸಾರ್ವಜನಿಕರಿಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದೆವೋ ಅಲ್ಲಿ ಈ ರೀತಿ ಕಟ್ಟಡಗಳನ್ನು ಸಂಪೂರ್ಣವಾಗಿ ಕಟ್ಟಿರುವ ಸಂದರ್ಭದಲ್ಲಿ ಬಿ. ಡಿ. ಎ. ನವರಿಗೆ ಅವರ ಯೋಜನೆಯ ಅಡಿಯಲ್ಲಿ ಈ ರೀತಿಯ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ಆಗಲಿಲ್ಲ. ಆದ್ದರಿಂದ ದಯಮಾಡಿ ಇದರ ಬಗ್ಗೆ ಕ್ರಮ ತೆಗೆದುಕೊಂಡು ಇದಕ್ಕೆ ತಿದ್ದುಪಡಿಯನ್ನು ತರಬೇಕೆಂದು ಏಳು ಎಂಟು ತಿಂಗಳ ಹಿಂದೆ ಬಿ. ಡಿ. ಎ. ಆಯುಕ್ತರು ಮತ್ತು ಅಧ್ಯಕ್ಷರಿಂದ ಸರ್ಕಾರಕ್ಕೆ ಮನವಿ ಪತ್ರ ಬಂದಿತ್ತು. ಆ ಸಂದರ್ಭದಲ್ಲಿ ಸರ್ಕಾರ ಅದರ ಬಗ್ಗೆ ಗಮನ ಹರಿಸಿಲ್ಲ. ಇನ್ನು ಹಲವಾರು ಸಂದರ್ಭದಲ್ಲಿ ಸರ್ಕಾರಕ್ಕೆ ಬೇಕಾದಷ್ಟು ಮನವಿಯನ್ನು ಮಾಡಿದರು. ಆ ಸಂದರ್ಭದಲ್ಲಿ ಇಲ್ಲಿ ಈ ರೀತಿ ಬೇಕಾದಷ್ಟು ಮನೆಗಳು ಈಗಾಗಲೇ ಬಂದಿವೆ. ಬೆಂಗಳೂರು ನಗರದ ಒಳಗಡೆ ಬಿ. ಡಿ. ಎ. ಯ ಕಾಂಪ್ರಹೆನ್‌ಸೀವ್ ಡೆವಲೆಪ್‌ಮೆಂಟ್ ಪ್ಲಾನ್ ಯಾವುದು ಇದೆ ಅದನ್ನು ವಯಲೇಟ್ ಮಾಡಿ ಕಟ್ಟಡಗಳನ್ನು ನಿರ್ಮಾಣ ಮಾಡಿದ್ದರು. ಅದರ ಬಗ್ಗೆ ಸುಪ್ರೀಮ್ ಕೋರ್ಟ್‌ಗೆ, ಸಿವಿಲ್ ಕೋರ್ಟ್‌ಗೆ ಹೋದಮೇಲೆ ಇಂಥ ಕಟ್ಟಡಗಳನ್ನು ಡಿಮಾಲಿಶ್ ಮಾಡುವುದರಿಂದ ನ್ಯಾಷನಲ್ ವೇಸ್ಟ್ ಆಗುತ್ತದೆ. ಆದ್ದರಿಂದ ಇದನ್ನು ರೆಗ್ಯುಲರೈಸ್ ಮಾಡಿ ಫೆನಾಲ್ಟಿಯನ್ನು ವಸೂಲಿ ಮಾಡಿ ಎಂದು ನಮ್ಮ ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳು ತೀರ್ಪನ್ನು ಕೊಟ್ಟರು. ನಾವು ಅದರ ಬಗ್ಗೆ ಇದೇ ಸದನದಲ್ಲಿ ಒಂದು ತಿದ್ದುಪಡಿಯನ್ನು ತಂದು ಆ ಕಟ್ಟಡಗಳನ್ನು ರೆಗ್ಯುಲರೈಜೇಷನ್ ಮಾಡಲು ಕ್ರಮ ತೆಗೆದುಕೊಂಡಿದ್ದು ತಮಗೂ ಗೊತ್ತಿದೆ. ಇನ್ನು

ಅನೇಕ ಮಧ್ಯಮ ವರ್ಗದ ಜನರು ಬೆಂಗಳೂರಿನ ಒಳಗೆ ಫವರ್ ಆಫ್ ಅಟಾರ್ನಿಯನ್ನು ಮಾಡಿಸಿಕೊಂಡು ಹಲವಾರು ಜನರಿಂದ ನಿವೇಶನಗಳನ್ನು ತೆಗೆದುಕೊಂಡರು. ಅಲ್ಲೆಲ್ಲಾ ಮನೆಗಳನ್ನು ಕಟ್ಟಿದರು. ಇವತ್ತು ನಂದಿನಿ ಲೇಔಟ್‌ನಲ್ಲಿ ಈ ರೀತಿ ಎಲ್ಲರೂ ಮನೆಗಳನ್ನು ಕಟ್ಟಿದ್ದಾರೆ. ನಂತರ ಬಿ. ಡಿ. ಎ. ನವರು ಅದನ್ನು ಸ್ವಾಧೀನ ಪಡಿಸಿಕೊಳ್ಳುವ ಸಂದರ್ಭ ಬಂದಾಗ ಆ ನಿವೇಶನಗಳ ಮಾಲೀಕರಿಂದ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು ಉಪಯೋಗ ಮಾಡಿಕೊಳ್ಳಲು ಆಗದಂಥ ಪರಿಸ್ಥಿತಿ ಬಂತು. ಮತ್ತೊಂದು ಕಡೆ ಕಟ್ಟಿರುವ ಮನೆಗಳನ್ನು ಡೆಮಾಲಿಶ್ ಮಾಡಿ ಕ್ರಮ ತೆಗೆದುಕೊಳ್ಳಲು ಯಾವುದೇ ಸರ್ಕಾರಕ್ಕೆ ಆಗುವುದಿಲ್ಲ. ಇಂಥ ಸಂದರ್ಭ ಬಂದಾಗ ಇದಕ್ಕೆ ಒಂದು ತಿದ್ದುಪಡಿಯನ್ನು ಮಾಡಿ ಎಂದು ಬಿ. ಡಿ. ಎ. ಆಯುಕ್ತರಿಂದ ಮತ್ತು ಅಧ್ಯಕ್ಷರಿಂದ ಮನವಿಗಳು ಬಂತು. ಏಕೆಂದರೆ ಒಂದು ಸಲ ಜಮೀನನ್ನು ತೆಗೆದುಕೊಂಡ ಮೇಲೆ the land is already vested with the Government. ಅದನ್ನು ರೀಕನ್‌ವೇ ಮಾಡುವುದು ಹೇಗೆ ? ಅದನ್ನು 'ಡಿ' ನೋಟಿಫೈ ಮಾಡಲು ಆಗುವುದಿಲ್ಲ. No question of de-notification at all ಇದರಿಂದ ಬಿ. ಡಿ. ಎ. ಯ ಯೋಜನೆ ಯಾವುದು ಇದೆ ಅದನ್ನು ಜಾರಿಗೆ ತರಲು ಆಗುವುದಿಲ್ಲ. ಆದ್ದರಿಂದ ಈ ಜಮೀನನ್ನು ಯಾರಿಂದ ಸ್ವಾಧೀನ ಮಾಡಿಕೊಂಡಿದ್ದೇವೆ ಅವರಿಗೆ ವಾಪಸ್ ಕೊಡಬೇಕಾಗುತ್ತದೆ. ಆ ಸಂದರ್ಭದಲ್ಲಿ what is the price to be fixed ಎಂಬ ಪ್ರಶ್ನೆ ಬಂತು. ತಾವು ಈಗ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೀರಿ. ಅದರ ಬಗ್ಗೆ ನಾವು ಚರ್ಚೆಯನ್ನು ಮಾಡಿದ್ದೇವೆ. ಯಾವುದೇ ಸಂದರ್ಭದಲ್ಲಿ ಯಾವುದೇ ಡೇಟನ್ನು ಸರ್ಕಾರದವರು ಮನಸ್ಸಿಗೆ ಬಂದಂತೆ ಮಾಡಿಕೊಳ್ಳಬಹುದು ಎಂದು ಅವರು ಹೇಳಿದ್ದಾರೆ. ಆದರೆ ಮೂಲ ಉದ್ದೇಶವೇನೆಂದರೆ, ಮುಂದೆ ಬಿ. ಡಿ. ಎ. ನವರು ಯಾವುದಾದರೂ ಜಮೀನನ್ನು ಸ್ವಾಧೀನ ಮಾಡಿಕೊಂಡು ಅದರ ಯೋಜನೆಯನ್ನು ಜಾರಿಗೆ ತರಲು ಆಗದೆ ಇರುವಾಗ ಬಿ. ಡಿ. ಎ. ನವರು ಅಲ್ಲಿ ಹೋಗಿ ಸಭೆ ಮಾಡಬೇಕಾಗುತ್ತದೆ. ಜಮೀನನ್ನು ನೋಡಬೇಕಾಗುತ್ತದೆ. ಕಟ್ಟಡವನ್ನು ನೋಡಬೇಕಾಗುತ್ತದೆ. ಬಿ. ಡಿ. ಎ. ನವರು ಹತ್ತು ಇಪ್ಪತ್ತು ಎಕರೆ ಜಮೀನನ್ನು ಸ್ವಾಧೀನ ಮಾಡಿಕೊಂಡು ಅದರಲ್ಲಿ ಮುಕ್ಕಾಲು ಭಾಗದಲ್ಲಿ ಕಟ್ಟಡಗಳು ಇದ್ದರೆ ಬಾಕಿ ಇರುವ ಜಾಗ ಅಲ್ಲಿ ಇಲ್ಲಿ ಚದುರಿದ್ದರೆ ಯಾವ ಯೋಜನೆಯನ್ನು ಬಿ. ಡಿ. ಎ. ನಿಂದ ತರಲು ಸಾಧ್ಯವಾಗುತ್ತದೆ ಎಂಬ ಬಗ್ಗೆ ತಾವೇ ಹೇಳಿ ?

Sri Kagodu Thimmappa : You are referring to land proposed to be acquired in future. But here is a case where land is acquired and vested with the B.D.A.

SRI M. C. NANAIAH : If it is a case proposed to be acquired in future why should I brng a legislation here? ಪ್ರಪೋಸ್ಡ್ ಟುಬಿ ಅಕ್ವೈರ್ಡ್ ಎಂಬ ಪ್ರಶ್ನೆ ಇದ್ದರೆ ನಾನೇಕೆ ಇದಕ್ಕೆ ಲೆಜಿಸ್‌ಲೇಷನ್ ತರಲಿ ? I do not want to be smart Mr. Thimmappa, nor I do not want you to be smart. ಇಲ್ಲಿರುವುದು ಒಂದೇ ಪ್ರಶ್ನೆ. ಹತ್ತು ಹದಿನೈದು ವರ್ಷಗಳಿಂದ ಅಲ್ಲಲ್ಲಿ ಮನೆಯನ್ನು ಕಟ್ಟಿಕೊಂಡು ವಾಸ ಮಾಡುತ್ತಿರುವವರ ರಕ್ಷಣೆಯನ್ನು ಯಾವ ರೀತಿ ಮಾಡಬೇಕು ಎಂಬ ಒಂದೇ ಒಂದು ಸದುದ್ದೇಶ ಇದರಲ್ಲಿ ಇದೆಯೇ ಹೊರತು ಬೇರೆ ದುರುದ್ದೇಶ ಇಲ್ಲ. ಇವರು ಮೂಲಭೂತವಾಗಿ ಕೆಲವು ವಿಚಾರಗಳನ್ನು ಎತ್ತಿದ್ದಾರೆ. ಪ್ರೊಲೀರ್‌ಲೀಡರ್ಸ್‌ಗಳನ್ನು

ಕರೆದು ಇದರ ಬಗ್ಗೆ ಏಕೆ ಚರ್ಚೆ ಮಾಡಲಿಲ್ಲವೆಂದು ಹೇಳಿದ್ದಾರೆ. Sir, on behlaf of the Government, I am inclined to accept it. Let the Bill lie over. ಅವರನ್ನೆಲ್ಲ ಕರೆಯೋಣ, ನಾವು ಮತ್ತೆ ಜೂನ್ ತಿಂಗಳಿನಲ್ಲಿ ಅಧಿವೇಶನ ಸೇರಬೇಕಾಗುತ್ತದೆ. ತಾವು ಸರ್ಕಾರದ ಮೇಲೆ ಆರೋಪ ಹೊರಿಸುತ್ತಿದ್ದೀರಿ, ತಾವು ಮುಂದೆ ಬರುವ ಚುನಾವಣೆಯ ದೃಷ್ಟಿಯನ್ನಿಟ್ಟುಕೊಂಡು ಇದನ್ನು ಮಾಡುತ್ತಿದ್ದೀರಿ ಎಂದು ಹೇಳಿದ್ದೀರಿ. ಆದರೆ ತಾವು ಇದರ ಹಿಂದೆ ಇರುವ ಸದುದ್ದೇಶವನ್ನು ತಿಳಿದುಕೊಳ್ಳಬೇಕಾಗುತ್ತದೆ 60-70 ಪರ್‌ಸೆಂಟ್ ಜನರು ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿರುವುದು ಒಂದು ಕಡೆಯಾದರೆ. ಇನ್ನೊಂದು ಕಡೆ ಜಮೀನನ್ನು ಸ್ವಾಧೀನ ಮಾಡಿಕೊಂಡಿದ್ದಾರೆ. ಆ ಕುಟುಂಬದಲ್ಲಿ ಎಂಟು ಹತ್ತು ಜನರು ಇರುತ್ತಾರೆ, ಅವರು ಮನೆ ಕಟ್ಟಿಕೊಂಡಿದ್ದಾರೆ, ಅವರ ಮನೆಯಸುತ್ತ 20,40 ಸೆಂಟ್ ಜಮೀನು ಇದೆ. ನಾವು ಆ ಜಮೀನನ್ನು ಸ್ವಾಧೀನ ಮಾಡಿಕೊಂಡರೆ ಆ ಮನೆ ಹೋಗುತ್ತದೆ. ಆ ಜಾಗ ಹೋಗುತ್ತದೆ. ಆಗ ಅವರು ಬೀದಿಪಾಲಾಗುತ್ತಾರೆ. ಅವರುಗಳು ಬದುಕಲು ಬೇರೆ ಯಾವುದೆ ಸ್ಥಳವಿಲ್ಲದಂತಾಗುತ್ತದೆ. ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಇದನ್ನು ತಂದಿದ್ದು ಬಿ. ಡಿ. ಎ. ನವರು, ಇದನ್ನು ತಂದದ್ದು ಸರ್ಕಾರವಲ್ಲ. ಬಿ. ಡಿ. ಎ ನವರ ಮನವಿಯ ಮೇರೆಗೆ ಇದನ್ನು ತಂದದ್ದು. ಬಿ. ಡಿ. ಎ. ಆಯುಕ್ತರೇ ಸರ್ಕಾರಕ್ಕೆ ಇದರ ಬಗ್ಗೆ ಎರಡು ಸಲ ಮನವಿ ಪತ್ರವನ್ನು ಬರೆದಿದ್ದರು. ಅದನ್ನು ಸಹ ನಾನ್‌ಅಫಿಷಿಯಲ್ ಛೇರ್ಮನ್ ಇದ್ದಾಗ ಇದನ್ನು ತಂದಿರತಕ್ಕದ್ದು, ಅಫಿಷಿಯಲ್ ಛೇರ್ಮನ್ ಇದ್ದಾಗ ತಂದಿರತಕ್ಕದ್ದಲ್ಲ. ಅವರುಗಳ ಮನಸ್ಸಿನಲ್ಲಿ ಏನೋ ಸಂಶಯ ಇದೆ. ನಾವು ಏಪ್ರಿಲ್ ತಿಂಗಳಿನಲ್ಲಿದ್ದೇವೆ. ನಾವುಗಳು ಮತ್ತೆ ಜೂನ್ ತಿಂಗಳಿನಲ್ಲಿ ಅಧಿವೇಶನ ಸೇರುತ್ತಿದ್ದೇವೆ. ಆದ್ದರಿಂದ ಫ್ಲೋರ್‌ಲೀಡರ್ಸ್‌ಗಳನ್ನು ಕರೆದು ಚರ್ಚೆ ಮಾಡುವುದಕ್ಕೆ ನನ್ನ ಅಭ್ಯಂತರವಿಲ್ಲ. ಆದ್ದರಿಂದ ಅವರುಗಳನ್ನು ಕರೆದು ಚರ್ಚೆ ಮಾಡಿ ಇದರ ಸದುದ್ದೇಶವನ್ನು ಅವರಿಗೆ ಅರ್ಥ ಮಾಡಿಸಿ ಮಾಡುತ್ತೇವೆ.

4.50 ಪಿ. ಎಂ.

ಶ್ರೀ ಜೆ. ಸಿ. ಮಾಧುಸ್ವಾಮಿ : ಸುಪ್ರಿಂ ಕೋರ್ಟ್‌ಗೆ ನೀವು ಹೋದಾಗ ಏನು ಜಡ್ಜ್‌ಮೆಂಟ್ ಆಯಿತು ಎಂಬುದನ್ನೂ ಕೂಡ ತಾವು ಹೇಳಬೇಕಾಗುತ್ತದೆ. ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಧೀಶರಾದ ಕೆ. ಎ. ಸ್ವಾಮಿಯವರು ಪ್ರಕರಣವೊಂದರಲ್ಲಿ once a land is acquired for a specific purpose it cannot be reconveyed. ಎಂದು ಹೇಳಿ ಜಡ್ಜ್‌ಮೆಂಟ್ ಅನ್ನು ಕೊಟ್ಟಿದ್ದಾರೆ. ಹೀಗಿರುವಾಗ ಇಲ್ಲಿ ನೀವ್ಯಾಕೆ ಇದನ್ನು ರೀ-ಕನವೇ ಮಾಡುವ ದಿಕ್ಕಿನಲ್ಲಿ ಯೋಚನೆ ಮಾಡುವುದಕ್ಕೆ ಹೊರಟಿದ್ದೀರಿ ಎಂಬುದನ್ನು ನೀವು ಹೇಳಬೇಕಲ್ಲವೇ?

ಶ್ರೀ ಎಂ. ಸಿ. ನಾಣಯ್ಯ : ಸುಪ್ರೀಂ ಕೋರ್ಟ್‌ನಲ್ಲಿ ಈ ವಿಚಾರದಲ್ಲಿ ಏನು ತೀರ್ಮಾನವಾಗಿದೆ ಎಂಬ ಬಗ್ಗೆ ನನಗೆ ಗೊತ್ತಿದೆ. ಅದಾದ ಮೇಲೆ ಈ ವಿಷಯಕ್ಕೆ ಸಂಬಂಧಪಟ್ಟಂತೆ ಉಚ್ಚನ್ಯಾಯಾಲಯದಲ್ಲಿ ಇನ್ನೂ ಎರಡು ತೀರ್ಪುಗಳು ಬಂದಿವೆ. ನೀವು ಕಾಂಪ್ರೆಹೆನ್ಸೀವ್ ಡೆವಲೆಂಪ್‌ಮೆಂಟ್ ಪ್ಲಾನ್ ಅನ್ನು ವಾಯ್‌ಲೇಷನ್ ಮಾಡಿ ಮನೆಗಳನ್ನು ಕಟ್ಟಿರತಕ್ಕದ್ದನ್ನು ರೆಗ್ಯೂಲರೈಸ್ ಮಾಡಿ ಎಂದು ನ್ಯಾಯಾಲಯವು ಸರ್ಕಾರಕ್ಕೆ ಹೇಳಿದೆ. ಮನೆಗಳನ್ನು ಒಡೆದು ಹಾಕಬೇಡಿ, ಅದು ನ್ಯಾಷನಲ್ ವೇಸ್ಟ್ ಆಗುತ್ತದೆಂದು ನ್ಯಾಯಾಲಯ ಹೇಳಿದೆ. ಈ ಹಂತದಲ್ಲಿ ಸರ್ಕಾರ ಈ

ವಿಧೇಯಕದ ತಿದ್ದುಪಡಿಯನ್ನು ಸದುದ್ದೇಶದಿಂದಲೇ ತಂದಿದೆ ಎಂದು ನಾವು ಹೇಳುತ್ತಿದ್ದರೂ ಕೂಡ ನೀವು ಸರ್ಕಾರವು ಚುನಾವಣೆ ಹತ್ತಿರ ಬರುತ್ತಿರುವುದರಿಂದ ಏನೋ ಲಾಭ ಪಡೆಯುವ ಸಲುವಾಗಿ ಈ ತಿದ್ದುಪಡಿ ತರುತ್ತಿದೆ ಎಂದು ಆರೋಪ ಮಾಡುತ್ತಿದ್ದೀರಿ. ಎಲ್ಲಿ ಬಿಡಿಎ ನವರು ಒಂದು ಯೋಜನೆಯನ್ನು ತಯಾರು ಮಾಡಿ ಅಲ್ಲಿ ಕಟ್ಟಡಗಳನ್ನು ಕಟ್ಟಲಿಕ್ಕೆ ಆಗದೇ ಇರತಕ್ಕ ಪರಿಸ್ಥಿತಿ ನಿರ್ಮಾಣವಾದರೆ ಅಂತಹ ಜಮೀನನ್ನು ಹಿಂದಕ್ಕೆ ಕೊಡಬೇಕೆಂಬ ವಿಚಾರವನ್ನು ' ನೀವು ತಾತ್ವಿಕವಾಗಿ ಒಪ್ಪುತ್ತೀರಿ ಅಲ್ಲವೇ? ಈ ವಿಧೇಯಕವನ್ನು ಮುಂದಕ್ಕೆ ತೆಗೆದುಕೊಳ್ಳೋಣ ಇನ್ನೊಂದು ತಿಂಗಳಲ್ಲಿ ಏನೂ ಆಗುವುದಿಲ್ಲ.

ಶ್ರೀ ಹೆಚ್. ಎನ್. ನಂಜೇಗೌಡ : ಮಾನ್ಯ ಉಪಾಧ್ಯಕ್ಷರೆ, ನನ್ನದೊಂದು ವಿನಂತಿ ಇದೆ. ಈಗ ಏನಾಗಿದೆ ಎಂದರೆ, ಮಧ್ಯಮ ವರ್ಗದವರು ಕೆಲವು ಕಡೆ ಮನೆಗಳನ್ನು ಕಟ್ಟಿಕೊಂಡಿರುತ್ತಾರೆ. ತೀರ ಶ್ರೀಮಂತರಾಗಿರುವವರನ್ನು ಯಾರೂ ಮಾತನಾಡಿಸುವುದಕ್ಕೆ ಆಗುವುದಿಲ್ಲ. ಆ ಮನೆಗಳನ್ನು ಒಡೆದು ಹಾಕುತ್ತೇವೆ ಎಂದು ಅಧಿಕಾರಿಗಳು ಅಲ್ಲಿಗೆ ಹೋಗುತ್ತಾರೆ. ಆ ಮನೆಗಳಲ್ಲಿ ವಾಸಿಸುವವರಿಗೆ ಆ ಮನೆಯ ಮೇಲೆ ಯಾವ ಹಕ್ಕೂ ಇರುವುದಿಲ್ಲ. ಆ ಜಮೀನು ಬಿಡಿಎ ಗೆ ಸೇರಿರುತ್ತದೆ. ಅದೇ ಜಾಗದಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸವಾಗಿರುತ್ತಾರೆ. ಅಧಿಕಾರಿಗಳು ಇವರ ಮನೆಗೆ ಹೋದಾಗೆಲ್ಲಾ ಆ ಮನೆಗಳವರು ಆ ಅಧಿಕಾರಿಗಳ ಜೇಬು ಬಿಸಿಮಾಡಿ ಕಳುಹಿಸಬೇಕು. ನನ್ನ ಗಮನಕ್ಕೆ ಬಂದಿರುವ ವಿಚಾರಗಳನ್ನೆಲ್ಲಾ ನಾನು ಹೇಳಿ ಬಿಡುತ್ತೇನೆ. ಆ ಮನೆಗಳವರ ತಂಟೆಗೆ ಹೋಗಬೇಡಿ ಎಂದು ಸರ್ಕಾರದವರು ನಿರ್ದಿಷ್ಟವಾದ ಸೂಚನೆಯನ್ನಾದರೂ ಕೊಡಬೇಕು. ನಿಮ್ಮ ಅಧಿಕಾರಿಗಳು ಬೇಕಾದರೆ ಮಾನ್ಯ ಸದಸ್ಯರೊಬ್ಬರು ಹೇಳಿದಂತಹ ಡೈಮಂಡ್ ಡಿಸ್ಟ್ರಿಕ್ಟ್ ಅನ್ನು ಒಡೆದು ಹಾಕಲಿ. ಆದರೆ ಬಡವರು ಮತ್ತು ಮಧ್ಯಮ ವರ್ಗದವರು ಅನಧಿಕೃತವಾಗಿ ವಾಸಿಸುವ ಮನೆಗಳ ಬಳಿಗೆ ಹೋಗಿ ಅವರನ್ನು ಹೆದರಿಸಿ ಜೇಬು ಬೆಚ್ಚಗೆ ಮಾಡಿ ಕೊಂಡು ಬರುವುದು ಬೇಡ. ಇದರ ಬಗ್ಗೆ ಸರ್ಕಾರ ನಿರ್ದಿಷ್ಟವಾದಂತಹ ಸೂಚನೆಯನ್ನು ಕೊಡಬೇಕೆಂದು ಕೋರುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಸೈಟುಗಳಲ್ಲಿ ರಾತ್ರೋರಾತ್ರಿ ಮನೆಗಳನ್ನು ಕಟ್ಟಿ ಬಿಟ್ಟಿರುತ್ತಾರೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಎಂಎಲ್‌ಎ ಗಳಿಗೆ ಅಲಾಟ್ ಮಾಡಿರುವಂತಹ ಸೈಟ್‌ಗಳಲ್ಲೂ ಕೂಡ ಮನೆಗಳನ್ನು ಕಟ್ಟಿ ಬಿಟ್ಟಿದ್ದಾರೆ. ಮಾನ್ಯ ಗುರುಪಾದಪ್ಪನವರ ಸೈಟಿನಲ್ಲೂ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಅದನ್ನು ಹಾಗೆ ಬಿಟ್ಟುಬಿಡಿ ಎನ್ನುತ್ತೀರಾ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಹೌದು, ನನ್ನ ಸೈಟಿನಲ್ಲಿ ಕಟ್ಟಿದ್ದಾರೆ

(ಗೊಂದಲ)

ಶ್ರೀ ಎಂ. ಸಿ. ನಾಣಯ್ಯ : ತಾತ್ವಿಕವಾಗಿ ನಾವು ತಂದಿರುಂತಹ ತಿದ್ದುಪಡಿಯನ್ನು ನೀವು ಒಪ್ಪುತ್ತೀದ್ದೀರಿ. ಆದರೆ ಆ ತಿದ್ದುಪಡಿಯನ್ನು ಯಾವ ರೀತಿ ಮಾಡಬೇಕು ಎನ್ನುವ ಬಗ್ಗೆ ನಾವು ಚರ್ಚೆ ಮಾಡಿ ನಂತರ ತಿದ್ದುಪಡಿ ತರೋಣ. ಅದಕ್ಕೆ ಸರ್ಕಾರದ ವತಿಯಿಂದ ನಾನು ಒಪ್ಪಿದ್ದೇನೆ.

ಉಪಾಧ್ಯಕ್ಷರು : ಈ ವಿಧೇಯಕದ ಮೇಲಿನ ಚರ್ಚೆಯನ್ನು ಮುಂದಕ್ಕೆ ಹಾಕಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಈಗಾಗಲೇ ಮನೆಗಳನ್ನು ಕಟ್ಟಿಕೊಂಡಿರುವುದನ್ನು ಒಡೆಯಬಾರದು ಎಂದು ನಿರ್ದಿಷ್ಟವಾದ ಸೂಚನೆಗಳನ್ನಾದರೂ ಸರ್ಕಾರದ ವತಿಯಿಂದ ಕೊಡಿ. ಮತ್ತು ಬೇರೆ ಇದೇ

ರೀತಿಯ ಕಟ್ಟಡಗಳೂ ಕೂಡ ಬಾರದಂತೆ ನೋಡಿಕೊಳ್ಳಲೂ ಸಹಾ ಸೂಚನೆ ನೀಡಿ.

ಶ್ರೀ ವಿ. ಸೋಮಣ್ಣ : ಸನ್ಮಾನ್ಯ ಉಪಾಧ್ಯಕ್ಷರೇ, ನಾವು ತಿದ್ದುಪಡಿ ತಂದ ಉದ್ದೇಶವನ್ನು ಈಗಾಗಲೇ ಮಾನ್ಯ ಕಾನೂನು ಸಚಿವರು ಹೇಳಿದ್ದಾರೆ. ನಾನು ಬೆಂಗಳೂರು ನಗರದ ಶಾಸಕನಾಗಿ ಬಹುತೇಕ ನಮ್ಮ ಶಾಸಕರ ಬವಣೆಗಳನ್ನು ಅರಿತುಕೊಂಡೇ ಈ ವಿಧೇಯಕವನ್ನು ತಂದಿದ್ದೇನೆ. ಈ ತಿದ್ದುಪಡಿಯಿಂದ ನಾವೇನೂ ಬಲ್ಕಾಗಿ ಎಕರೆಗಟ್ಟಲೇ ಜಾಗವನ್ನು ಯಾರಿಗೂ ಕೊಡುತ್ತಿಲ್ಲ. ಮಾನ್ಯ ಸದಸ್ಯರುಗಳೇನಾದರೂ ಸ್ವಲ್ಪ ಬಿಡುವು ಮಾಡಿಕೊಂಡು ಕೆಲವು ಬಡಾವಣೆಗಳಿಗೆ ಭೇಟಿ ನೀಡಿದರೆ ತಮಗೆ ಈ ಸಮಸ್ಯೆಯ ಅರಿವು ಸಿಗುತ್ತದೆ. ಇವತ್ತು ನಾವು ಅವರಿಗೆ ನಾಗರೀಕ ಸೌಲಭ್ಯಗಳನ್ನು ಕೊಡಲಿಕ್ಕೆ ಸಾಧ್ಯ ಆಗುತ್ತಿಲ್ಲ. ನಾನು ಆಗಲೇ ಸನ್ಮಾನ್ಯ ವೀರಪ್ಪ ಮೊಯ್ಲಿಯವರ ಹೆಸರನ್ನು ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ ಪ್ರಸ್ತಾಪಿಸಲಿಲ್ಲ. ಅವರ ಕಾಲದಲ್ಲಿ ತಿದ್ದುಪಡಿ ಮಾಡಿಕೊಂಡು ಯಾವ ಪ್ರಕಾರ ಇಂಡುವಿಜಿಯಲ್ ಪ್ರಕರಣಗಳಲ್ಲಿ ಸಕ್ರಮ ಮಾಡಿದರೋ ಅದೇ ರೀತಿಯಲ್ಲಿ ನಾವೂ ಮಾಡುತ್ತಿದ್ದೇವೆ ಎನ್ನುವುದನ್ನು ಹೇಳುವುದಕ್ಕಾಗಿ ಉದಾಹರಣೆ ಕೊಡಲಿಕ್ಕೆ ಹೋದಾಗ ಅವರ ಹೆಸರನ್ನು ನಾನು ಪ್ರಸ್ತಾಪ ಮಾಡಿದೆ. ಆದಕ್ಕಾಗಿ ಅವರು ಅನ್ಯಥಾ ಭಾವಿಸಿಕೊಂಡರು. ತಿದ್ದುಪಡಿಯ ಉದ್ದೇಶವನ್ನು ನಾವು ಈಗಾಗಲೇ ಹೇಳಿದ್ದೇವೆ. ಮಾನ್ಯ ಜಯಚಂದ್ರರವರು ಚುನಾವಣೆ ಮುಂದಿಟ್ಟುಕೊಂಡು ಈ ತಿದ್ದುಪಡಿ ತಂದಿದ್ದೀರಿ ಎಂದು ಹೇಳಿದರು. ಚುನಾವಣೆ ಇದ್ದ 1994 ರ ಅಂತ್ಯದಲ್ಲೇ ತಾವೂ ಕೂಡ ಇಂತಹ ತಿದ್ದುಪಡಿಯ್ನು ತಂದಿದ್ದೀರಿ ಎಂಬುದನ್ನು ಮರೆಯಬಾರದು. ಸನ್ಮಾನ್ಯ ಪಾಟಾಳ್ ನಾಗರಾಜ್‌ರವರು ಈಗಾಗಲೇ ಇರುವ ಅನಧಿಕೃತ ಮನೆಗಳನ್ನು ಒಡೆಯಬಾರದು ಎಂಬ ನಿರ್ದಿಷ್ಟ ಸೂಚನೆ ಕೊಡಬೇಕೆಂದು ಹೇಳಿದರು. ನಾವು ಈಗಾಗಲೇ ಆ ರೀತಿಯ ಸೂಚನೆ ಕೊಟ್ಟಿದ್ದೇವೆ. 20x30, 30x40, 40x60 ಅಡಿ ಅಳತೆಯ ಸೈಟುಗಳಲ್ಲಿ ಮನೆಗಳನ್ನು ಕಟ್ಟಿಕೊಂಡು ಯಾರಿದ್ದಾರೆ. ಅಂತಹವರಿಗೆ ನಾವು ಸಹಾಯ ಮಾಡಬೇಕು ಅನ್ನುವಂತಹ ಉದ್ದೇಶ ನಮಗಿದೆಯೇ ವಿನಃ ಇದರೊಳಗೆ ನಮಗೆ ಬೇರೆ ಯಾವ ಉದ್ದೇಶವು ಕೂಡ ಇಲ್ಲ. ಪ್ರಾಯಶಃ ಒಂದು ಮಾತಂತೂ ಸತ್ಯ. ಇದರಿಂದಾಗಿ ಕಳೆದ 10-12 ವರ್ಷಗಳಿಂದ ಹೊಸದಾಗಿ ಯಾವುದನ್ನೂ ಕೂಡ ಅಕ್ವಿಸಿಷನ್ ಮಾಡಕೊಳ್ಳುವುದಕ್ಕಾಗಿಲ್ಲ. ಯಾರ್‍ಯಾರು ಅವತ್ತಿನಿಂದ ಮನೆಗಳನ್ನು ಕಟ್ಟಿಕೊಂಡಿದ್ದಾರೆ ಅವರಿಗೆ ಸಹಾಯ ಮಾಡುತ್ತಿದ್ದೇವೆಯೇ ಹೊರತು ನಾವು ಬಲ್ಕ್ ಆಗಿ ಯಾವುದೇ ಸೊಸೈಟಿಗಳಿಗೆ ಅನ್ವಯವಾಗುವಂತೆ ಈ ತಿದ್ದುಪಡಿ ತಂದಿಲ್ಲ. ಇಂಡುವಿಜಿಯಲ್ ಪ್ರಕರಣಗಳಿಗೆ ಮಾತ್ರ ಇದು ಅನ್ವಯಿಸುತ್ತದೆ. ಇಂತಹ 5500 ಕೇಸ್‌ಗಳಿವೆ. ಅವರು ಅಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ ಅದರ ಬಗ್ಗೆ ತಾವು ರಾಜಿಯಾದರೂ ಮಾಡಿ ಎಂದು ಹೇಳಿದಿರಿ. ಅದನ್ನಾದರೂ ಮಾಡುವುದಕ್ಕೆ ಈ ತಿದ್ದುಪಡಿ ಅಂಗೀಕಾರವಾಗುವುದು ಅವಶ್ಯಕವಾಗಿದೆ. ಹಿಂದಿನ ಕೊಳೆ ತೊಳೆದು ಏನಾದರೂ ಒಂದು ಮೋಕ್ಷವನ್ನು ಇದಕ್ಕೆ ನಾವು ಕೊಡಬೇಕಾಗಿದೆ. ಈ ರೀತಿಯ ಮೋಕ್ಷ ಕೊಡಲು ವಿಧೇಯಕ ಅಂಗೀಕಾರವಾಗ ಬೇಕಾಗುತ್ತದೆ. ಯಾರನ್ನೂ ಈ ವಿಷಯದಲ್ಲಿ ಸರ್ಕಾರ ಕತ್ತಲಕೋಣೆಯಲ್ಲಿ ಇಟ್ಟಿಲ್ಲ. ಯಾರು 10-12 ವರ್ಷಗಳಿಂದ ಒದ್ದಾಡುತ್ತಿದ್ದಾರೋ ಅವರಿಗೆ ನಾಗರೀಕ ಸೌಲಭ್ಯ ಒದಗಿಸಿಕೊಡುವುದು ನಮ್ಮ ತಿದ್ದುಪಡಿ ಉದ್ದೇಶವಾಗಿದೆ. ನಾವು ಜನಗಳಿಗೆ ಈ ತಿದ್ದುಪಡಿ ವಿಧೇಯಕದ ಗತಿ ಹೀಗಾಗಿದೆ ಎಂದು ಹೇಳುತ್ತೇವೆ. 10-15 ವರ್ಷಗಳಿಂದ ಒದ್ದಾಡಿದಂತಹ ಜನ ಇನ್ನೆರಡು ತಿಂಗಳು ಒದ್ದಾಡಿದರೆ

ದೇಶವೇನೂ ಮುಳುಗಿ ಹೋಗುವುದಿಲ್ಲ. ಅವರಿಗೆ ಅನುಕೂಲ ಮಾಡಬೇಕೆನ್ನುವ ಉದ್ದೇಶದಿಂದ ಈ ತಿದ್ದುಪಡಿ ತಂದಿದ್ದೇವೆಯೇ ವಿನಃ ಬೇರೆ ಯಾವ ಉದ್ದೇಶವೂ ಕೂಡ ಇಲ್ಲ. ನಾಳೆ ಆ ಜನರಿಗೆ ನಾಗರೀಕ ಸೌಲಭ್ಯಗಳನ್ನೇನೂ ಸರ್ಕಾರ ಒದಗಿಸಿಕೊಟ್ಟಿಲ್ಲವೆಂದು ಮಾನ್ಯ ಸದಸ್ಯರುಗಳೇ ಸರ್ಕಾರದ ಮೇಲೆ ಆಪಾದನೆ ಮಾಡುತ್ತೀರಿ. ಬೆಂಗಳೂರು ನಗರದಲ್ಲಿ ಏನಾದರೂ ಒಂದು ಒಳ್ಳೆಯ ಕೆಲಸ ಮಾಡಬೇಕೆಂದು ಹೊರಟಾಗ ಈ ರೀತಿಯ ಅವ್ಯವಸ್ಥೆಗಳಾದರೆ ಸ್ವಲ್ಪ ಕಷ್ಟವಾಗುತ್ತದೆ. ನಗರದ ಶಾಸಕರಿಗೆ ಈ ಸಮಸ್ಯೆ ಬಗ್ಗೆ ಬಹಳ ಚೆನ್ನಾಗಿ ಗೊತ್ತು. ಈ ತಿದ್ದುಪಡಿ ವಿಧೇಯಕದ ಮೇಲಿನ ಚರ್ಚೆಯನ್ನು ಮುಂದಕ್ಕೆ ಹಾಕಿದ್ದರಿಂದ ನಮಗೇನೂ ಬೇಜಾರಾಗಿಲ್ಲ. ಈ ತಿದ್ದುಪಡಿ ನಾವೇ ಪ್ರಸ್ತಾಪಿಸಿದ್ದಲ್ಲ. ಹಿಂದೆ ಇದ್ದಂತಹ ಅಧಿಕಾರಿಗಳು ಪ್ರಸ್ತಾಪಿಸಿದಂತೆ ಇಲ್ಲಿ ತಿದ್ದುಪಡಿಯನ್ನು ನಾವು ತಂದಿದ್ದೇವೆ. ಸರ್ಕಾರ ಇದರಲ್ಲಿ ಏನೂ ಮೂಗು ತೂರಿಸಿಲ್ಲ. ಈ ತಿದ್ದುಪಡಿ ಅಂಗೀಕಾರವಾಗದಿದ್ದರೆ ಇನ್ನು ಹತ್ತು ವರ್ಷಗಳಾದರೂ ಈ ರೀತಿಯ 5500 ಕೇಸ್‌ಗಳು ಹಾಗೆಯೆ ಇರುತ್ತವೆ. ಇಲ್ಲಿ ವಾಸಿಸುವ ಬಡವರ ಬಗ್ಗೆ ಚಿಂತನೆ ಮಾಡೋಣ ಎಂದರೆ ನೀವು ಈ ತಿದ್ದುಪಡಿ ಅಂಗೀಕರಿಸಲು ಸಹಕರಿಸುತ್ತಿಲ್ಲ. ಇಷ್ಟೆಲ್ಲಾ ಚರ್ಚೆಯಾದರೂ ಕೂಡ ಏನು ಪ್ರಯೋಜನವಾಗಲಿಲ್ಲ. ವಿಧೇಯಕದಲ್ಲಿ ಬಡವರಿಗೆ ಅನುಕೂಲವಾಗುವ ರೀತಿಯಲ್ಲಿ ಏನಾದರೂ ಬದಲಾವಣೆ ಮಾಡಿಕೊಂಡು ಅವರಿಗೆ ಸಹಾಯ ಮಾಡೋಣ ಎಂದರೆ ಅದಕ್ಕೆ ನೀವು ಒಪ್ಪಿಗೆ ಕೊಡದೇ ಅದನ್ನು ಮುಂದಕ್ಕೆ ಹಾಕಿ ಎನ್ನುವುದು ಸರಿಯಲ್ಲ. ಮುಂದಿನವರು ಅಧಿಕಾರಕ್ಕೆ ಬಂದಾಗ ಕೂಡ ಈ ರೀತಿಯ ಮಾತೇ ಬರುತ್ತದೆ. ಹೀಗೆಯೆ ಇದು ನಡೆಯುತ್ತಾ ಇರುತ್ತದೆ. ಬಡ ಜನಗಳು ಸಾಯುತ್ತಲೇ ಇರುತ್ತಾರೆ.

ಶ್ರೀ ಹೆಚ್. ಎನ್. ಸಂಜೀಗೌಡ : ಮಾನ್ಯ ಉಪಾಧ್ಯಕ್ಷರೇ, ಬೆಂಗಳೂರು ನಗರ ಶಾಸಕರ ಇತರ ಕ್ಷೇತ್ರಗಳಂತೆ ನನ್ನ ಕ್ಷೇತ್ರದಲ್ಲೂ ರೆವಿನ್ಯೂ ಪಾಕೆಟ್ಸ್ ಇವೆ. ಇಲ್ಲಿ ಮನೆ ಕಟ್ಟಿಕೊಂಡಿರುವವರೆಲ್ಲರೂ ಕಾರ್ಪೊರೇಷನ್ ಚುನಾವಣೆಯಲ್ಲಿ ಮತದಾರರಾಗಿದ್ದಾರೆ. ನಾವು ಮುಂದಿನ ವರ್ಷ ಕಾರ್ಯಗತಗೊಳಿಸಲಾಗುವ ಕಾರ್ಯಕ್ರಮಗಳನ್ನು ಈಗ ರೂಪಿಸುತ್ತೇವೆ. ಆದರೆ ಕಳೆದ ವರ್ಷ ಯೋಜಿಸಿದಂತೆ ಅವರಿಗೆ ನಾವು ವಿದ್ಯುತ್, ನೀರು, ಡ್ರೈನೇಜ್, ರಸ್ತೆ, ಒದಗಿಸಿಕೊಡಲಾಗಿಲ್ಲ. ಈಗ ಮಾರ್ಚ್- ಏಪ್ರಿಲ್ ತಿಂಗಳೊಳಗಾಗಿ ನಮ್ಮ ಕಾರ್ಯಕ್ರಮಗಳ ಪಟ್ಟಿ ಮುಗಿದೇ ಹೋಗುತ್ತದೆ. ಮುಂದಿನ ವರ್ಷಕ್ಕೂ ಕೂಡ ಅವರಿಗೆ ನೀರು, ರಸ್ತೆ, ಒಳಚರಂಡಿ, ವ್ಯವಸ್ಥೆ ಮಾಡಲಾಗದಂತಹ ಪರಿಸ್ಥಿತಿ ಇದೆ. ಈ ದೃಷ್ಟಿಯಿಂದಲೇ ನಾವು ಇದನ್ನು ಯಾವ ರೀತಿ ಮಾಡಬೇಕೆಂದು ಸಮಾಲೋಚಿಸಿ ತಿದ್ದುಪಡಿ ತನ್ನಿ ಎಂದು ಹೇಳುತ್ತಿದ್ದೇವೆ. ಮಾನ್ಯ ಮಂತ್ರಿಗಳು ಆದಷ್ಟು ಬೇಗ ಇದನ್ನು ಮಾಡಿಕೊಡಬೇಕು. ಇದರಲ್ಲಿ ಅವರ ಜವಾಬ್ದಾರಿ ಸ್ವಲ್ಪ ಹೆಚ್ಚೇ ಇದೆ. ಮಾನ್ಯ ಮಂತ್ರಿಗಳಿಗೆ ಬೇಕಾದರೆ ನಾನು ನನ್ನ ಕ್ಷೇತ್ರದಲ್ಲಿರುವ ಕೆಲವು ರೆವಿನ್ಯೂ ಪಾಕೆಟ್ಸ್ ಗೆ ಅವರನ್ನು ಕರೆದುಕೊಂಡು ಹೋಗುತ್ತೇನೆ. ಅವರು ಮಹಾನಗರಪಾಲಿಕೆ ವ್ಯಾಪ್ತಿಗೆ ಸೇರಿದ್ದರೂ ಕೂಡ ಅವರಿಗೆ ಏನೂ ನಾಗರೀಕ ಸೌಲಭ್ಯಗಳನ್ನು ಇವತ್ತು ಕೊಡಲು ಸಾಧ್ಯವಾಗುತ್ತಿಲ್ಲ. ಏಕೆಂದರೆ ಅವರಿಗ ಟೈಟಲ್ ಡೀಡ್ ಇಲ್ಲ. ಲ್ಯಾಂಡ್ ಇಲ್ಲ, ಲ್ಯಾಂಡ್ ಬಿಡಿಎ ಹೆಸರಿನಲ್ಲಿ ಇದೆ. ಖಾತೆ ಮಾಡಬೇಕಾದರೆ ಅವರಿಗೆ ಟೈಟಲ್ ಡೀಡ್ ಬೇಕು. ಅದಿಲ್ಲದೆ ಅವರಿಂದ ಡೆವಲಪ್‌ಮೆಂಟ್ ಚಾರ್ಜ್‌ನ್ನು ಕೂಡ ವಸೂಲಿ ಮಾಡುವಂತಿಲ್ಲವಾಗಿದೆ. ಮಾನ್ಯ ನಾಣಯ್ಯನವರು ಈ ಬಗ್ಗೆ ಚರ್ಚಿಸಿ ನಾಳೆಯೇ ಈ ತಿದ್ದುಪಡಿ ವಿಧೇಯಕವನ್ನು ಪುನಃ ಸಭೆಯ

ಮುಂದೆ ತರಲಿ.

ಶ್ರೀ ಎಂ. ಸಿ. ನಾಣಯ್ಯ : ನಾಳೆಯೇ ಇದರ ಬಗ್ಗೆ ನಿಮ್ಮ ಜೊತೆಯಲ್ಲಿ ಚರ್ಚೆ ಮಾಡಿ ಎಲ್ಲರಿಗೆ ಅನುಕೂಲವಾಗುವಂತಹ ರೀತಿಯ ಯಾವ್ಯಾವ ತಿದ್ದುಪಡಿಗಳನ್ನು ತರಬೇಕೆಂದು ನೀವು ಬಯಸುತ್ತಿರೋ ಆ ಎಲ್ಲಾ ತಿದ್ದುಪಡಿಗಳೊಂದಿಗೆ ವಿಧೇಯಕವನ್ನು ತರಲು ನಾನು ಸಿದ್ಧನಾಗಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ತಾವು ಯಾವ ಯಾವ ಮನೆಗಳಿಗೆ ಈ ತಿದ್ದುಪಡಿ ಅನ್ವಯವಾಗುತ್ತದೆ ಎಂಬುದನ್ನು ನಿರ್ದಿಷ್ಟವಾಗಿ ಸ್ಪಷ್ಟವಾಗಿ ಹೇಳುವ ತಿದ್ದುಪಡಿಯನ್ನು ತನ್ನಿ, ಅದಕ್ಕೆ ನಮ್ಮದೇನೂ ಅಭ್ಯಂತರ ಇಲ್ಲ. ನಾಳೆ ಬೆಳಿಗ್ಗೆಯೇ ಬೇಕಾದರೆ ನಮ್ಮನ್ನು ಕರೆದು ಚರ್ಚೆ ಮಾಡಿ.

ಶ್ರೀ ಎಂ. ಸಿ. ನಾಣಯ್ಯ : ನಾಳೆ ಬೆಳಿಗ್ಗೆಯೇ ನಿಮ್ಮನ್ನು ಕರೆದು ಇದರ ಬಗ್ಗೆ ಚರ್ಚೆ ಮಾಡಲು ನಾನು ಸಿದ್ಧ, ಮಾನ್ಯ ವೀರಪ್ಪ ಮೊಯ್ಲಿಯವರ ಕಾಲದಲ್ಲಿ 38(ಸಿ) ತಿದ್ದುಪಡಿ ತಂದಾಗ ಯಾವ ರೀತಿಯ ಚಿಂತನೆ ಇತ್ತೋ ಅದೇ ರೀತಿಯ ಚಿಂತನೆ ಇವತ್ತೂ ಕೂಡ ಇದೆ.

ಶ್ರೀ ಕಾಗೋಡು ತಿಮ್ಮಪ್ಪ : ಇದರ ಬಗ್ಗೆ ನಾಳೆಯೇ ಚರ್ಚೆ ಮಾಡೋಣ ಯಾರು ಬೇಡವೆಂದು ಹೇಳುತ್ತಾರೆ.

ಶ್ರೀ ಎಂ. ಸಿ. ನಾಣಯ್ಯ : ಇದರಿಂದ ಅನುಕೂಲವಾಗತಕ್ಕಂಥದ್ದು, ನೀವು ಹೇಳತಕ್ಕಂತಹ ಕಿರುಕುಳವನ್ನು ತಪ್ಪಿಸಬೇಕೆಂದು ಏನು ಹೇಳಿದಿರಿ, ಡೆಮಾಲಿಷ್ ಮಾಡುವುದಕ್ಕೆ ಹೊರಟಿದ್ದಾರೆ, ಇದು ಮಾಡುವುದಕ್ಕೆ ಹೊರಟಿದ್ದಾರೆ ಅದು ತಡೆ ಹಿಡಿಯಿರಿ ಎಂದು ಹೇಳಿದಿರಿ; ಅದನ್ನು ನಾವು ಮಾಡುತ್ತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಯಾರು ಒಡೆಯುವುದಕ್ಕೆ ಹೋಗಿದ್ದಾರೆ ?

ಶ್ರೀ ಎಂ. ಸಿ. ನಾಣಯ್ಯ : ಕಿರುಕುಳ ಕೊಡುತ್ತಿದ್ದೇವೆಂದು ಹೇಳಿದಿರಿ.

ಶ್ರೀ ಬಿ. ಕಾಗೋಡು ತಿಮ್ಮಪ್ಪ : ಒಬ್ಬನಿಗೆ ನ್ಯಾಯ ಕೊಡುವುದಕ್ಕೆ ಯಾರಾದರೂ ಬೇಡವೆಂದು ಹೇಳುತ್ತಾರಾ?

ಶ್ರೀ ಎಲ್. ಆರ್. ಶಿವರಾಮೇಗೌಡ : ಬಡವರಿಗೆ ಸಹಾಯ ಮಾಡುತ್ತೇವೆಂದರೆ ಇಷ್ಟೊಂದು ವಿರೋಧ ಮಾಡುತ್ತೀರಿ ಎಂದರೆ ಏನು ಮಾಡುವುದು ?

ಶ್ರೀ ಕಾಗೋಡು ತಿಮ್ಮಪ್ಪ : ನಾವು ಮಾಡುವಂತಹ ಕೆಲಸ ಸರಿಯಾಗಿ ಎಲ್ಲರಿಗೂ ಸದುಪಯೋಗವಾಗಬೇಕು. ಆ ದೃಷ್ಟಿಯಲ್ಲಿ ವಿಚಾರ ಮಾಡಿ. ಯಾರಿಗೂ ಕೇಳುವುದೇ ಬೇಡವಾ? ನಮಗೆ ಕೇಳಬೇಕೆಂದು ಹೇಳಲಿಲ್ಲ . ಸದನದ ನಾಯಕರಿಗೆ ಕರೆದು ಕೇಳಿ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ತಿದ್ದುಪಡಿ ಏನು ತರಬೇಕು ಎನ್ನತಕ್ಕಂಥದ್ದನ್ನು ನಾಳೆ ಬೆಳಿಗ್ಗೆ ಒಂಬತ್ತು ಗಂಟೆಗೆ ನಮ್ಮ ಎಲ್ಲಾ ಶಾಸಕರಿಗೆ ಕರೆಯಿರಿ, ನಾವು ಬರುವುದಕ್ಕೆ ತಯಾರು ಅಲ್ಲಿ ಕೂತು ಏನು ತಿದ್ದುಪಡಿ ಆಗಬೇಕೆಂದು ತೀರ್ಮಾನಕ್ಕೆ ಬರೋಣ.

ಶ್ರೀ ವಿ. ಸೋಮಣ್ಣ : ನಾಳೆ ಬೆಳಿಗ್ಗೆ ವೀರಪ್ಪ ಮೊಯ್ಲಿಯವರು, ವಾಟಾಳ್ ನಾಗರಾಜ್‌ರವರು ಮತ್ತು ನಂಜೇಗೌಡರು ಹಾಗೂ ಮತ್ತಿತರ ನಾಯಕರು ಸಭೆಗೆ ಬರಬೇಕು.

ಶ್ರೀ ಎಂ. ವೀರಪ್ಪ ಮೊಯ್ಲಿ : ಆ ತರಹ ನೀವು ಒಳಗಡೆ ಕೂತು ಒಪ್ಪಿ ಬಿಡಬೇಕೆಂದು ನೀವು ಹೇಳಿದರೆ ಒಪ್ಪುವುದಕ್ಕಾಗುತ್ತದೆಯೇ? ಶಾಸನಗಳನ್ನು ನೀವು ಖಾಸಗಿಯಾಗಿ ಕೂತು ಮಾಡುತ್ತೀರಾ? ಕಾನೂನು ನಾಳೆಯೇ ಜಾರಿಗೆ ಬರುತ್ತಾ? ನಾಳೆಯೇ ಆರ್ಡಿನೆನ್ಸ್ ತರುವುದಕ್ಕೆ ಆಗುವುದೇ? ಆದ್ದರಿಂದ

ಕಾನೂನು ಮಾಡಿದರೆ ಏನಿದ್ದರೂ ಎರಡು ತಿಂಗಳು ಬೇಕಾಗುತ್ತದೆ. ಅದಕ್ಕೆ ರಾಜ್ಯಪಾಲರ ದಸ್ಕತ್ತು ಆಗಬೇಕಾಗುತ್ತದೆ. ರೂಲ್ ಬರಬೇಕಾಗುತ್ತದೆ. ನಾಳೆನೇ ಜಾರಿಗೆ ಬರಬೇಕೆಂದರೆ, ಬೇಕಾದರೆ ರಾತ್ರಿ ಕೂತು ಬೆಳಗಿನವರೆಗೆ ಕೂತುಕೊಳ್ಳೋಣ. ನನ್ನ ಅಡಿಯಿಲ್ಲ . ಇದರಲ್ಲಿ ಕೆಲವರು ಹೇಳಿದ ಪ್ರಕಾರ ಸೂಕ್ಷ್ಮ ವಿಚಾರಗಳಿವೆ. you cannot meddle with Bangalore like this.

ಶ್ರೀ ವಾಟಾಳ್ ನಾಗರಾಜ್ : ಇನ್ನು ಚರ್ಚೆ ಮಾಡುವುದಕ್ಕೆ ಏನೂ ಅಡ್ಡಿ ಇಲ್ಲ. ನಾಳೆ ಬೆಳಿಗ್ಗೆ ಕೂತು ಚರ್ಚೆ ಮಾಡೋಣ.

ಶ್ರೀ ಬಿ. ಕಾಗೋಡು ತಿಮ್ಮಪ್ಪ : ಸೈಟ್ ವಿಚಾರ ತೀರ್ಮಾನ ಮಾಡುವುದು ಬಹಳ ಕಷ್ಟ ಇದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಚಿವರಿಗೆ ನಾನು ಕಳಕಳಿ ಮನವಿ ಮಾಡುತ್ತೇನೆ. ನಾಳೆ ಬೆಳಿಗ್ಗೆ ಎಲ್ಲರಿಗೂ ಚರ್ಚೆಗೆ ಕರೆಯರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ತಾವು ಹೇಳಿದ್ದು ರೆಕಾರ್ಡ್‌ನಲ್ಲಿ ಕೂಡ ಬಂದಿದೆ. ಇದನ್ನು ಫ್ಲೋರ್‌ಲೀಡರ್ಸ್ ಅಪೀಲ್ ಮಾಡಿದ್ದಾರೆ ಚರ್ಚೆಗೆ ತೆಗೆದುಕೊಳ್ಳೋಣ ಎಂದು ಹೇಳಿದ್ದೀರಿ. ಪುನಃ ಇದನ್ನು ಪ್ರಸ್ತಾಪ ಮಾಡುವ ಅವಶ್ಯಕತೆ ಇಲ್ಲ. ನೀವು ಆದಷ್ಟು ಅರ್ಜೆಂಟಾಗಿ ಕೂತು ಡಿಸೈಡ್ ಮಾಡಿ ತರಾತುರಿಯಲ್ಲಿ ಸೆಟ್ಲ್ ಮಾಡತಕ್ಕಂಥದ್ದು ಏಕೆ, ಅವರಿಗೂ ಕೆಟ್ಟ ಹೆಸರು ಬೇಡ. ಮತ್ತು ಇದರಲ್ಲಿ ಏನು ಕ್ಲಾಸ್ ಇದೆ ಎಲ್ಲರಿಗೂ ಕೂಡ ಗೊತ್ತಿದೆ. ಪ್ರಮೀಳಾ ನೇಸರ್ಗಿಯವರು ಕೂಡ ಮೊದಲು ಹೇಳಿದರು. ಈಗ ಬದಲಾವಣೆ ಮಾಡಿದ್ದಾರೆ. still we have to apply our mind for this Act.

ಶ್ರೀ ವಾಟಾಳ್ ನಾಗರಾಜ್ : ಸಮಗ್ರವಾಗಿ ತಿಂಗಳುಗಟ್ಟಲೆ ಇದರ ಬಗ್ಗೆ ಚರ್ಚೆ ಮಾಡುವುದು ಬೇಡ. ನಾವೆಲ್ಲ ಕೂತುಕೊಂಡು ಬೆಳಿಗ್ಗೆ ಒಂಬತ್ತು ಗಂಟೆಗೆ ಅವರು ಸಭೆ ಕರೆಯಲಿ. ನಾವೆಲ್ಲಾ ಬೆಂಗಳೂರಿನ ಶಾಸಕರು ಕೂತು ಚರ್ಚೆ ಮಾಡೋಣ. ಅದರ ಮುಖ್ಯಸ್ಥರನ್ನೂ ಕರೆಯೋಣ. ಇದು ಏನೂ ದೊಡ್ಡ ವಿಷಯವಲ್ಲ. ಮಾನ್ಯ ಸಚಿವರು ನಾಳೆ ನಮ್ಮನ್ನು ಕರೆಯುವುದಕ್ಕೆ ತೀರ್ಮಾನ ತೆಗೆದುಕೊಳ್ಳಿ ನಾವೆಲ್ಲ ಬರುತ್ತೇವೆ, ತೀರ್ಮಾನ ಮಾಡೋಣ.

ಶ್ರೀ ಜೆ. ಸಿ. ಮಾಧುಸ್ವಾಮಿ : ಕನಿಷ್ಟ ಬಿಲ್‌ಗಳನ್ನಾದರೂ ಚರ್ಚೆ ಮಾಡಬೇಕು.

ಶ್ರೀ ವಿ. ಸೋಮಣ್ಣ : ಬೆಂಗಳೂರು ನಗರದ ಶಾಸಕರೂ ನಾಳೆ ಬೆಳಿಗ್ಗೆ ಒಂಬತ್ತು ಗಂಟೆಗೆ ಸ್ಪೀಕರ್ ರೂಮಿಗೆ ದಯಮಾಡಿ ಬರಬೇಕು. ಒಂಬತ್ತು ಗಂಟೆಗೆ ನಾನು ಬರುತ್ತೇನೆ.

ಶ್ರೀ ಯು. ಆರ್ ಸಭಾಪತಿ : ನಾಳೆ ಬೆಳಿಗ್ಗೆಯೊಳಗೆ ಬೆಂಗಳೂರು ನಗರದ ಜನತೆಗೆ ಅನುಕೂಲ ಮಾಡಿಕೊಡುವುದಕ್ಕೆ ಹೊರಟಿದ್ದಾರೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ಇದಕ್ಕೆ ನಮ್ಮ ತಕರಾರು ಇದೆ. ಶಾಸನ ಮಾಡುವುದೂ ಕೂಡ ಶಾಸನ ಸಭೆಯಿಂದ ಆಚೆ ಮಾಡುವುದು ಏಕೆ ?

ಶ್ರೀ ಯು. ಆರ್. ಸಭಾಪತಿ : ಪುನಃ ನಾಳೆ ಬೆಳಿಗ್ಗೆ ಮೀಟಿಂಗ್ ಎಂದು ಹೇಳಿದರೆ, ಏನು ಮಾಡುವುದು?

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ಕಾನೂನು ಸಚಿವರೇನು ತಪ್ಪು ದಾರಿಗೆ ಎಳೆದಿಲ್ಲ. ಅವರು ನಾಳೆ ಬೆಳಿಗ್ಗೆ ಕೂತು ಚರ್ಚೆ ಮಾಡೋಣವೆಂದು ಹೇಳಿದ್ದಾರೆ ಅಷ್ಟೇ.

MR. DEPUTY SPEAKER : No discussion on this subject as the government has agreed to postpone it.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಂಸದೀಯ ಸಚಿವರು ಏನು ಹೇಳಿದರು, ಇದನ್ನು ಚರ್ಚೆ ಮಾಡಿ ಅದು ಜೂನ್‌ವರಿಗೆ ಚರ್ಚೆ ಮಾಡತಕ್ಕಂತಹ ಪ್ರಶ್ನೆ ಏನೂ ಇಲ್ಲ, ನಾಳೆ ಹತ್ತು ನಿಮಿಷದಲ್ಲಿ ಚರ್ಚೆ ಮಾಡಿ ತೀರ್ಮಾನ ತಗೆದುಕೊಳ್ಳಬಹುದು. ಒಂದೇ ಒಂದು ತಿದ್ದುಪಡಿ. ಆದ್ದರಿಂದ ನೀವು ಬೆಳಿಗ್ಗೆ ಕರೆದು ಚರ್ಚೆಗೆ ತೆಗೆದುಕೊಳ್ಳಿ.

(ಗೊಂದಲ)

ಉಪಾಧ್ಯಕ್ಷರು : ಅದು ಸರ್ಕಾರಕ್ಕೆ ಬಿಟ್ಟಿದೆ

ಶ್ರೀ ವಿ. ಸೋಮಣ್ಣ : 1994ನೇ ಚುನಾವಣೆ ಹಂತದಲ್ಲಿ ತಂದು ರದ್ದು ಮಾಡಿದರು. ನಾವು ಅದಕ್ಕೆ ತಿದ್ದುಪಡಿ ತಂದು ಜನರಿಗೆ ಅನುಕೂಲ ಮಾಡಬೇಕೆಂದರೆ.

ಶ್ರೀ ವಾಟಾಳ್ ನಾಗರಾಜ್ : ನೀವು ಯಾರಿಗೆ ಬೇಕಾದರೂ ಕರೆಯಿರಿ, ನಾಳೆ ಚರ್ಚೆಯಾಗಲಿ.

ಶ್ರೀ ಎಂ. ವೀರಪ್ಪ ಮೊಯ್ಲಿ : ಈ ತರಹ ಗೊಂದಲಮಯ ಹೇಳಿಕೆಗಳನ್ನು ಕೊಟ್ಟು What is the vested interest in passing this bill in a hurry?

ಶ್ರೀ ವಿ. ಸೋಮಣ್ಣ : 1994ರಲ್ಲಿ ಸನ್ಮಾನ್ಯ ಮೊಯಿಲಿಯವರು ತಂದಾಗ ಯಾವ ಉದ್ದೇಶ ಇತ್ತು?

ಶ್ರೀ ಬಿ. ಸಿ. ಮಾಧುಸ್ವಾಮಿ : ಈ ವಿಷಯವನ್ನು ದಯಮಾಡಿ ಜಂಟಿ ಸದನ ಸಮಿತಿಗೆ ರೆಫರ್ ಮಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದು ಮಕ್ಕಳ ಆಟ ಆದ ಹಾಗೆ ಆಗುತ್ತದೆ. ಒಂದು ಸಾರಿ ಈಗಾಗಲೇ ಕಾನೂನು ಸಚಿವರು ಸ್ಪಷ್ಟವಾಗಿ ಹೇಳಿದ್ದಾರೆ. ಎಲ್ಲಾ ಫ್ಲೋರ್ ಲೀಡರ್ಸ್ ಕರೆಸಿ ಚರ್ಚೆ ಮಾಡಿದ ಮೇಲೆ ಮುಂದೆ ಜೂನ್‌ನಲ್ಲಿ ನಾವು ಈ ಬಿಲ್ಲನ್ನು ಪಾಸ್ ಮಾಡೋಣ. ತರಾತುರಿಯಲ್ಲಿ ತೆಗೆದುಕೊಳ್ಳುವಂತಹ ಅವಶ್ಯಕತೆ ಇಲ್ಲ. ಸದಸ್ಯರ ಹತ್ತಿರ ಏನು ಸಂಶಯ ಇದೆ ಆ ಸಂಶಯ ನಿವಾರಣೆ ಮಾಡುತ್ತೇವೆ ಎನ್ನತಕ್ಕಂತಹ ಮಾತನ್ನು ಸ್ಪಷ್ಟವಾಗಿ ಹೇಳಿದ್ದಾರೆ. ತಾವು ಕೂಡ ಈ ಬಿಲ್ ಕೈ ಬಿಡಿ ಎಂದು ಹೇಳಿದಿರಿ. ಅದು ಬಿಟ್ಟು ಆಯಿತು. ಈಗ ಪುನಃ ಮಂತ್ರಿಗಳು ಎದ್ದೆದ್ದು ನಾನು ಒಂಬತ್ತು ಗಂಟೆಗೆ ಕರೆಯುತ್ತೇನೆ. ನೀವು ಬೇಕಾದವರು ಬನ್ನಿ ಎಂದರೆ ಇದರ ಅರ್ಥವೇನು ? Unless you have got some motive, you cannot hurry up like this ಇದು ಅನಿವಾರ್ಯ. ಅದಕ್ಕಾಗಿ ನಾವು ಅದಕ್ಕೆ ಆಸ್ಪದ ಕೊಡುವುದು ಬೇಡ. ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಒಪ್ಪಿದ್ದಾರೆಂದರೆ ಇಲ್ಲಿಗೆ ಬಿಟ್ಟು ಬಿಡಿ ಮತ್ತೆ ಮುಂದೆ ಚರ್ಚೆಗೆ ತಗೆದುಕೊಳ್ಳೋಣ. ಸಬಾರ್ಡಿನೇಟ್ ಲೆಜಿಸ್ಲೇಷನ್ ಕಮಿಟಿಗೆ ಹೋಗಿ ರೂಲ್ಸ್‌ಫಾರಂ ಆಗಿ ಇಂಪ್ಲಿಮೆಂಟ್ ಆಗಬೇಕಾದರೆ ಆರೇಳು ತಿಂಗಳು ಬೇಕಾಗುತ್ತದೆ. ಎಷ್ಟೋ ಕಾನೂನುಗಳು ಇನ್ನು ರೂಲ್ಸ್ ಫ್ರೇಮ್ ಆಗಿಲ್ಲ. ಇದರ ರೂಲ್ಸ್ ಇಷ್ಟು ತರಾತುರಿಯಲ್ಲಿ ಫ್ರೇಮ್ ಆಗುತ್ತಾ? ಈಗಾಗಲೇ ಅವರು ಹೇಳಿದ್ದಾರೆ. ದಯವಿಟ್ಟು ಸೋಮಣ್ಣನವರೂ ಕೂಡ ಇದಕ್ಕೆ ಒಪ್ಪಿಕೊಳ್ಳಬೇಕು.

ಶ್ರೀ ಜೆ. ಸಿ. ಮಾಧುಸ್ವಾಮಿ: ಬಿಲ್ ಹೌಸ್ ಪ್ರಾಪರ್ಟಿಯಾಗಿದೆ. ನೀವು ಫ್ಲೋರ್ ಲೀಡರ್ಸ್‌ನಲ್ಲಿ ಯಾರಿಗಾದರೂ ಮಾಡಿ, ಜಂಟಿ ಸದನ ಸಮಿತಿ ಎಂದು ಮಾಡಿ, ಅದಕ್ಕೆ ಈ ಬಿಲ್ಲನ್ನು ರೆಫರ್ ಮಾಡಬೇಕು. you cannot just call floor leaders. You must name a committee ನೀವು ಅವರನ್ನೇ ಮಾಡಿ, ನಾವೇನೂ ಅಬ್ಜೆಕ್ಟ್ ಮಾಡುವುದಿಲ್ಲ. ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಆಗಿದೆಯೆಂದು ಹೇಳುತ್ತೀರೋ ಅಥವಾ ವಿತ್‌ಡ್ರಾ ಮಾಡಿದ್ದೀರಾ ಎಂಬ ಬಗ್ಗೆ ನಮಗೆ ಹೇಳಬೇಕು.

ಶ್ರೀ ವಿ. ಸೋಮಣ್ಣ (ಬೆಂಗಳೂರು ನಗರಾಭಿವೃದ್ಧಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ವೀರಪ್ಪಮೊಯ್ಲಿಯವರು ಮಾತನಾಡಿ ಈ ಕಾನೂನಿನಿಂದಾಗಿ ಲ್ಯಾಂಡ್ ಓನರ್ಸ್‌ಗಳಿಗೆ ಎಕರೆಗಟ್ಟಲೇ ಭೂಮಿ ಸಿಗುವ ಸಂಭವವಿದೆ ಎನ್ನುವ ಸಂಶಯವನ್ನು ವ್ಯಕ್ತಪಡಿಸಿದ್ದಾರೆ . ಆದರೆ ನಮ್ಮ ಉದ್ದೇಶವೆಂದರೆ ಯಾರು ಬಡವನಿದ್ದಾನೋ ಅವನಿಗೆ ಟೈಟಲ್‌ಡೀಡ್ ಹಾಗೂ ನಾಗರೀಕ ಸೌಲಭ್ಯಗಳನ್ನು ಕೊಡುವುದೇ ಆಗಿದೆ ಹೊರತು ಬೇರೆ ಉದ್ದೇಶವಿಲ್ಲ. ಇದರಲ್ಲಿ ಯಾರೂ ಶಾಮೀಲಾಗಿಲ್ಲ. ಸುಮಾರು 15-16ವರ್ಷಗಳಿಂದ ಕೆಲವು ಸಮಸ್ಯೆಗಳು ಈ ವಿಚಾರದಲ್ಲಿ ಇತ್ತು. 1994ರ ಅಂತ್ಯದಲ್ಲಿ ಕಾಂಗ್ರೆಸ್ಸಿನವರು ತಂದ 38 (ಸಿ)ಸೆಕ್ಷನ್‌ನಿಂದಾಗಿ 31ಸಾವಿರ ಜನರು ಏನು ಅರ್ಜಿಗಳನ್ನು ಹಾಕಿದ್ದರೋ ಅವರಲ್ಲಿ 12ಸಾವಿರ ಜನರಿಗೆ ಅನುಕೂಲವಾಯಿತು. ಇನ್ನುಳಿದಿರತ್ಕಂಥ ಸುಮಾರು 20ಸಾವಿರ ಜನರಿಗೆ ಹೊಸ ಕಾನೂನಿನಡಿಯಲ್ಲಿ ಟೈಟಲ್‌ಡೀಡ್ ಹಾಗೂ ನಾಗರಿಕ ಸೌಲಭ್ಯಗಳನ್ನು ಕೊಡಬೇಕು ಎನ್ನುವ ಉದ್ದೇಶದಿಂದಲೇ ಈ ಬಿಲ್ ತಂದಿದ್ದೇವೆಯೇ ಹೊರತು ದುರುದ್ದೇಶವಿಲ್ಲ. ಆಹೊತ್ತೆ ಕಾಂಗ್ರೆಸ್‌ನವರು ಇದನ್ನು ತಂದಿದ್ದರೆ ಎಲ್ಲರಿಗೂ ಅನಕೂಲವಾಗುತ್ತಿತ್ತು. ಆದರೆ ಕೆಲವು ಸ್ಪೆಸಿಫಿಕ್ ವಿಚಾರಗಳಿಗೆ ಮಾತ್ರ ಅಂದು ಅಮೆಂಡ್‌ಮೆಂಟ್ ತಂದಿದ್ದ ಕಾರಣದಿಂದ ಎಲ್ಲರಿಗೂ ಅದು ಅನಕೂಲವಾಗಿರಲಿಲ್ಲವಾದ್ದರಿಂದ ಇಂದು ನಾವು ಬಡವರಿಗೆ ಟೈಟಲ್ ಡೀಡ್ ಹಾಗೂ ನಾಗರೀಕ ಸೌಲಭ್ಯಗಳನ್ನು ಕೊಡುವ ಸಲುವಾಗಿ ಈ ಬಿಲ್ ತಂದಿದ್ದೇವೆ. ಯಾರು ಹೌಸಿಂಗ್ ಸೊಸೈಟಿಗಳನ್ನು ಮಾಡಿಕೊಂಡಿದ್ದರೋ ಅಂಥವುಗಳು ಜಿ.ವಿ.ಕೆ. ರಾವ್ ಕಮಿಟಿಗೆ ಹೋದಾಗ ಅಲ್ಲಿ ಸೊಸೈಟಿಗಳವರು ಮಾಡಿರುವುದು ಯಾವುದೂ ತಪ್ಪಿಲ್ಲವೆದು ಹೇಳಿದ ಮೇಲೆ ಅಂಥವುಗಳಿಗೆ ನಿಮ್ಮ 38 (ಸಿ)ನಿಂದಾಗಿ ಅನುಕೂಲವಾಯಿತು. ಆದರೆ ಸೊಸೈಟಿ ವ್ಯಾಪ್ತಿಗೆ ಬರದ ಯಾವನೋ ಒಬ್ಬ ಭೂಮಿಯನ್ನು ಮಾರಿ ಹೊರಟು ಹೋಗಿರುತ್ತಾನೆ. ಆದರೆ ಭೂಮಿಯಲ್ಲಿ ಬಡವ ಮನೆ ಕಟ್ಟಿಕೊಂಡು ರೆಗ್ಯುಲರೈಸ್ ಮಾಡಿಸಿಕೊಳ್ಳುವ ಸಲುವಾಗಿ ಅರ್ಜಿ ಹಾಕಿಕೊಂಡಿದ್ದಾನೆ. ಇಂಥವರೇ ಸುಮಾರು 20ಸಾವಿರ ಜನರಿಗಿಂತ ಹೆಚ್ಚಿದ್ದಾರೆ. ಆದರೆ 1998ನಲ್ಲೂ ಕೂಡ ಆ ಬಗ್ಗೆ ರೆಸಲ್ಯೂಷನ್ ಆಗಿಲ್ಲ. ಆದರೆ ಅವರುಗಳು ಈಗಾಗಲೇ ಡೆವಲಪ್ ಆಗಿರುವ ಏರಿಯಾಗಳಲ್ಲಿರುವುದರಿಂದ ಅವರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಈ ಬಿಲ್‌ನ್ನು ತಂದಿದ್ದೇವೆ. ನಾನೇನು ಕತ್ತಲೆಯಲ್ಲಿ ಕುಳಿತುಕೊಂಡು ಈ ಶಾಸನಕ್ಕೆ ಪಾಸ್ ಮಾಡಿಕೊಂಡು ಏನಾದರೂ ಮಾಡಬೇಕು ಎನ್ನುವ ಉದ್ದೇಶ ನಮಗಿಲ್ಲ. ಇದರ ಬಗ್ಗೆ ಈಗಾಗಲೇ ಕಾನೂನು ಸಚಿವರೂ ಕೂಡ ಹೇಳಿದ್ದಾರೆ. ಈ ಬಿಲ್ ಪಾಸ್ ಮಾಡುವುದರಿಂದ ಬಡವರಿಗೆ ಅನುಕೂಲವಾಗಿ ಸರ್ಕಾರಕ್ಕೆ ಒಳ್ಳೆಯ ಹೆಸರು ಎಲ್ಲಿ ಬಂದುಬಿಡುತ್ತದೋ ಎನ್ನುವ ಭಾವನೆ

ವಿರೋಧ ಪಕ್ಷದವರಿಗಿದ್ದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ. ಆದರೆ ಒಂದಂತೂ ಸತ್ಯ ಅನೇಕ ವರ್ಷಗಳಿಂದ ಬೆಂಗಳೂರಿನ ಸುತ್ತಮುತ್ತ ಬಡವರುಗಳು ಮನೆಗಳನ್ನು ಕಟ್ಟಿಕೊಂಡು ಕುಡಿಯುವ ನೀರಿಗಾಗಿ, ಶೌಚಾಲಯ ವ್ಯವಸ್ಥೆಗಾಗಿ ಪರಿತಪಿಸುತ್ತಿದ್ದಾರೆ. ಒಳಚರಂಡಿಗೋಸ್ಕರ ನಗರಪಾಲಿಕೆಗೆ ಈ ಜನರು ಹೋದರೆ ಬಿ.ಡಿ.ಎ. ನಿಂದ ಎನ್.ಓ.ಸಿ. ತೆಗೆದುಕೊಂಡು ಬನ್ನಿ ಎನ್ನುತ್ತಾರೆ. ಬಿ.ಡಿ.ಎ. ಗೆ ಹೋದರೆ ರೀಕನ್ವೆ ಆಗಬೇಕು ಎಂದು ಹೇಳುತ್ತಾರೆ. ಈ ರೀತಿಯ ತೊಳಲಾಟದಲ್ಲಿ ಸಿಲುಕಿರುವ ಬಡವನಿಗೆ ನಾವು ಅನುಕೂಲ ಮಾಡಿಕೊಡಬೇಕು ಎನ್ನುವ ಉದ್ದೇಶದಿಂದ ಈ ಬಿಲ್ ತಂದಿದ್ದರೂ ಕೂಡ ವಿರೋಧ ಪಕ್ಷದವರು ಇನ್ನೇನೋ ಹುಡುಕಿ ಮೊಸರಲ್ಲಿ ಕಲ್ಲಿದೆ ಎನ್ನುವ ಭಾವನೆಯನ್ನು ತಳೆದಿರುವುದು ದುರದೃಷ್ಟಕರ. ಆದರೆ ನಾವು ಜನರುಗಳಿಗೆ ಹೇಳುತ್ತೇವೆ, ಏನೆಂದರೆ ಬಡವರಿಗೆ ಅನುಕೂಲವಾಗುವ ಕಾನೂನನ್ನು ತಂದರೆ ಅದನ್ನು ವಿರೋಧ ಪಕ್ಷದವರು ತಪ್ಪಿಸಿದ್ದಾರೆಯಾದ ಕಾರಣ ದಯ್ಯುಮಾಡಿ ನೀವೇ ಇದರ ಬಗ್ಗೆ ಅವರಿಗೆ ತೀರ್ಮಾನ ಕೊಡಿ ಎಂದು ಹೇಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ : ಕಳೆದ ನಾಲ್ಕೂವರೆ ವರ್ಷದಿಂದ ಬಡವರ ಬಗ್ಗೆ ನಿಮಗೆ ಯೋಚನೆ ಇರಲಿಲ್ಲವೆ? ಆಗ ನಿದ್ದೆ ಮಾಡುತ್ತಿದ್ದಿರಾ? ಈಗ ಇದ್ದಕ್ಕಿದ್ದ ಹಾಗೆ ಏಕಾಏಕಿ ಯೋಚನೆ ಮಾಡದೇ ಬಿಲ್ ತಂದಿರುವ ಉದ್ದೇಶ ಏನು?

ಶ್ರೀ ಎಲ್. ಆರ್. ಶಿವರಾಮೇಗೌಡ : ಈಗಲಾದರೂ ಬಡವರಿಗೆ ಅನುಕೂಲ ಮಾಡೋಣವೆಂದರೆ ಅಡ್ಡಗಾಲು ಹಾಕಿ ವೀರಪ್ಪಮೊಯ್ಲಿಯವರು ಹಾಗೂ ಕಾಗೋಡು ತಿಮ್ಮಪ್ಪನವರು ಬಡವರ ವಿರೋಧಿಗಳು ಎಂಬುದನ್ನು ಸಾಬೀತು ಮಾಡಿಕೊಟ್ಟಿದ್ದಾರೆ.

ಶ್ರೀ ಎಂ. ವೀರಪ್ಪಮೊಯ್ಲಿ : ಒಬ್ಬ ಸದಸ್ಯರಾದವರು ಸದನದಲ್ಲಿ ಗೌರವಯುತವಾಗಿ ಮಾತನಾಡುವುದನ್ನು ಕಲಿಯಬೇಕು. ಅದನ್ನು ಬಿಟ್ಟು ಈ ರೀತಿ ಮಾತನಾಡುವುದು ಸರಿಯಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ : ನಾವೇನೂ ಹುಚ್ಚುಚ್ಚಾಗಿ ಮಾತನಾಡುತ್ತಿಲ್ಲ. ನೀವು ಅಂದು 38(ಸಿ)ಗೆ ಅಮೆಂಡ್‌ಮೆಂಟ್ ತಂದಾಗ ಬೇಡವೆಂದರೆ ಏನೇನೋ ಕಥೆಗಳನ್ನು ಹೇಳಿ ಒಪ್ಪಿಕೊಳ್ಳಬೇಕು ಎಂದು ಬಿಟ್ಟಿರಿ. ಈಗ ಸರ್ಕಾರ ತಂದಿರುವ ಅಮೆಂಡ್‌ಮೆಂಟ್‌ಗೆ ಬೇಡವೆಂದು ಹೇಳುತ್ತೀರಿ ಮೊಯ್ಲಿಯವರೇ, ನೀವೊಬ್ಬರೇ ಬಡವರ ಪರ ಇರುವುದು ಎಂದು ತಿಳಿದುಕೊಳ್ಳಬೇಡಿ ನಾವು ಕೂಡ ಬಡವರ ಪರವಾಗಿಯೇ ಇರುವುದು.

ಶ್ರೀ ವೀರಪ್ಪ ಮೊಯ್ಲಿ : ಯಾರು ಬಡವರ ಪರ ಇರುವುದು ಎಂಬುದು ಇಡೀ ಜಗತ್ತಿಗೆ ಗೊತ್ತಿರುವ ವಿಚಾರ. ಮಾತನಾಡುವಾಗ ನಾಲಿಗೆಗೆ ಸ್ವಲ್ಪ ಹಿಡಿತ ಇರಬೇಕು.

ಶ್ರೀ ಎಲ್. ಆರ್. ಶಿವರಾಮೇಗೌಡ : ನೀವು ಏನು ಬೇಕಾದರೂ ಮಾತನಾಡಬಹುದೇ?

ಉಪಾಧ್ಯಕ್ಷರು : ನೀವಿಬ್ಬರೂ ಕುಳಿತುಕೊಳ್ಳಿ

(ಅ) ಕರ್ನಾಟಕ ಸಂಸದೀಯ ಕಾರ್ಯದರ್ಶಿಗಳ ಭತ್ಯೆ (ತಿದ್ದುಪಡಿ)ವಿಧೇಯಕ, 1999

ಪರ್ಯಾಲೋಚನೆ ಪ್ರಸ್ತಾವ

ಶ್ರೀ ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ, 1999ರ ಕರ್ನಾಟಕ ಸಂಸದೀಯ ಕಾರ್ಯದರ್ಶಿಗಳ ಭತ್ಯೆ (ತಿದ್ದುಪಡಿ) ವಿಧೇಯಕವನ್ನು